ಸಂಪುಟ: 05 ಸಂಚಿಕೆ: 38 ಪುಟಗಳು: 08 ಮಂಗಳವಾರ 22 ಏಪ್ರಿಲ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಮುಂಜಾನೆ ಮಾತು

ಯಶಸ್ಸಿನ ವ್ಯಾಖ್ಯಾನವು ಸಾಕಷ್ಟು ಪ್ರಬಲವಾಗಿದ್ದರೆ, ವೈಫಲ್ಯವು ಎಂದಿಗೂ ನನ್ನನ್ನು ಹಿಂದಿಕ್ಕುವುದಿಲ್ಲ.

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಅಧಿಕಾರಿಗಳ ಕ್ರಮಕ್ಕೆ ರೊಚ್ಚಿಗೆದ್ದ ಪರಿಸರ ಪ್ರೇಮಿಗಳು

• ಉದಯವಾಹಿನಿ, ಚಾಮರಾಜನಗರ

ಪ್ರಕೃತಿ ಸಂರಕ್ಷಣೆ ಹಾಗೂ ತ್ಯಾಜ್ಯ ನಿರ್ವಹಣೆ ಉದ್ದೇಶದೊಂದಿಗೆ 'ಹಸಿರು ನಾಳೆ ಮಲೆಮಹದೇಶ್ವರಬೆಟ್ಟ'ಯೋಜನೆ ಜಾರಿಯಲ್ಲಿರುವ ನಡುವೆಯೂ ಏ.24ರಂದು ನಡೆಯಲಿರುವ ರಾಜ್ಯ ಕ್ಯಾಬಿನೆಟ್ ಸಭೆ ಸಿದ್ಧತೆಗಾಗಿ ಮಹದೇಶ್ವರ ಬೆಟ್ಟದಲ್ಲಿ ಕೆಲ ತೆಂಗಿನ ಮರಗಳನ್ನು ಕಡಿಯಲಾಗಿದ್ದು, ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಹನೂರು ತಾಲ್ಲೂಕಿನ ಮಲೆಮಹದೇಶ್ವರ ಬೆಟ್ಟದ 108 ಅಡಿ ಪ್ರತಿಮೆಯ ದೀಪದಗಿರಿ ಒಡ್ಡಿನಲ್ಲಿ ಸಚಿವ ಸಂಪುಟ ಸಭೆ ನಡೆಸಲು ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ, ಈ ಪ್ರದೇಶವು ಎತ್ತರದಲ್ಲಿದ್ದು ಬಿರುಗಾಳಿ ಬೀಸುವ ಸಾಧ್ಯತೆ ಹಾಗೂ ಮಳೆ ಸಂಭವ ಇರುವ ಹಿನ್ನೆಲೆ ಸಭೆ ನಡೆಸಲು ತೊಂದರೆ ಆಗಬಹುದು ಎಂಬ ಕಾರಣದಿಂದ ಸಭೆಯ ಸ್ಥಳವನ್ನು ಶ್ರೀ ಕ್ಷೇತ್ರದ ನೂತನ 376 ವಸತಿ ಗೃಹದ ಮುಂಭಾಗದ ಖಾಲಿ ನಿವೇಶನಕ್ಕೆ ವರ್ಗಾಯಿಸಲಾಗಿದೆ. ಈ ಸ್ಥಳ ಸಿದ್ಧಪಡಿಸಲು ಕೆಲ ತೆಂಗಿನ ಮರಗಳನ್ನು ಕಡಿದು ಹಾಕಲಾಗಿದ್ದು, ಈ ಕ್ರಮಕ್ಕೆ ವಿರೋಧ ವ್ಯಕ್ತವಾಗಿದೆ. 'ಹಸಿರು ನಾಳೆ' ಯೋಜನೆ ಅರ್ಥವೇನು ಎಂದು ಸ್ಥಳೀಯರು ಪ್ರಶ್ನಿಸಿದ್ದಾರೆ.

**ಏನಿದು ಯೋಜನೆ;** ಜಿಲ್ಲಾಧಿಕಾರಿ ಶಿಲ್ಪಾನಾಗ್, ಮೈಸೂರು ಕಾವೇರಿ ಪ್ರಾದೇಶಿಕ ಸಂಸ್ಥೆ ಉಪಾಧ್ಯಕ್ಷ ವಿಜಯ ಭಾಸ್ಕರ್, ಜಿಪಂ ಸಿಇಒ ಮೋನಾ ರೋತ್ ಸೇರಿದಂತೆ ಹಲವು ಅಕಾರಿಗಳ ಸಮ್ಮುಖದಲ್ಲಿ 'ಹಸಿರು ನಾಳೆ' ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. 'ಎಂವೈಕೆಪಿಐಎಸ್ (ಮೈಕಾಫ್ಸ್)'ನ ಕಾರ್ಯನಿರ್ವಾಹಕ ನಿರ್ದೇಶಕ ಅಶ್ರಫ್ ಉಲ್ ಹಸನ್, ಕ್ಷೇತ್ರಾಭಿವೃದ್ ಪ್ರಾಕಾರದ ಕಾರ್ಯದರ್ಶಿ ಎ.ಇ.ರಘು ಮತ್ತು ಗ್ರಾಪಂ ಅಧಿಕಾರಿಗಳು ಈ ಮಹತ್ವದ ಯೋಜನೆಯಲ್ಲಿ ಭಾಗಿಯಾಗಿದ್ದಾರೆ. ಹೀಗಿರುವಾಗ ಒಂದೆಡೆ ಹಸಿರು ಬೆಟ್ಟದ ಕನಸು, ಮತ್ತೊಂದೆಡೆ ಮರಗಳ ನಾಶ'', ಇದುವೆ ನಿಜವಾಗಿಯೂ ಪರಿಸರ ಸಂರಕ್ಷಣೆ ದಾರಿ ತೋರುತ್ತದೆಯಾ ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಕ್ಯಾಬಿನೆಟ್ ಸಭೆಗಾಗಿ ತೆಂಗಿನ ಮರಗಳ ಹನನ

**ರೈತ ಸಂಘ ಮುಖಂಡರ ಪ್ರತಿಭಟನೆಗೆ ತಡೆ:** ಏತನ್ಮಧ್ಯೆ, ಮಲೆಮಹದೇಶ್ವರ ಬೆಟ್ಟದಲ್ಲಿಏ.24ರಂದು ಸಚಿವ ಸಂಪುಟ ಸಭೆಯ ಸಿದ್ಧತೆಗೆ ಕೆಲ ತೆಂಗಿನ ಮರಗಳನ್ನು ಕಡಿದು ಹಾಕಲಾಗಿದೆ ಎಂದು ಆರೋಪಿಸಿ ರೈತ ಸಂಘದ ಮುಖಂಡರು ಹನೂರು ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ರಸ್ತೆ ತಡೆದು ಪ್ರತಿಭಟನೆಗೆ ಮುಂದಾದರು. ಈ ವೇಳೆ ಪೊಲೀಸರು ಮಧ್ಯೆ ಪ್ರವೇಶಿಸಿ ಪ್ರತಿಭಟನೆ ಮಾಡದಂತೆ ಮನವೊಲಿಸಿದರು.

ಈ ವೇಳೆ ರೈತರು ಮಾತನಾಡಿ, ಸಚಿವ ಸಂಪುಟ ಸಭೆ ನಮ್ಮ ತಾಲ್ಲೂಕಿನಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಆದರೆ ಸಭೆಗೆ ಸ್ಥಳ ಬದಲಾವಣೆ ನೆಪದಲ್ಲಿ ಮರಗಳನ್ನು ಕಡಿದಿರುವುದು ಖಂಡನೀಯ. ದೀಪದಗಿರಿ ಒಡ್ಡುವಿನ 108 ಅಡಿ ಮಹದೇಶ್ವರಸ್ವಾಮಿ ಪ್ರತಿಮೆ ಆವರಣದಿಂದ ಸಭೆಯನ್ನು ನೂತನ 376 ವಸತಿಗೃಹದ ಮುಂಭಾಗದ ಖಾಲಿ ನಿವೇಶನಕ್ಕೆ ಸ್ಥಳಾಂತರ ಮಾಡಿ ಅಲ್ಲಿದ್ದ ತೆಂಗಿನ ಮರಗಳನ್ನು ಕಡಿದು ಹಾಕಲಾಗಿದೆ. ಇದಕ್ಕೆ ಯಾರು ಅನುಮತಿ ನೀಡಿದ್ದಾರೆ ಎಂದು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

## ಧರ್ಮಸ್ಥಳದ ಟೀಕೆಗೆ ಭಯಬೇಡ, ಡಿಕೆಶಿ ನಿಮ್ಮ ಹಿಂದೆ ನಿಲ್ಲಲು ಸಿದ್ಧ

• ಉದಯವಾಹಿನಿ, ಬೆಂಗಳೂರು

ನಿಮಗೆಲ್ಲ ಗೊತ್ತಿರೋ ಹಾಗೆ, ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಪ್ರಕರಣ ಸಾಕಷ್ಟು ಚರ್ಚೆಯಾಗುತ್ತಿದೆ. ಒಂದಿಷ್ಟು ದಿನ ಕಣ್ಮರೆಯಾಗಿದ್ದ ಈ ಪ್ರಕರಣ ಖಾಸಗಿ ಯೂಟ್ಯೂಬರ್ ಮಾಡಿದ ವಿಡಿಯೋದಿಂದ ಮತ್ತೆ ತಿರುವು ಪಡೆದುಕೊಂಡಿತ್ತು, ಜನರ ಗಮನವನ್ನು ಸೆಳೆದಿತ್ತು. ಧರ್ಮಸ್ಥಳದ ಬಗ್ಗೆ ಪರ ವಿರೋಧ ಚರ್ಚೆಯಾಗುತ್ತಿತ್ತು. ಕೃತ್ಯವನ್ನು ಎಸೆಗಿದವರು ಯಾರು ಎಂದು ಇನ್ನೂ ನಿಗೂಢವಾಗಿದೆ ಈಗ ಯಾಕೆ ಧರ್ಮಸ್ಥಳದ ವಿಷ್ಯಾವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಅಂದ್ರೆ.. ನಿನ್ನೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಧರ್ಮಸ್ಥಳಕ್ಕೆ ಭೇಟಿ ನೀಡಿ, ಧರ್ಮದರ್ಶಿಗಳ ಆಶೀರ್ವಾದ ಪಡೆದುಕೊಂಡಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ವಿಶೇಷ ಪೂಜೆ ಕೂಡ ಸಲ್ಲಿಸಿದ್ದಾರೆ. ಕೆಲ ಹೊತ್ತು ವಿರೇಂದ್ರ ಹೆಗೆಡೆಯವರ ಜೊತೆ ಮಾತುಕತೆಯನ್ನು ಕೂಡ ನಡೆಸಿದ್ದಾರೆ.. ತದನಂತರ ಭಕ್ತಾಧಿಗಳ ಅನುಕೂಲಕ್ಕಾಗಿ ನೂತನ ಕಲ್ಯಾಣ ಮಂಟಪ ಉದ್ಘಾಟನೆ ಬಳಿಕ ಮಾತಾಡಿದ ಡಿಸಿಎಂ ಡಿಕೆ ಶಿವಕುಮಾರ್ ಅವರು, ಪುಣ್ಯ ಸ್ಥಳದ ಬಗ್ಗೆ ಕೊಂಡಾಡಿದ್ದಾರೆ. ಹೀಗೆ ಮಾತಾಡ್ತ ಧರ್ಮಸ್ಥಳದ ಬಗ್ಗೆ ಬರುವ ಟೀಕೆಗಳ ಬಗ್ಗೆ ಯಾವುದೇ ಭಯ ಬೇಡ. ಟೀಕೆಗಳು ಸಾಯುತ್ತವೆ ನಾವು ಮಾಡುವ ಕಾರ್ಯಗಳು ಉಳಿಯುತ್ತವೆ. ಯಾವುದಕ್ಕೂ ಅಂಜುವ ಸಂದರ್ಭವೇ ಇಲ್ಲ. ನನ್ನತಂಹ ನೂರಾರು ಡಿಕೆ ಶಿವಕುಮಾರ್ ಗಳು ನಿಮ್ಮ ಹಿಂದೆ ನಿಲ್ಲಲು ಸಿದ್ದರಿದ್ದಾರೆ ಎಂದು ವಿರೇಂದ್ರ ಹೆಗ್ಗಡೆಯರಿಗೆ ಭರವಸೆ ನೀಡಿದ್ದಾರೆ.

## ಆಮದು ಮೇಲೆ 12% ಸುಂಕ ಉಕ್ಕು ಕ್ಷೇತ್ರದ ಹಿತಕ್ಕೆ ದಿಟ್ಟ ಕ್ರಮ

• ಉದಯವಾಹಿನಿ, ಬೆಂಗಳೂರು

ದೇಶೀಯ ಉಕ್ಕು ಉದ್ಯಮದ ಹಿತರಕ್ಷಣೆ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ರಕ್ಷಣಾತ್ಮಕ ಕ್ರಮ ಕೈಗೊಂಡಿದೆ. ಉಕ್ಕು ಆಮದಿನ ಮೇಲೆ ಕೇಂದ್ರ 12% ರಷ್ಟು ಸುರಕ್ಷತಾ ಸುಂಕವನ್ನು ವಿಧಿಸಿದೆ. ಈ ಕ್ರಮಕ್ಕಾಗಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಮಿಶ್ರಲೋಹವಲ್ಲದ ಮತ್ತು ಮಿಶ್ರಲೋಹದ ಉಕ್ಕಿನಿಂದ ತಯಾರಿಸಿದ ಕೆಲವು ಉತ್ಪನ್ನಗಳ ಆಮದಿನ ಮೇಲೆ 12% ರಷ್ಟು ಸುರಕ್ಷತಾ ಸುಂಕ ವಿಧಿಸುವ ನಿರ್ಧಾರವನ್ನು ಕೇಂದ್ರ ಕೈಗೊಂಡಿದೆ. ಇದಕ್ಕೆ ಸಂಬಂಧಿಸಿ ಕೇಂದ್ರವು ಅಧಿಸೂಚನೆಯನ್ನು ಹೊರಡಿಸಿದೆ.

ಕೇಂದ್ರದ ಈ ಉಪಕ್ರಮವು ದೇಶೀಯ ಉಕ್ಕು ಉದ್ಯಮಕ್ಕೆ ಪ್ರೋತ್ಸಾಹದ ಜೊತೆಗೆ ಮತ್ತಷ್ಟು ಶಕ್ತಿ ತುಂಬಲಿದೆ ಎಂದು ಅವರು ಹೇಳಿಕೊಂಡಿದ್ದಾರೆ.

ಈ ನಿರ್ಧಾರವನ್ನು ಸಚಿವ ಹೆಚ್‌ಡಿಕೆ ಸ್ವಾಗತಿಸಿದ್ದು, ಆಮದು ಹೆಚ್ಚಳದ ಪ್ರತಿಕೂಲಕರ ಪರಿಣಾಮಗಳಿಂದ ದೇಶೀಯ ಉಕ್ಕು ತಯಾರಕರನ್ನು ರಕ್ಷಿಸಲು ಮತ್ತು ಮಾರುಕಟ್ಟೆಯಲ್ಲಿ ನ್ಯಾಯಯುತ ಸ್ಪರ್ಧೆಯನ್ನು ಖಾತ್ರಿಪಡಿಸಿಕೊಳ್ಳಲು ಈ ಕ್ರಮವು ಸಕಾಲಿಕ ಮತ್ತು ಅಗತ್ಯ ಕ್ರಮವಾಗಿದೆ. ಈ ಕ್ರಮವು ದೇಶೀಯ ಉತ್ಪಾದಕರಿಗೆ, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉಕ್ಕು ಉದ್ಯಮಗಳಿಗೆ ಅನುಕೂಲವಾಗಿದೆ ಹಾಗೂ ಹೆಚ್ಚುತ್ತಿರುವ ಆಮದುಗಳಿಂದ ಅಪಾರ ಒತ್ತಡವನ್ನು ಎದುರಿಸುತ್ತಿರುವವರಿಗೆ ನಿರ್ಣಾಯಕ ಪರಿಹಾರವನ್ನು ನೀಡುತ್ತದೆ. ಸುರಕ್ಷತಾ ಸುಂಕವು ಮಾರುಕಟ್ಟೆ ಸ್ಥಿರತೆಯನ್ನು ಮಾತು ಸ್ಥಾಪಿಸಲು ಮತ್ತು ದೇಶೀಯ ಉದ್ಯಮದ ವಿಶ್ವಾಸವನ್ನು ಬಲಪಡಿಸಲು ಸಹಾಯ ಮಾಡುತ್ತದೆ ಎಂದು ಅವರು ಪ್ರತಿಪಾದಿಸಿದ್ದಾರೆ.

## ನಿವೃತ್ತ ಡಿಜಿಪಿ ಭೀಕರ ಹತ್ಯೆ

● ಪತ್ನಿ ಪುತ್ರಿ ವಶಕ್ಕೆ ● ತಾಯಿ-ತಂಗಿ ವಿರುದ್ಧ ಪುತ್ರ ಕಾರ್ತಿಕೇಶ್ ದೂರು, ಬಂಧನ ● ತಾಯಿ ಬೆದರಿಕೆಗೆ ಹೆದರಿ ತಂದೆ ತನ್ನ ಸಹೋದರಿ ಮನೆಯಲ್ಲಿದ್ದರು; ● ತನಿಖೆ ನಂತರವೇ ಯಾರು ಕೊಂದರು ಎಂಬುದು ತಿಳಿಯಲಿದೆ: ಜಿ ಪರಮೇಶ್ವರ





ಹತ್ಯೆ ತನಿಖೆ ನಡೆಸಿ ಸತ್ಯಾಸತ್ಯತೆ ತಿಳಿಸಿ...



• ಉದಯವಾಹಿನಿ, ಬೆಂಗಳೂರು

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ಮತ್ತು ಪುತ್ರಿಯ ಮೇಲೆ ಎಫ್ ಐಆರ್ ದಾಖಲಾಗಿದೆ.

ಓಂ ಪ್ರಕಾಶ್ ಅವರ ಪುತ್ರ ಕಾರ್ತಿಕೇಶ್ ನೀಡಿದ ದೂರಿನ ಮೇರೆಗೆ ತಾಯಿ ಪಲ್ಲವಿ, ಸಹೋದರಿ ಕೃತಿ ವಿರುದ್ಧ ಹೆಚ್‌ಎಸ್ ಆರ್ ಲೇಔಟ್ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 103(ಕೊಲೆ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಪತ್ನಿ ಪಲ್ಲವಿ ಮತ್ತು ಕೃತಿಯನ್ನು ಪೊಲೀಸರು ಬಂಧಿಸಿದ್ದಾರೆಂದು ತಿಳಿದುಬಂದಿದೆ.

ಕಳೆದ ಒಂದು ವಾರದಿಂದ ತಾಯಿ ಪಲ್ಲವಿಯನ್ನು ತಂದೆಯನ್ನು ಹತ್ಯೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದರು. ಕೊಲೆ ಬೆದರಿಕೆ ಹಾಕುತ್ತಿದ್ದರಿಂದ ಸಹೋದರಿ ಸರಿತಾ ಮನೆಗೆ ತಂದೆ ಹೋಗಿದ್ದರು. ಎರಡು ದಿನಗಳ ಬಳಿಕ ತಾಯಿ ಹಾಗೂ ತಂಗಿ ಇಬ್ಬರೂ ಅಲ್ಲಿಗೆ ಹೋಗಿ, ಪೀಡಿಸಿ ಕರೆ ತಂದಿದ್ದರು. ಏ.20ರ ಸಂಜೆ 5 ಗಂಟೆಯ ವೇಳೆ ನಾನು ದೊಮ್ಮಲೂರಿನಲ್ಲಿರುವ ಗಾಲ್ಫ್ ಅಸೋಸಿಯೇಷನ್‌ನಲ್ಲಿದ್ದಾಗ ನಮ್ಮ ಮನೆಯ ಪಕ್ಕದ ಮನೆಯವರು ಕರೆ ಮಾಡಿ ನಿಮ್ಮ ತಂದೆಯ ದೇಹ ಕೆಳಗಡೆ ಬಿದ್ದಿದೆ ಎಂದು ತಿಳಿಸಿದರು. ಕೂಡಲೇ ಅಲ್ಲಿಂದ ಹೊರಟು ಸಂಜೆ 5:45ಕ್ಕೆ ಮನೆಗೆ ಆಗಮಿಸಿದೆ. ಈ ವೇಳೆ ಸ್ಥಳದಲ್ಲಿ ಪೊಲೀಸರು ಮತ್ತು ಸಾರ್ವಜನಿಕರು ಇದ್ದರು. ತಂದೆಯ ತಲೆಯಿಂದ ರಕ್ತ ಬರುತ್ತಿತ್ತು. ದೇಹದ ಪಕ್ಕದಲ್ಲಿ ಬಾಟಲ್ ಮತ್ತು ಚಾಕು ಇತ್ತು. ನನ್ನ ತಾಯಿ ಪಲ್ಲವಿ ಮತ್ತು ತಂಗಿ ಕೃತಿ ಖಿನ್ನತೆಯಿಂದ ಬಳಲುತ್ತಿದ್ದು ಅವರೇ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕಾರ್ತಿಕೇಶ್ ದೂರಿನಲ್ಲಿ ಹೇಳಿಕೊಂಡಿದ್ದಾರೆ. ಈ ನಡುವೆ ಪ್ರಕರಣ ಸಂಬಂಧ ಪ್ರತಿಕ್ರಿಯೆ ನೀಡಿರುವ ಗೃಹ ಸಚಿವ ಜಿ. ಪರಮೇಶ್ವರ್ ಅವರು, ಮಾಜಿ ಡಿಜಿಪಿ ಓಂ ಪ್ರಕಾಶ್ ಅವರನ್ನು ಕೊಲೆ ಮಾಡಲಾಗಿದೆ. ಅವರ ಪತ್ನಿ (ಪಲ್ಲವಿ) ಅವರನ್ನು ಕೊಲೆ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಈ ಬಗ್ಗೆ ವಿವರವಾದ ತನಿಖೆ ಬಳಿಕ ಸತ್ಯಾಸತ್ಯತೆ ಹೊರಬರಲಿದೆ ಎಂದು ಹೇಳಿದ್ದಾರೆ.

ಇನ್ನು ಓಂ ಪ್ರಕಾಶ್ ಅವರ ಅಂತ್ಯಕ್ರಿಯೆ ಮತ್ತು ಅಂತ್ಯಕ್ರಿಯೆ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿ ನಡೆಯಲಿದೆ.

**ಪುತ್ರನಿಂದ ದೂರು ಪಡೆದು ಎಫ್‌ಐಆರ್:** ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ್ದ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಶ್ ಕುಮಾರ್ ವಿಕಾಶ್, ''ಸಂಜೆ 4:30ರ ಸುಮಾರಿಗೆ ಬಂದ ಮಾಹಿತಿ ಆಧರಿಸಿ ಹೊಯ್ಸಳ ಸಿಬ್ಬಂದಿ ಬಂದು ಗಮನಿಸಿದಾಗ ಹತ್ಯೆಯ ವಿಚಾರ ತಿಳಿದುಬಂದಿದೆ. ಆಯುಧ ಬಳಸಿ ದೈಹಿಕ ಹಲ್ಲೆಗೈದಿರುವುದು ಕಂಡು ಬಂದಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಮತ್ತಷ್ಟು ವಿಚಾರಗಳು ತಿಳಿಯಲಿವೆ'' ಎಂದು ಮಾಹಿತಿ ನೀಡಿದ್ದರು.

''ಮನೆಯಲ್ಲಿ ಓಂ ಪ್ರಕಾಶ್ ಅವರು ಸೇರಿದಂತೆ ಮೂವರು ಇದ್ದರು. ಅದರಲ್ಲಿಯೇ ಒಬ್ಬರು ಹತ್ಯೆಯ ಕುರಿತು ಮಾಹಿತಿ ನೀಡಿದ್ದಾರೆ. ಮನೆಯಲ್ಲಿ ಒಂದು ಆಯುಧವನ್ನು ಜಪ್ತಿ ಮಾಡಲಾಗಿದೆ. ಕಟ್ಟಡವನ್ನು ಪೊಲೀಸ್ ಸುಪರ್ದಿಗೆ ಪಡೆದಿದ್ದೇವೆ. ಸದ್ಯ ಓಂ ಪ್ರಕಾಶ್ ಮಗನಿಂದ ದೂರು ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗುತ್ತಿದೆ. ಮುಂದಿನ ತನಿಖೆ ಕೈಗೊಂಡಿದ್ದೇವೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತರು ತಿಳಿಸಿದ್ದರು.

### ತನಿಖೆ ವೇಳೆ ಎಲ್ಲಾವೂ ಹೊರ ಬರುತ್ತದೆ

ಓಂ ಪ್ರಕಾಶ್ ಅವರು ನನ್ನ ಜೊತೆಗೂ ಕೆಲಸ ಮಾಡಿದ್ದರು. ಅವರು ಒಳ್ಳೆಯ ಅಧಿಕಾರಿಯಾಗಿದ್ದರು. ಆದರೆ ಈ ರೀತಿಯಲ್ಲಿ ಆಗಬಾರದಿತ್ತು. ಕೊಲೆಗೆ ಏನು ಕಾರಣ ಎಂದು ನಿರ್ದಿಷ್ಟವಾಗಿ ಈಗಲೇ ಹೇಳಲು ಸಾಧ್ಯವಿಲ್ಲ. ತನಿಖೆ ವೇಳೆ ಎಲ್ಲಾವೂ ಹೊರ ಬರುತ್ತದೆ. ಹತ್ಯೆಗೆ ಕಾರಣ ಏನು ಅಂತ ಗೊತ್ತಾಗಿಲ್ಲ. ಯಾವ ಕಾರಣಕ್ಕಾಗಿ ಹತ್ಯೆ ಆಗಿದೆ ಎಂದು ತನಿಖೆ ಬಳಿಕ ಹೊರಬರುತ್ತದೆ. ಎಲ್ಲಾವನ್ನೂ ತನಿಖೆ ನಡೆಸಲಾಗುತ್ತಿದೆ. ಅಕ್ರಮ ಸಂಬಂಧ ಆಪಾದನೆ ವಿಚಾರ ಗೊತ್ತಿಲ್ಲ. ತನಿಖೆ ಆಗುವರೆಗೂ ಏನು ಹೇಳಲು ಬರುವುದಿಲ್ಲ ಎಂದು ಸಚಿವ ಡಾ.ಜಿ. ಪರಮೇಶ್ವರ್ ಮಾಹಿತಿ ನೀಡಿದರು.

### ಮಗಳ ಒತ್ತಾಯಕ್ಕೆ ಬಂದಿದ್ದರು

ತಂದೆಯನ್ನು ಕೊಲೆ ಮಾಡುವುದಾಗಿ ತಾಯಿ ಬೆದರಿಕೆ ಹಾಕುತ್ತಿದ್ದರು ಎಂದು ಕಾರ್ತಿಕೇಶ್ ಪೊಲೀಸರಿಗೆ ಹೇಳಿದ್ದಾನೆ. ಜೀವ ಭಯದಿಂದ ಓಂ ಪ್ರಕಾಶ್ ತಮ್ಮ ಸಹೋದರಿ ಸರಿತಾ ಕುಮಾರಿ ಮನೆಗೆ ಹೋಗಿದ್ದರು. ಆದರೆ, ಕೊಲೆಗೆ ಎರಡು ದಿನಗಳ ಮೊದಲು ಕೃತಿ ಅವರನ್ನು ಭೇಟಿ ಮಾಡಿ ಮನೆಗೆ ಬರುವಂತೆ ಒತ್ತಾಯಿಸಿದ್ದಳು. ಮಗಳ ಒತ್ತಾಯದ ಮೇರೆಗೆ ಅವರು ಮನೆಗೆ ವಾಪಸ್ಸಾದರು ಎಂದು ಕಾರ್ತಿಕೇಶ್ ದೂರಿನಲ್ಲಿ ತಿಳಿಸಿದ್ದಾನೆ. ಪೊಲೀಸರು ಕಾರ್ತಿಕೇಶ್ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಾಯಿ ಮತ್ತು ಮಗಳು ಇಬ್ಬರೂ ತಂದೆಯೊಂದಿಗೆ ಜಗಳವಾಡುತ್ತಿದ್ದರು. ಪಲ್ಲವಿ ಮತ್ತು ಕೃತಿ ಇಬ್ಬರೂ ಖಿನ್ನತೆಯಿಂದ ಬಳಲುತ್ತಿದ್ದರು. ಈ ಕಾರಣದಿಂದಾಗಿ ಅವರು ತಂದೆಯೊಂದಿಗೆ ಜಗಳವಾಡುತ್ತಿದ್ದರು ಎಂದು ಕಾರ್ತಿಕೇಶ್ ಶಂಕಿಸಿದ್ದಾನೆ. ಅವರೇ ಈ ಕೊಲೆ ಮಾಡಿದ್ದಾರೆ ಎಂದು ಕಾರ್ತಿಕೇಶ್ ಹೇಳಿದ್ದಾನೆ ಅನುಮಾನ ವ್ಯಕ್ತಪಡಿಸಿದ್ದಾನೆ.


### ಆರಂಭದಿಂದಲೂ ಅವರ ಬಾಂಧವ್ಯ ಸರಿ ಇರಲಿಲ್ಲ!

ಕರ್ನಾಟಕದ ಪೊಲೀಸ್ ಮಹಾನಿರ್ದೇಶಕರಾಗಿರುವವರೆಗೂ ಅವರ ಮನೆಗೆ ಅನೇಕ ಅಧಿಕಾರಿಗಳು ಭೇಟಿ ನೀಡುತ್ತಿದ್ದರು. ಕಿರಿಯ ಸಹೋದ್ಯೋಗಿಗಳ ಜೊತೆ ಓಂ ಪ್ರಕಾಶ್ ಉತ್ತಮ ಬಾಂಧವ್ಯ ಹೊಂದಿದ್ದರು. ಆದರೆ ಮನೆಗೆ ಬಂದ ಯಾರ ಜೊತೆಗೂ ಪತ್ನಿ ಪಲ್ಲವಿ ಸರಿಯಾಗಿ ಮಾತನಾಡುತ್ತಿರಲಿಲ್ಲ. ಹಾಗಾಗಿ ನಿವೃತ್ತಿ ಬಳಿಕ ಯಾರನ್ನು ಮನೆ ಬಳಿ ಬರಲು ಬಿಡುತ್ತಿರಲಿಲ್ಲ. ಇಲ್ಲಿಂದಲೇ ಅವರ ನಡುವಿನ ಭಿನ್ನಾಭಿಪ್ರಾಯಗಳು ಗೊತ್ತಾಗುತ್ತಿದ್ದವು ಎಂದು ಸಹೋದ್ಯೋಗಿಯೊಬ್ಬರು ಮಾಹಿತಿ ಕೊಟ್ಟಿದ್ದಾರೆ. ಮಗಳ ಮದುವೆ ಮಾಡಿ ಬಳಿಕ ಬೇರೆ ಮನೆ ಮಾಡುವ ನಿರ್ಧಾರದ ಬಗ್ಗೆಯೂ ಹೇಳಿಕೊಂಡಿದ್ದರು ಎನ್ನಲಾಗಿದೆ. ಅಲ್ಲದೆ ಬೆಂಗಳೂರಿನಲ್ಲಿ ಓಂಪ್ರಕಾಶ್ ಅವರಿಗೆ ಸೇರಿದ ಎರಡು ಮನೆಗಳಿವೆ. ಕಾವೇರಿ ಜಂಕ್ಷನ್ ಬಳಿಯ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಮತ್ತು ಎಚ್‌ಎಸ್‌ಆರ್ ಲೇಔಟ್‌ನ ಐಪಿಎಸ್ ಕ್ವಾರ್ಟರ್ಸ್‌ನಲ್ಲಿ ಮನೆ ಇದೆ. ಪತ್ನಿಯ ಜತೆ ಜಗಳವಾದಾಗ ಓಂಪ್ರಕಾಶ್, ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ವಾಸವಿರುತ್ತಿದ್ದರು.

1 ನಿವೃತ್ತ ಪೊಲೀಸ್ ಅಧಿಕಾರಿ ಓಂ ಪ್ರಕಾಶ್ ಕೊಲೆ ಪ್ರಕರಣ

2 ಮಗಳು ಕೃತಿ, ತಾಯಿ ಪಲ್ಲವಿ ಬೆದರಿಕೆಗೆ ಬೇರೆ ಮನೆಯಲ್ಲಿದ್ದರ

3 ಸಹೋದರಿ ಒತ್ತಾಯದ ಮೇರೆಗೆ ಮನೆಗೆ ಬಂದಿದ್ದರು



## ಬೆಂಗಳೂರು ನಮ್ಮ ಮೆಟ್ರೋ ಕೆಂಪು ಮಾರ್ಗ: ಹೆಬ್ಬಾಳ - ಸರ್ಜಾಪುರ ನಡುವೆ 28 ನಿಲ್ದಾಣಗಳು

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಸಂಪರ್ಕ ಜಾಲ ವಿಸ್ತರಣೆಯಾಗುತ್ತಿದ್ದು, ನಗರದ ಮತ್ತಷ್ಟು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶವನ್ನು ಬಿಎಂಆರ್ ಸಿಎಲ್ ಹೊಂದಿದೆ. ಆ ನಿಟ್ಟಿನಲ್ಲಿ ರಾಜಧಾನಿ ಬೆಂಗಳೂರಿನ ಹೃದಯ ಭಾಗದ ಹಲವು ಬಡಾವಣೆಗಳನ್ನು ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೋ ಕೆಂಪು ಮಾರ್ಗವನ್ನು ನಿರ್ಮಿಸುತ್ತಿದೆ. ಈ ಮಾರ್ಗವು ಸರ್ಜಾಪುರ - ಹೆಬ್ಬಾಳ ನಡುವೆ ಸಂಪರ್ಕ ಕಲ್ಪಿಸುತ್ತದೆ.

ಸದ್ಯ ನಮ್ಮ ಮೆಟ್ರೋದಲ್ಲಿ ಬೆಂಗಳೂರು ಉತ್ತರ - ದಕ್ಷಿಣ, ಪೂರ್ವ - ಪಶ್ಚಿಮ ಸಂಪರ್ಕ ಕಲ್ಪಿಸುವ ಹಸಿರು, ನೇರಳೆ ಮಾರ್ಗ ಕಾರ್ಯಾಚರಣೆಯಲ್ಲಿವೆ.

ಇನ್ನೂ ಹಳದಿ ಮಾರ್ಗ 2025ರಲ್ಲಿ, ಗುಲಾಬಿ ಮಾರ್ಗ 2026 ರಲ್ಲಿ, ನೀಲಿ ಮಾರ್ಗ 2027 ಕ್ಕೆ ಕಾರ್ಯಾಚರಣೆ ನಡೆಸುವ ಸಾಧ್ಯತೆ ಇದೆ. ಆದರೆ, ಸಾಕಷ್ಟು ವಾಹನ ದಟ್ಟಣೆಯಿಂದ ಕೂಡಿರುವ ಹೊಸೂರು ರಸ್ತೆ, ಸಂಟ್‌ಜಾನ್ಸ್, ಮಡಿವಾಳ, ಸರ್ಜಾಪುರ ಭಾಗಕ್ಕೂ ಮೆಟ್ರೋ ಸೇವೆ ಬೇಕು ಎಂಬ ಬೇಡಿಕೆ ಸಾಕಷ್ಟು ದಿನಗಳಿಂದ ಇದೆ. ಹೀಗಾಗಿ, ಬಿಎಂಆರ್‌ಸಿಎಲ್ ಮೂರನೇ ಹಂತದಲ್ಲಿ ಕೆಂಪು ಮಾರ್ಗ ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ.




ನಮ್ಮ ಮೆಟ್ರೋದ ಮೂರನೇ ಹಂತ ಎ ಯೋಜನೆ

### ನಮ್ಮ ಮೆಟ್ರೋ ಕೆಂಪು ಮಾರ್ಗದ ನಿಲ್ದಾಣಗಳು

● ಸರ್ಜಾಪುರ ● ಸೋಮಾಪುರ ● ದೊಮ್ಮಸಂದ್ರ ● ಮುತ್ತನಲ್ಲೂರು ಕ್ರಾಸ್ ● ಸೋಲಿಕುಂಟೆ ● ಕೊಡತಿ ಗೇಟ್ ● ಅಂಬೇಡ್ಕರ್ ನಗರ ● ಕೊರ್ಮೆಲರಂ ● ದೊಡ್ಡಕನ್ನಳ್ಳಿ ● ಕೈಕೊಂಡ್ರಹಳ್ಳಿ ● ● ಬೆಳ್ಳಂದೂರು ಗೇಟ್ ● ಇಬ್ಬಲೂರು ● ಅಗರ ● ಜಕ್ಕಸಂದ್ರ ● ಸಿಪಿಡಬ್ಲ್ಯೂಡಿ ಕ್ವಾಟ್ರಸ್ ● ಸೆಂಟ್‌ಜಾನ್ಸ್ ಆಸ್ಪತ್ರೆ ● ಸುದ್ದುಗುಂಟನಪಾಳ್ಯ ● ಡೈರಿ ಸರ್ಕಲ್ ● ನಿಮ್ಹಾನ್ಸ್ ● ವಿಲ್ಸನ್ ಗಾರ್ಡನ್ ● ಟೌನ್ ಹಾಲ್ ● ಕೆಆರ್ ಸರ್ಕಲ್ ● ಚಾಲುಕ್ಯ ಸರ್ಕಲ್ ● ಪ್ಯಾಲೇಸ್ ಗುಟ್ಟಹಳ್ಳಿ ● ಮೇಖ್ರಿ ಸರ್ಕಲ್ ● ವೆಟರ್ನರಿ ಕಾಲೇಜ್ ● ಗಂಗಾ ನಗರ ● ಹೆಬ್ಬಾಳ (ನಿಲ್ದಾಣಗಳ ಪೈಕಿ 11 ಸುರಂಗ, 17 ಎತ್ತರಿಸಿದ ನಿಲ್ದಾಣಗಳಾಗಿವೆ)

## ಶೀಘ್ರದಲ್ಲೇ 2 ವಂದೇ ಭಾರತ್ ಸ್ಲೀಪರ್ ಕ್ಲಾಸ್ ರೈಲು ಓಡಾಟ ಪ್ರಾರಂಭ

■ 2 ಮಾರ್ಗಗಳಲ್ಲಿ ಯಾವ ದಿನಾಂಕದಿಂದ ಸ್ಲೀಪರ್ ರೈಲು ಓಡಾಟ ಆರಂಭವಾಗಲಿದೆ ಎನ್ನುವುದು ಇನ್ನೂ ಖಾತ್ರಿಯಾಗಿಲ್ಲ

• ಉದಯವಾಹಿನಿ, ಹೊಸದಿಲ್ಲಿ

ಭಾರತೀಯ ರೈಲ್ವೆಯು ಶೀಘ್ರದಲ್ಲಿ ವಂದೇ ಭಾರತ್ ಸ್ಲೀಪರ್ ರೈಲನ್ನು ಆರಂಭಿಸಲಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಕಳೆದ ಸೆಪ್ಟಂಬರ್ ತಿಂಗಳಲ್ಲಿ ಈ ರೈಲು ಕೋಚ್ ಅನ್ನು ಉದ್ಘಾಟಿಸಿದ್ದರು. ಮೊದಲು, ಎರಡು ರೂಟ್ ಗಳಲ್ಲಿ ಇದು ಸಂಚರಿಸಲಿದೆ.

ದೇಶದ ಅತ್ಯಂತ ದಟ್ಟಣೆಯ ಮಾರ್ಗವಾಗಿರುವ ದೆಹಲಿಯಿಂದ ಹೌರಾಗೆ ಈ ರೈಲು ಸಂಚರಿಸಲಿದೆ. ಇನ್ನೊಂದು, ಕೇರಳ ಮತ್ತು ಕರ್ನಾಟಕಕ್ಕೆ ಕೊಂಡಿಯಾಗಿ ತಿರುವನಂತಪುರಂ - ಮಂಗಳೂರು ನಡುವೆ ಇನ್ನೊಂದು ಸ್ಲೀಪರ್ ರೈಲ್ ಕಾರ್ಯಾರಂಭ ಮಾಡಲಿದೆ.

ದೆಹಲಿ ಮತ್ತು ಹೌರಾ (ಕೋಲ್ಕತ್ತದಿಂದ 16.5 ಕಿ.ಮೀ) ನಡುವಿನ 1,440 ಕಿಲೋಮೀಟರ್ ಅಂತರವನ್ನು ಹದಿನೈದು ಗಂಟೆಗಳಲ್ಲಿ ಕ್ರಮಿಸಲಿದೆ. ರಾಜಧಾನಿ ಮತ್ತು ದುರಂತ್ ಎಕ್ಸ್‌ಪ್ರೆಸ್ ಗಿಂತಲೂ ಇದು ವೇಗವಾಗಿ ಚಲಿಸಲಿದೆ. ಆರಾಮದಾಯಕ ಮತ್ತು ವೇಗದ ಪ್ರಯಾಣವನ್ನು ಒದಗಿಸುವುದು ರೈಲ್ವೇಸ್ ಉದ್ದೇಶ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಎರಡು ಮಾರ್ಗಗಳಲ್ಲಿ ಯಾವ ದಿನಾಂಕದಿಂದ ಸ್ಲೀಪರ್ ರೈಲು ಓಡಾಟ ಆರಂಭವಾಗಲಿದೆ ಎನ್ನುವುದು ಇನ್ನೂ ಖಾತ್ರಿಯಾಗಿಲ್ಲ. ಆದರೆ, ಅತಿ ಶೀಘ್ರದಲ್ಲೇ ಶುರುವಾಗಲಿದೆ. ಈ ರೈಲನ್ನು ಬಿಇಎಂಎಲ್ ಮತ್ತು ಇಂಟೆಗ್ರಲ್ ಕೋಚ್ ಫ್ಯಾಕ್ಟರಿಯಿಂದ ಆಧುನಿಕ ಟೆಕ್ನಾಲಜಿಯನ್ನು ಬಳಸಿ ನಿರ್ಮಿಸಲಾಗಿದೆ.

ವಂದೇ ಭಾರತ್ ಸ್ಲೀಪರ್ ರೈಲಿನಲ್ಲಿ ಹದಿನಾರು ಬೋಗಿಗಳು ಇರುತ್ತವೆ. ಅದರಲ್ಲಿ 11 - ಎಸಿ 3ಟೈರ್, 4 - ಎಸಿ 2ಟೈರ್ ಮತ್ತು ಒಂದು ಫಸ್ಟ್ ಕ್ಲಾಸ್ ಎಸಿ ಬೋಗಿಗಳು ಇರಲಿವೆ. ಎಸಿ - 3 ಟೈರ್ ದರ ಸುಮಾರು 3 ಸಾವಿರ ಮತ್ತು ಎಸಿ - 2ಟೈರ್ ದರ 4 ಸಾವಿರ ಮತ್ತು ಫಸ್ಟ್ ಕ್ಲಾಸ್ ದರ 5ಸಾವಿರ ಸುಮಾರು ಇರಲಿದೆ. ರಾಜಧಾನಿಯಿಂದ ಸಂಜೆ ಐದು ಗಂಟೆಗೆ ಹೊರಡುವ ರೈಲು, ಮರುದಿನ ಬೆಳಿಗ್ಗೆ 8 ಗಂಟೆಗೆ ಹೌರಾ ತಲುಪಲಿದೆ. ಅದೇ ಸಮಯದಲ್ಲಿ ಹೌರಾದಿಂದಲೂ ರೈಲು ಹೊರಡಲಿದೆ. ಅದೇ ರೀತಿ, ಕೇರಳದ ತಿರುವನಂತಪುರಂ ಮತ್ತು ಕರ್ನಾಟಕದ ಮಂಗಳೂರು ನಡುವೆ, ವಂದೇ ಭಾರತ್ ಸ್ಲೀಪರ್ ಟ್ರೈನ್ ಓಡಾಟ ಆರಂಭಿಸಲಿದೆ.

ವಂದೇ ಭಾರತ್ ಸ್ಲೀಪರ್ ರೈಲಿನಲ್ಲಿ ಹದಿನಾರು ಬೋಗಿಗಳು



ದೆಹಲಿ - ಹೌರಾ ನಡುವಿನ ಅಂತರವನ್ನು ರಾಜಧಾನಿ ಎಕ್ಸ್‌ಪ್ರೆಸ್ 17 ಗಂಟೆಯಲ್ಲಿ, ದುರಂತೊ ಎಕ್ಸ್‌ಪ್ರೆಸ್ 17.40 ಗಂಟೆಗಳಲ್ಲಿ ಕ್ರಮಿಸುತ್ತಿದೆ. ವಂದೇ ಭಾರತ್ ಸ್ಲೀಪರ್ ರೈಲು ಈ ಅಂತರವನ್ನು 15 ಗಂಟೆಯಲ್ಲಿ ಕ್ರಮಿಸಲಿದೆ. ಆ ಮೂಲಕ, ಪ್ರಯಾಣಿಕರಿಗೆ ಸುಮಾರು 2 ಗಂಟೆ ಪ್ರಯಾಣದ ಅವಧಿ ಕಮ್ಮಿಯಾಗಲಿದೆ.

ಈ ರೈಲು 160 ಕಿ.ಮೀ ವೇಗದಲ್ಲಿ ಚಲಿಸಲಿದೆ ಮತ್ತು ರಾಜಧಾನಿ ಮತ್ತು ದುರಂತೊ ರೈಲಿಗಿಂತ ವೇಗವಾಗಿ ಸಂಚರಿಸಲಿದೆ. ದೆಹಲಿ - ಹೌರಾ ಮಾರ್ಗದ ಸ್ಲೀಪರ್ ರೈಲು, ಕಾನ್ಪುರ ಸೆಂಟ್ರಲ್, ಪ್ರಯಾಗರಾಜ್ ಜಂಕ್ಷನ್, ಡಿಡಿ ಉಪಾಧ್ಯಾಯ ಜಂಕ್ಷನ್, ಗಯಾ ಜಂಕ್ಷನ್, ಧನ್ ಬಾದ್ ಜಂಕ್ಷನ್ ಮತ್ತು ಅಸನ್ಸೋಲ್ ಜಂಕ್ಷನ್‌ನಲ್ಲಿ ನಿಲುಗಡೆ ಆಗುತ್ತದೆ.


ತಿರುವನಂತಪುರಂ - ಮಂಗಳೂರು ನಡುವಿನ ಇಂಟರ್ ಸಿಟಿ ರೈಲು ಯಶಸ್ವಿಯಾದ ನಂತರ, ಈ ಮಾರ್ಗದಲ್ಲಿ ಸ್ಲೀಪರ್ ಟ್ರೈನ್ ಓಡಿಸುವ ನಿರ್ಧಾರಕ್ಕೆ ಬರಲಾಗಿದೆ. ಇದು, ಕೂಡಾ 160 ಕಿಲೋಮೀಟರ್ ವೇಗದಲ್ಲಿ ಸಂಚರಿಸಲಿದೆ.

ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.99 ₹/L | ಬಂಗಾರ: ₹9,835/Gram24ct ₹9,015/Gram22ct | ಬೆಳ್ಳಿ: ₹101.00/Gram

# ಸಾವಿರಾರು ಸಮಸ್ಯೆಗಳಿಗೆ ಪರಿಹಾರ ಜನರೊಂದಿಗೆ ಜನಸೇವಕ ಸಹಕಾರಿ

• ಉದಯವಾಹಿನಿ, ಬೆಂಗಳೂರು

ರಾಜಾಜಿನಗರ ವಿಧಾನಸಭಾ ಕ್ಷೇತ್ರ, ಶಾಸಕರ ಸಂಪರ್ಕ ಕಛೇರಿಯಲ್ಲಿ 12ನೇ ವಾರದ ಜನರೊಂದಿಗೆ ಜನಸೇವಕ ಜನ ಸ್ಪಂದನಾ ಕಾರ್ಯಕ್ರಮ. ಸಾರ್ವಜನಿಕರ ಸಮಸ್ಯೆಗಳನ್ನು ಶಾಸಕರಾದ ಎಸ್.ಸುರೇಶ್ ಕುಮಾರ್ ರವರು ಆಲಿಸಿ, ಪರಿಹಾರ ಕಾರ್ಯಕ್ಕೆ ಅಧಿಕಾರಿಗಳಿಗೆ ಆದೇಶ ನೀಡಿದರು. ಬಿಬಿಎಂಪಿ, ಬೆಸ್ಕಾಂ, ಜಲಮಂಡಳಿ, ಪೊಲೀಸ್ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಶಾಸಕ ಎಸ್.ಸುರೇಶ್ ಕುಮಾರ್‌ರವರು ಮಾತನಾಡಿ ಬೆಂಗಳೂರು ಬೆಳೆಯುತ್ತಿರುವ ನಗರ, ರಾಜಾಜಿನಗರ ಅತ್ಯಂತ ಹಳೆಯ ಕ್ಷೇತ್ರವಾಗಿದೆ. ಸಮಸ್ಯೆಗಳು ನಿರಂತರ ಪರಿಹಾರ ಕಾರ್ಯ ತತಕ್ಷಣವಾಗಬೇಕು, ಸಾರ್ವಜನಿಕರಿಗೆ ನೆಮ್ಮದ್ದಿ ಜೀವನ ಸಾಗಿಸಬೇಕು ಎಂಬ ನಿಟ್ಟನಲ್ಲಿ ಜನರೊಂದಿಗೆ ಜನಸೇವಕ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗುತ್ತಿದೆ.


ಉದಯವಾಹಿನಿ ಚಿತ್ರ

**12ನೇ ವಾರದ ಕಾರ್ಯಕ್ರಮ**

ಕಳೆದ 11ವಾರಗಳಿಂದ ಜನಸ್ಪಂದನಾ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಪೂರೈಸಿ, 12ನೇ ವಾರದ ಕಾರ್ಯಕ್ರಮ ನಡೆಯುತ್ತಿದೆ. ಸಾರ್ವಜನಿಕರ ಸಮಸ್ಯೆಗಳನ್ನು ನೇರವಾಗಿ ಬಂದು ಹೇಳಬಹುದು ಅಥವಾ 5 ಮೊಬೈಲ್ ಸಂಖ್ಯೆಗಳನ್ನು ನೀಡಲಾಗಿದೆ, ಕರೆ ಮಾಡಿ ಸಮಸ್ಯೆಗಳನ್ನು ಹೇಳಬಹುದು. ಕಸ ವಿಲೇವಾರಿ, ಇ-ಖಾತ ಮತ್ತು ಕುಡಿಯುವ ನೀರು, ವೈದ್ಯಕೀಯ ಪರಿಹಾರ, ಮರದ ಕೊಂಬೆ ತೆರವು ಕಾರ್ಯ, ರಸ್ತೆ ನಿರ್ಮಾಣ ನಾಗರಿಕರ 500ಕ್ಕೂ ಹೆಚ್ಚು ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ ಈ ಕಾರಣದಿಂದ ಜನರೊಂದಿಗೆ ಜನಸೇವಕ ಕಾರ್ಯಕ್ರಮ ಯಶಸ್ವಿಯಾಗಿದೆ. ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಸಾರ್ವಜನಿಕರ ಆಶಯದಂತೆ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಹೇಳಿದರು.

**ಸಾರ್ವಜನಿಕರ ಆಶಯದಂತೆ ಯೋಜನೆಗಳ ಅನುಷ್ಠಾನ**

ಮಾಜಿ ಉಪಮಹಾಪೌರರಾದ ರಂಗಣ್ಣ, ಮಾಜಿ ಪಾಲಿಕೆ ಸದಸ್ಯರುಗಳಾದ ಎಂ. ಮುನಿರಾಜು, ಹೆಚ್.ಆರ್.ಕೃಷ್ಣಪ್ಪ, ಹೆಚ್.ವಿಜಯಕುಮಾರ್, ದೀಪಾ ನಾಗೇಶ್, ಮಂಡಲ ಅಧ್ಯಕ್ಷ ಸುದರ್ಶನ್, ಬಿಜೆಪಿ ಮುಖಂಡರುಗಳಾದ ಗಿರೀಶ್ ಗೌಡ, ಕಾಮಧೇನು ಸುರೇಶ್, ಟಿ.ಎನ್.ರಮೇಶ್, ಅನಿಲ್ ರಂಗಣ್ಣ ಉಮೇಶ್, ಅಮಿತ್ ಜೈನ್, ಮೋಹನ್ ರಾಜ್ ಕೃಷ್ಣಮೂರ್ತಿ, ಗೌತಮ್ ರವರು ಪಾಲ್ಗೊಂಡಿದ್ದರು.

## ಮುಂದಿನ ಮಕ್ಕಳ ಭವಿಷ್ಯಕ್ಕಾಗಿ ಸಂಸ್ಕಾರವೇ ಮುಖ್ಯ: ಆರ್, ಕೆ, ವಾದೀಂದ್ರಾಚಾರ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪರಮಪೂಜ್ಯ ಶ್ರೀ ಶ್ರೀ 1008 ಶ್ರೀಸುಬುಧೇಂದ್ರ ತೀರ್ಥ ಶ್ರೀಪಾದಂಗಳ ವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್.ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಶ್ರೀಹರಿ ಭಜನೆ ಕಾರ್ಯಕ್ರಮವು ನೆರವೇರಿದೆ. ಈ ಭಾನುವಾರದಂದು ನಡೆದ ಶ್ರೀಹರಿ ಭಜನೆ ಕಾರ್ಯಕ್ರಮದಲ್ಲಿ ಚಿಕ್ಕ ಮಕ್ಕಳಾದ ಕು. ಧೃತಿ ಆತ್ರೇಯಸ್, ಕು. ಧನ್ವಿ ಆತ್ರೇಯಸ್ ಎಂಬ ಮಕ್ಕಳು ವಿಶೇಷವಾಗಿ ಶ್ರೀ ಗುರುರಾಯರ ಸನ್ನಿಧಿಯಲ್ಲಿ ನರ್ತನ ಸೇವೆಯನ್ನು ಸಲ್ಲಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು ಎಂದು ಶ್ರೀ ನಂದಕಿಶೋರ್ ಆಚಾರ್ಯರುತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್.ಕೆ. ವಾದಿಂದ್ರಾಚಾರ್ಯರು ಮಾತನಾಡುತ್ತಾ ಇಂದಿನ ಮಕ್ಕಳಿಗೆ ಸಂಸ್ಕಾರವೇ ಮುಖ್ಯ. ಆ ಸಂಸ್ಕಾರದಿಂದಲೇ ಮಕ್ಕಳಿಗೆ ಶ್ರೇಯೋಭಿವೃದ್ಧಿ ಆಗಲಿದೆ ಎಂದು ತಿಳಿಸಿ, ಆಶೀರ್ವದಿಸುತ್ತ ಫಲ ಮಂತ್ರಾಕ್ಷತೆ ಕೊಟ್ಟು ಅನುಗ್ರಹಿಸಿದರು, ಭಕ್ತರು ಸಹ ಮಕ್ಕಳ ನರ್ತನ ಸೇವೆಯನ್ನು ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸುತ್ತಾ ಮಕ್ಕಳನ್ನು ಪ್ರೋತ್ಸಾಹಿಸಿ ಹಾರೈಸಿದರು.

## ಆರ್.ಅಶೋಕ್ ತಪ್ಪು ಹೇಳಿಕೆ ನೀಡಬಾರದು ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಜಾತಿಗಣತಿಯಲ್ಲಿ ಮೂಲಪ್ರತಿಗಳು ಲಭ್ಯವಿಲ್ಲ ಎಂಬ ಆರೋಪ ನಿರಾಧಾರ. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಪ್ಪು ಹೇಳಿಕೆ ನೀಡಬಾರದು ಎಂದು ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಜಾತಿಗಣತಿಯ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗ ಮುಚ್ಚಿದ ಲಕೋಟೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿತ್ತು. ಅವರು ಹೇಗೆ ಸುಳ್ಳು ಹೇಳಲು ಸಾಧ್ಯ ಎಂದು ಪ್ರಶ್ನಿಸಿದರು.

ಒಂದು ವೇಳೆ ಆರ್.ಅಶೋಕ್‌ರವರಿಗೆ ಅನುಮಾನವಿದ್ದರೆ ಜಯಪ್ರಕಾಶ್ ಹೆಗ್ಡೆಯವರನ್ನೇ ನೇರವಾಗಿ ಕೇಳಬಹುದು. ಅದನ್ನು ಬಿಟ್ಟು ಸುಳ್ಳು ಹೇಳುವುದೇಕೆ?, ಜವಾಬ್ದಾರಿಯುತ ಸ್ಥಾನದಲ್ಲಿರುವವರು ಎಚ್ಚರಿಕೆಯಿಂದ ಮಾತನಾಡಬೇಕು ಎಂದರು. ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಬಾರದಿತ್ತು. ಈ ಸಂಪ್ರದಾಯ ಸರಿಯಲ್ಲ. ಜನಿವಾರ, ಲಿಂಗ ಸೇರಿದಂತೆ ಧಾರ್ಮಿಕವಾಗಿ ಅನೇಕ ಆಚರಣೆಗಳಿರುತ್ತವೆ. ಮಹಿಳೆಯರು ಮಾಂಗಲ್ಯಸರ ಕೂಡ ಹಾಕಿರುತ್ತಾರೆ. ಇದನ್ನೆಲ್ಲಾ ತೆಗೆಸುವುದು ಒಳ್ಳೆಯ ನಿರ್ಧಾರವಲ್ಲ ಎಂದು ಹೇಳಿದರು. ಪರೀಕ್ಷಾ ವೇಳೆ ತಪಾಸಣೆಗಾಗಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅಳವಡಿಸಲಾಗಿರುತ್ತದೆ.

ಪೊಲೀಸರು ತಪಾಸಣೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಧಾರ್ಮಿಕ ವಿಚಾರಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು. ಬಿಜೆಪಿ ಶಾಸಕ ಮುನಿರತ್ನ ಆಣೆ, ಪ್ರಮಾಣಕ್ಕೆ ಸವಾಲು ಹಾಕಿರುವುದಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ಅಲ್ಲಿಂದ ನಿರ್ಗಮಿಸಿದರು.

## ಜನಿವಾರ ತೆಗೆಸಿದವರ ವಿರುದ್ಧ ಕಠಿಣ ಕ್ರಮ

• ಉದಯವಾಹಿನಿ, ಬೆಂಗಳೂರು

ಸಿಇಟಿ ಪರೀಕ್ಷೆ ಬರೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿರುವ ವಿಚಾರದಲ್ಲಿ ತಪ್ಪು ಮಾಡಿದವರ ವಿರುದ್ಧ ಕ್ರಮಕ್ಕೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನಿವಾರದ ವಿಚಾರದಲ್ಲಿ ಯಾರು ತಪ್ಪು ಮಾಡಿದ್ದಾರೋ ಅಂತವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲು ಈಗಾಗಲೇ ಸೂಚನೆ ಕೊಡಲಾಗಿದೆ.

ಪರೀಕ್ಷಾ ನಿಯಮ ಮೀರಿ ವರ್ತಿಸಿರುವ, ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮವಾಗಲಿದೆ ಎಂದರು. ರೋಹಿತ್ ವೇಮುಲ ಹೆಸರಿನಲ್ಲಿ ಕಾಯ್ದೆ ತರುವ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಈ ಬಗ್ಗೆ ಕರಡು ರಚಿಸಲು ಹೇಳಿದ್ದೇವೆ ಎಂದು ತಿಳಿಸಿದರು.

## ಶಾಸಕರ ಅಮಾನತು ಆದೇಶ ವಾಪಸ್ ಪಡೆಯುವಂತೆ ಸ್ಪೀಕರ್ ಬಳಿ ಮನವಿ

• ಉದಯವಾಹಿನಿ, ಬೆಂಗಳೂರು



ಬಿಜೆಪಿಯ 18 ಶಾಸಕರನ್ನು ಅಮಾನತು ಮಾಡಿರುವ ಆದೇಶವನ್ನು ವಾಪಸ್ ಪಡೆಯುವಂತೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರಲ್ಲಿ ಮನವಿ ಮಾಡಿದ್ದೇವೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದರು.

ವಿಧಾನ ಸಭಾಧ್ಯಕ್ಷರನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮಾನತು ಆದೇಶವನ್ನು ಪರಿಶೀಲನೆ ಮಾಡುವುದಾಗಿ ಸಭಾಧ್ಯಕ್ಷರು ತಿಳಿಸಿದ್ದಾರೆ. ವಿಧಾನಸಭೆಯ ಒಳಗೆ ನಡೆದಿರುವ ಘಟನೆಯಾಗಿದ್ದು, ಸರ್ಕಾರದ ಜೊತೆ ಈ ಸಂಬಂಧ ಚರ್ಚೆ ಮಾಡುವುದಾಗಿ ಹೇಳಿದ್ದಾರೆ ಎಂದರು. ಸಭಾಧ್ಯಕ್ಷರ ಪೀಠದ ಬಗ್ಗೆ ಅಗೌರವವಿಲ್ಲ, ಗೌರವವಿದೆ. ಆದರೂ ಆರು ತಿಂಗಳು ಅಮಾನತು ಮಾಡಿರುವುದು ಸರಿಯಲ್ಲ. ಈ ಹಿಂದೆ ಅನೇಕ ಘಟನೆಗಳು ನಡೆದಿವೆ. ಅಮಾನತು ಮಾಡಿರುವುದರಿಂದ ವಿವಿಧ ಸಮಿತಿ ಸಭೆಗಳಿಗೆ ಶಾಸಕರು ಹೋಗಲಾಗುತ್ತಿಲ್ಲ ಎಂದು ಹೇಳಿದರು. ಸದನದಲ್ಲಿ ಸಚಿವ ಕೆ.ಎನ್.ರಾಜಣ್ಣ ಅವರು ಹನಿಟ್ರ್ಯಾಪ್ ವಿಚಾರ ಪ್ರಸ್ತಾಪಿಸಿದಾಗ, ಪಕ್ಷದ ವತಿಯಿಂದ ಆ ಬಗ್ಗೆ ಮಾತನಾಡಿದ್ದೇವೆ ಎಂದು ತಿಳಿಸಿದರು.

## ನಮ್ಮ ಮೆಟ್ರೊದಲ್ಲಿ ಗುಟ್ಕಾ ಜಗಿದವನಿಗೆ ಸರಿಯಾಗಿ ಉಗಿದ ಸಹ ಪ್ರಯಾಣಿಕರು


• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೊ ರೈಲಿನಲ್ಲಿ ಪ್ರಯಾಣದ ವೇಳೆ ಗುಟ್ಕಾ ಹಾಕುತ್ತಿದ್ದ ಪ್ರಯಾಣಿಕನೊಬ್ಬನನ್ನು ಸಹ ಪ್ರಯಾಣಿಕರು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆದಿದೆ. ಈ ವಿಡಿಯೊವನ್ನು ಬೆಂಗಳೂರು ಸೆಂಟ್ರಲ್ ಸಂಸದ ಪಿ.ಸಿ ಮೋಹನ್ ಅವರು ಎಕ್ಸ್‌ನಲ್ಲಿ ಹಂಚಿಕೊಂಡು ಸೂಕ್ತ ಕ್ರಮ ಕೈಗೊಳ್ಳುವಂತೆ ಬಿಎಂಆರ್‌ಸಿಎಲ್‌ಗೆ ಆಗ್ರಹಿಸಿದ್ದಾರೆ. ವಿಮಲ್ ಗುಟ್ಕಾ ಹಾಕುತ್ತಿದ್ದ ವ್ಯಕ್ತಿಯನ್ನು ಸಹ ಪ್ರಯಾಣಿಕರು ಪ್ರಶ್ನಿಸಿದ್ದಾರೆ. ಮೆಟ್ರೊ ನಮ್ಮೆಲ್ಲರ ಸ್ವತ್ತು, ಇಂತಹ ಕೆಲಸ ಮಾಡಬೇಡಿ ಇಲ್ಲಿ, ಕೆಳಗೆ ಇಳಿಯರಿ ಮೊದಲು ಎಂದು ಬುದ್ದಿ ಹೇಳಿದ್ದಾರೆ. ಆದರೆ, ಆ ವ್ಯಕ್ತಿ ಮೊಂಡುತನ ಪ್ರದರ್ಶಿಸಿದ್ದಾರೆ. ಮೆಟ್ರೊ ಕೂಡ ನಂದೂ ಸ್ವತ್ತು. ನಾನು ಗುಟ್ಕಾ ಹಾಕಿದ್ರೆ, ನಿಮಗೇನು ಸಮಸ್ಯೆ ಎಂದು ಮರು ಪ್ರಶ್ನಿಸಿದ್ದಾರೆ. ಮೆಟ್ರೊದಲ್ಲಿ ಗುಟ್ಕಾ ಜಗಿದ ವ್ಯಕ್ತಿಯ ವರ್ತನೆಗೆ ಅನೇಕರು ಕಿಡಿಕಾರಿದ್ದು ಇಂಥವಹ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

### ಸ್ಮಾರ್ಟ್ ಮೀಟರ್ ಅವ್ಯವಹಾರದ ನಿಷ್ಪಕ್ಷಪಾತ ತನಿಖೆಗೆ ಒತ್ತಾಯಿಸಿ ಬಿಜೆಪಿ ದೂರು

# ಸ್ಮಾರ್ಟ್ ಮೀಟರ್ ಗೋಲ್‌ಮಾಲ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕ ವಿದ್ಯುತ್ ನಿಗಮ ಅಳವಡಿಸುವ ಸ್ಮಾರ್ಟ್ ಮೀಟರ್‌ನಲ್ಲಿ ಕೋಟ್ಯಂತರ ಅವ್ಯವಹಾರ ನಡೆದಿರುವ ಪ್ರಕರಣ ಸಂಬಂಧ ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬಿಜೆಪಿ ಲೋಕಾಯುಕ್ತಕ್ಕೆ ದೂರು ನೀಡಿದೆ. ಲೋಕಾಯುಕ್ತ ಎಸ್ಪಿ ಅವರಿಗೆ ಭೇಟಿ ಮಾಡಿದ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಸ್.ಆರ್.ವಿಶ್ವನಾಥ್, ಧೀರಜ್ ಮುನಿರಾಜು, ಸಿ.ಕೆ.ರಾಮಮೂರ್ತಿ ಮತ್ತಿತರ ನಿಯೋಗವು ಲಿಖಿತ ದೂರು ನೀಡಿತು. ಈ ಪ್ರಕರಣದಲ್ಲಿ ನೂರಾರು ಕೋಟಿ ಅವ್ಯವಹಾರವಾಗಿದ್ದು, ಸರ್ಕಾರ ಮುಚ್ಚು ಹಾಕುವ ಪ್ರಯತ್ನ ಮಾಡುತ್ತಿದೆ. ಹೀಗಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಮನವಿ ಮಾಡಲಾಗಿದೆ. ಕೆಟಿಟಿಪಿ ನಿಯಮ ಗಾಳಿಗೆ ತೂರಿ ರಾಜಶ್ರೀ ಎಲೆಕ್ಟ್ರಿಕಲ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಜೇಬು ತುಂಬಿಸಲು ಸ್ಮಾರ್ಟ್ ಮೀಟರ್ ಖರೀದಿ, ನಿರ್ವಹಣೆಗೆ ದುಬಾರಿ ದರ ನಿಗದಿ ಮಾಡಿವೆ. ಪರಿಣಾಮ ಎಸ್ಕಾಂಗಳು, ಸಾರ್ವಜನಿಕರಿಗೆ ಸೇರಿದ ಬರೋಬ್ಬರಿ 15,568 ಕೋಟಿ ಹಣ ಲೂಟಿಯಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖ ಮಾಡಲಾಗಿದೆ. ತಮ್ಮ ಆಪ್ತರಲ್ಲಿ ಒಬ್ಬರಾದ ಕೆ.ಜೆ.ಜಾರ್ಜ್ ಅವರ ಮೂಗಿನ ಅಡಿಯಲ್ಲೇ ಇಷ್ಟು ಬೃಹತ್ ಹಗರಣ ನಡೆಯುತ್ತಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಮ್ಮನಿರುವುದು ಯಾಕೆ ಎಂದು ಬಿಜೆಪಿ ನಾಯಕರು ಪ್ರಶ್ನೆ ಮಾಡಿದ್ದಾರೆ. ಸ್ಮಾರ್ಟ್ ಮೀಟರ್ ಅಳವಡಿಕೆಗೆ ಕೇಂದ್ರ ಸರ್ಕಾರ 900 ರೂ. ಸಹಾಯ ಧನ ನೀಡುತ್ತದೆ. ಅನ್ಯ ರಾಜ್ಯಗಳಲ್ಲಿ ಗುತ್ತಿಗೆದಾರ ಸಂಸ್ಥೆಗೆ ಆರಂಭದಲ್ಲಿ ಈ ಸಹಾಯಧನದ ಮೊತ್ತ 900 ರೂ. ಮಾತ್ರ ನೀಡಲಾಗುತ್ತದೆ. ಆದರೆರಾಜ್ಯದಲ್ಲಿ ಆರಂಭದಲ್ಲೇ ಗುತ್ತಿಗೆದಾರರ ಸಂಸ್ಥೆಗೆ ಸ್ಮಾರ್ಟ್ ಮೀಟರ್‌ನ ಸಂಪೂರ್ಣ ಮೊತ್ತ 8510 ರೂ.ಪಾವತಿಯಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಅನ್ಯ ರಾಜ್ಯಗಳಲ್ಲಿ ಗುತ್ತಿಗೆದಾರರ ಆರಂಭದಲ್ಲಿ 900 ರೂ. ಪಡೆದ ನಂತರ ಉಳಿದ ಸ್ಮಾರ್ಟ್ ಮೀಟರ್ ಮೊತ್ತವನ್ನು ಕಾರ್ಯಾಚರಣೆ, ನಿರ್ವಹಣಾ ವೆಚ್ಚದಲ್ಲಿ ಸೇರಿಸಿ ಪ್ರತಿ ತಿಂಗಳು 65 ರೂ.ಗಳಿಂದ 90 ರೂ.ಗಳವರೆಗೆ 10 ವರ್ಷಗಳವರೆಗೆ ಪಡೆಯಬೇಕು.

**ಸರ್ಕಾರ ಮುಚ್ಚುವ ಪ್ರಯತ್ನ**

ಅಂದರೆ ಗ್ರಾಹಕರಿಗೆ ಹೊರೆಯಾಗದಂತೆ ಈ ಮೊತ್ತ ಸಂಗ್ರಹಿಸುವ ವ್ಯವಸ್ಥೆ ರೂಪಿಸಲಾಗಿದೆ. ಆದರೆ ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ಗೆ ಸರಾಸರಿ 8,510 ರೂ. ಮೊದಲ ದಿನವೇ ಸಾರ್ವಜನಿಕರ ಜೇಬಿನಿಂದ ಕಿತ್ತುಕೊಳ್ಳುವುದು ಮಾತ್ರವಲ್ಲ, ಮೀಟರ್ ಕಾರ್ಯಾಚರಣೆ, ನಿರ್ವಹಣಾ ವೆಚ್ಚ ಪ್ರತಿ ತಿಂಗಳಿಗೆ 71 ರೂ.ಗಳಂತೆ 120 ತಿಂಗಳಿಗೆ ಸೇರಿ ಪ್ರತಿ ಮೀಟರ್‌ಗೆ ಬರೋಬ್ಬರಿ 17,000 ರೂ. ಸಂಗ್ರಹಿಸಿದಂತಾಗುತ್ತದೆ.


**ಕೆಟಿಟಿಪಿ ಕಾಯ್ದೆ ಸ್ಪಷ್ಟ ಉಲ್ಲಂಘನೆ**

ಬೆಸ್ಕಾಂ ವ್ಯಾಪ್ತಿಯಲ್ಲೇ ರಾಜಶ್ರೀ ಎಲೆಕ್ಟ್ರಿಕಲ್ಸ್ ಕಂಪನಿಯ ಅಂದಾಜು ಟೆಂಡರ್ ವೆಚ್ಚ 4,800 ಕೋಟಿ ರೂ. ಆಗಲಿದೆ. ಆದರೆ ಟೆಂಡರ್‌ನಲ್ಲಿ 571 ಕೋಟಿ ರೂ. ಎಂದು ನಮೂದಿಸಿ ಬಳಿಕ 997.23 ಕೋಟಿ ರೂ. ಎಂದು ತಿದ್ದುಪಡಿ ಮಾಡಲಾಗಿದೆ. ಟೆಂಡರ್ ಒಪ್ಪಂದ ಮಾಡಿಕೊಂಡಿರುವ ಒತ್ತದ ಶೇ.30ರಷ್ಟು ಹಣಕಾಸು ಸಾಮರ್ಥ್ಯ ತೋರಿಸಬೇಕು. ಅಂದರೆ 1,440 ಕೋಟಿ ಹಣ ಹೊಂದಿರುವುದಾಗಿ ಸಾಬೀತುಪಡಿಸಬೇಕಾಗಿತ್ತು. ಆದರೆ ವಾರ್ಷಿಕ ಪಾವತಿಯ ಶೇ.25ರಷ್ಟು ಎಂದು ಮಾಡಿ ಕೇವಲ 107 ಕೋಟಿ ರೂ. ಹಣಕಾಸು ಸಾಮರ್ಥ್ಯ ಮಾತ್ರ ಕೇಳಲಾಗಿದೆ. ಟೆಂಡರ್ ಬಗ್ಗೆ ಪತ್ರಿಕಾ ಪ್ರಕಟಣೆಯನ್ನೂ ನೀಡಿಲ್ಲ. ಆಡಳಿತ ಮಂಡಳಿಯಿಂದ ಅನುಮತಿಯನ್ನೂ ಪಡೆದಿಲ್ಲ ಎಂದು ದೂರಲಾಗಿದೆ.

ಅಂದರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪ್ರತಿ ಮೀಟರ್‌ಗೆ 9,260 ರೂ. ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿದ್ದು, ತನ್ಮೂಲಕ 10 ವರ್ಷದಲ್ಲಿ 15,568 ಕೋಟಿ ರೂ.ಗಳನ್ನು ಟೆಂಡರ್‌ದಾರರ ಜೇಬಿಗೆ ತುಂಬಲಾಗುತ್ತಿದೆ. ಇಷ್ಟು ದೊಡ್ಡ ಮೊತ್ತ ಗುತ್ತಿಗೆದಾರನಿಗೆ ಸಂಪೂರ್ಣವಾಗಿ ವೈಟ್ ಮನಿಯಾಗಿಯೇ ಲಭಿಸುತ್ತದೆ. ಈ ರೀತಿ ಗುತ್ತಿಗೆದಾರ ಸಂಸ್ಥೆಗೆ ದೊಡ್ಡ ಮೊತ್ತದ ಲಾಭ ಮಾಡಿಕೊಟ್ಟಿರುವ ಈ ವೈಟ್ ಕಾಲರ್ ಹಗರಣದ ಹಿಂದೆ ಯಾವ ಕೈಗಳು ಕೆಲಸ ಮಾಡಿವೆ ಎಂಬುದು ಪತ್ತೆಯಾಗಬೇಕಾದರೆ ಈ ಬಗ್ಗೆ ಮುಖ್ಯಮಂತ್ರಿಗಳು ತನಿಖೆಗೆ ಆದೇಶಿಸಬೇಕು ಎಂದು ಬಿಜೆಪಿ ನಾಯಕರು ಆಗ್ರಹಿಸಿದ್ದಾರೆ.

## ವಿಜಯನಗರದ ಶ್ರೇಷ್ಠ ಆಡಳಿತಗಾರ ಶ್ರೀಕೃಷ್ಣದೇವರಾಯರಿಗೆ ಅವಮಾನ: ಯತ್ನಾಳ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಭಾರತೀಯ ಇತಿಹಾಸದಲ್ಲಿ ಸುವರ್ಣ ಕಾಲದ ಶ್ರೇಷ್ಠ ಆಡಳಿತಗಾರರಾಗಿದ್ದ ವಿಜಯನಗರದ ಶ್ರೀ ಕೃಷ್ಣದೇವರಾಯರ ಸಮಾಧಿ ಜಾಗವನ್ನು ಮಾಂಸದ ಮಾರುಕಟ್ಟೆಯಾಗಿ ಪರಿವರ್ತಿಸಲಾಗಿದ್ದು, ಇದು ಕನ್ನಡನಾಡಿನ ಹೆಮ್ಮೆಯ ಅರಸರಾದ ಅಸಾಮಾನ್ಯ ಆಡಳಿತಗಾರ, ಅಪ್ರತಿಮ ದಂಡನಾಯಕ ಶ್ರೀ ಕೃಷ್ಣದೇವರಾಯರಿಗೆ ಮಾಡಿದ ಅವಮಾನ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಭಾರತೀಯ ಇತಿಹಾಸದಲ್ಲಿ ಶ್ರೇಷ್ಠ ಆಡಳಿತಗಾರರಾಗಿದ್ದ ವಿಜಯನಗರದ ಶ್ರೀ ಕೃಷ್ಣದೇವರಾಯರ ಸಮಾಧಿಯ ದುಸ್ಥಿತಿ ಇದು. ಈ ಜಾಗವನ್ನು ಅಕ್ಷರಶಃ ಮಾಂಸದ ಮಾರುಕಟ್ಟೆಯಾಗಿ ಕೆಲ ಸ್ಥಳೀಯರು ಪರಿವರ್ತಿಸಿರುವುದು ಕನ್ನಡ ನಾಡಿನ ಹೆಮೆಯ ಅರಸರಾದ



ಅಸಾಮಾನ್ಯ ಆಡಳಿತಗಾರ, ಅಪ್ರತಿಮ ದಂಡನಾಯಕ ಶ್ರೀ ಕೃಷ್ಣದೇವರಾಯರಿಗೆ ಮಾಡಿದ ಅವಮಾನವಾಗಿದೆ ಎಂದು ಹೇಳಿದ್ದಾರೆ. ಹಿಂದೂ ದೇವಾಲಯಗಳನ್ನು ಕೆಡವಿ, ದೇಶದ ಸಂಪತ್ತನ್ನು ದೋಚಿ, ಸಾವಿರಾರು ಹಿಂದೂಗಳನ್ನು ಅಮಾನವೀಯವಾಗಿ ಕೊಂದ ಔರಂಗಜೇಬನ ಸಮಾಧಿಗೆ ಪುರಾತತ್ವ ಸರ್ವೇಕ್ಷಣಾ ಇಲಾಖೆ(ಎಎಸ್‌ಐ) ತೆರಿಗೆದಾರರ ಹಣದಿಂದ ಸಂರಕ್ಷಣೆ ಮಾಡುತ್ತಿದೆ. ಆದರೆ, ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದ ಪರಾಕ್ರಮಿ, ಕಲೆ,ಸಾಹಿತ್ಯ ರಂಗಗಳ ಪೋಷಕ ಸುಪ್ರಸಿದ್ದ ಶ್ರೀಕೃಷ್ಣದೇವರಾಯರ ಸಮಾಧಿಗೆ ಏಕೆ ಈ ದಿವ್ಯ ನಿರ್ಲಕ್ಷ್ಯ ಎಂದು ಪ್ರಶ್ನಿಸಿದ್ದಾರೆ. ಇದು ಕನ್ನಡಿಗರಿಗಷ್ಟೇ ಅಲ್ಲ ರಾಷ್ಟ್ರಕ್ಕೆ ಮಾಡಿದ ಅವಮಾನ, ಮಾಂಸವನ್ನು ಮಾರುತ್ತ ಸ್ಥಳದ ಪಾವಿತ್ರ್ಯತೆಯನ್ನು ಹಾಳು ಮಾಡುತ್ತಿರುವ ಇಂತವರನ್ನು ಜಿಲ್ಲಾಡಳಿತ ಕೂಡಲೇ ಜಾಗ ಖಾಲಿ ಮಾಡಲು ಸೂಚಿಸಬೇಕು, ಇಲ್ಲಿ ನೈರ್ಮಲ್ಯ, ಸಮಾಧಿಯ ಪಾವಿತ್ರ್ಯತೆ ಕಾಪಾಡುವ ಕೆಲಸವನ್ನು ಸರ್ಕಾರ ತುರ್ತಾಗಿ ಮಾಡಲಿ ಎಂದು ಅವರು ಆಗ್ರಹಿಸಿದ್ದಾರೆ.

## ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ : ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು




ಕರ್ನಾಟಕ ಪ್ರಗತಿಪರ ರಾಜ್ಯ, ಬಹುತೇಕ ಸರ್ಕಾರಿ ನೌಕರರ ಪ್ರಾಮಾಣಿಕ ಕರ್ತವ್ಯಪ್ರಜ್ಞೆಯಿಂದ ರಾಜ್ಯ ಆರ್ಥಿಕವಾಗಿ ಪ್ರಗತಿ ಸಾಧಿಸಿದೆ. ನಿಮ ಕಾರಣದಿಂದ ರಾಜ್ಯ ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲೇ ಎರಡನೇ ರಾಜ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ಸೂಚಿಸಿದರು. ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನು ಉದ್ಘಾಟಿಸಿ, 2023 ನೇ ಸಾಲಿನ ರಾಜ್ಯಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು. ಸಮಾಜದ ನಾಲ್ಕೂ ಅಂಗಗಳಾದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ, ಪತ್ರಿಕಾ ರಂಗದ ಕೆಲಸ ಸಂವಿಧಾನದ ಆಶಯವನ್ನು ಈಡೇರಿಸುವುದೇ ಆಗಿದೆ. ಸಂವಿಧಾನದ ಆಶಯದಂತೆ ಜಾತ್ಯತೀತ ಸಮಾಜ ನಿರ್ಮಿಸಿ, ಜಾತಿ ಅಸಮಾನತೆಯನ್ನು ಅಳಿಸುವುದಾಗಿದೆ ಎಂದರು.

ಬುದ್ಧ, ಬಸವ, ಗಾಂಧಿ ಹೇಳಿದ್ದನ್ನೇ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅಳವಡಿಸಿದ್ದಾರೆ.

ಇವರೆಲ್ಲರ ಆಶಯದಂತೆ ನಾವು ಸಂವಿಧಾನ ಪಾಲಿಸಿ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

5.5 ಲಕ್ಷ ಸರ್ಕಾರಿ ನೌಕರರಿಗೆ ಇಂದಿನ ಪ್ರಶಸ್ತಿ ಪುರಸ್ಕೃತರು ಸ್ಫೂರ್ತಿಯಾಗಬೇಕು. ಪ್ರಶಸ್ತಿ ಪುರಸ್ಕೃತರ ಜವಾಬ್ದಾರಿ ಈಗ ಹೆಚ್ಚಾಗಿದೆ. ಹೀಗಾಗಿ ಎಲ್ಲಾ ಸರ್ಕಾರಿ ನೌಕರರು ಕರ್ತವ್ಯಪ್ರಜ್ಞೆ ಹೆಚ್ಚಿಸಿ ಕೊಂಡು ಜನರ ಸೇವೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂದರು. ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಸಿಗದ ಹೊರತು ನಮಗೆ ಸಿಕ್ಕಿರುವ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ.



ಹೀಗಾಗಿ ಅಸಮಾನತೆಯನ್ನು ಬೇರು ಸಹಿತ ಕಿತ್ತು ಹಾಕುವ ದಿಕ್ಕಿನಲ್ಲಿ ನಾವು ಕರ್ತವ್ಯ ನಿರ್ವಹಿಸಬೇಕು ಎಂದು ಕರೆ ನೀಡಿದರು.

30 ಸರ್ಕಾರಿ ಅಧಿಕಾರಿ, ನೌಕರರಿಗೆ ಸರ್ವೋತ್ತಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. 50 ಸಾವಿರ ರೂ. ನಗದು, ಪ್ರಶಸ್ತಿ ಪತ್ರ, ಫಲಕ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕರಾದ ರಿಜ್ವಾನ್ ಅರ್ಷದ್, ಅಶೋಕ್ ಪಟ್ಟಣ್, ವಿಜಯಾನಂದ ಕಾಶಪ್ಪನವರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವಗುಪ್ತ, ರಾಜ್ಯ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

## ಈ ಬಾರಿ ವಾಡಿಕೆಗಿಂತ ಹೆಚ್ಚು ಬೇಸಿಗೆ ಮಳೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪೂರ್ವ ಮುಂಗಾರು ಮಳೆ ಚೇತರಿಕೆ ಕಂಡಿದ್ದು, ರಾಜ್ಯದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತಿದೆ. ಹವಾಮಾನ ಮುನ್ಸೂಚನೆ ಪ್ರಕಾರ ಇನ್ನೂ ಮೂರು ದಿನಗಳ ಕಾಲ ಮಳೆ ಮುಂದುವರೆಯಲಿದೆ. ರಾಜ್ಯದ ಕರಾವಳಿ, ದಕ್ಷಿಣ ಒಳನಾಡು, ಉತ್ತರ ಒಳ ನಾಡಿನಲ್ಲಿ ಅಲ್ಲಲ್ಲಿ ಚದುರಿದಂತೆ ಮಳೆಯಾಗಲಿದೆ.

ಕೆಲವೆಡೆ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಒಳನಾಡಿನಲ್ಲಿ ಟ್ರಫ್ ನಿರ್ಮಾಣವಾಗಿರುವ ಪರಿಣಾಮ ಭಾಗಶಃ ಮೋಡ ಕವಿದ ವಾತಾವರಣವಿದ್ದು, ಸಂಜೆ ಹಾಗೂ ರಾತ್ರಿ ವೇಳೆ ಕೆಲವೆಡೆ ಮಳೆಯಾಗುತ್ತಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ, ನಿನ್ನೆ ಕೂಡ ಚಿತ್ರದುರ್ಗ ಜಿಲ್ಲೆಯಲ್ಲಿ ವ್ಯಾಪಕ ಪ್ರಮಾಣದ ಮಳೆಯಾಗಿದೆ.

ವಿಜಯಪುರ, ದಾವಣಗೆರೆ, ತುಮಕೂರು, ಶಿವಮೊಗ್ಗ, ಕೊಪ್ಪಳ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಉಡುಪಿ, ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ. ಹಾವೇರಿ, ಚಿಕ್ಕಬಳ್ಳಾಪುರ, ರಾಯಚೂರು, ಮೈಸೂರು, ದ.ಕನ್ನಡ, ಗದಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಚದುರಿದಂತೆ ಮಳೆಯಾದರೆ, ರಾಮನಗರ, ಬೀದರ್, ಕೋಲಾರ, ಚಾಮರಾಜನಗರ, ಕಲಬುರಗಿ, ಮಂಡ್ಯ, ಉ.ಕನ್ನಡ, ಬಾಗಲಕೋಟೆ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಕೆಲವೆಡೆ ಮಾತ್ರ ಮಳೆಯಾಗಿದೆ.

## ರೋಗ ಹರಡುವ ತಾಣವಾದ ಶೌಚಾಲಯಗಳು

• ಉದಯವಾಹಿನಿ, ದೊಡ್ಡಬಳ್ಳಾಪುರ

ದಿನೇ ದಿನೇ ವೇಗವಾಗಿ ಬೆಳೆಯುತ್ತಿರುವ ನಗರದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳು ಇಲ್ಲದೆ ಇರುವುದು ಒಂದೆಡೆ ಯಾದರೆ, ಇರುವ ಶೌಚಾಲಯಗಳಲ್ಲಿ ಗಲೀಜು ತಾಂಡವವಾಡುತ್ತಿದ್ದು, ಸ್ವಚ್ಛ ಶೌಚಾಲಯ ನಗರದ ಜನತೆ ಮರಿಚೀಕೆಯಾಗಿದೆ. ನಗರದ ಜನ ಸಂಖ್ಯೆ ಈಗ 1.10 ಲಕ್ಷಕ್ಕೆ ಮುಟ್ಟಿದೆ ಎಂದು ನಗರಸಭೆ ಅಂದಾಜಿಸಿದೆ.

ಇದಲ್ಲದೆ ನಗರದ ಕೂಗಳತೆ ದೂರದ ಬಾಶೆಟ್ಟಿ ಹಳ್ಳಿ ಕೈಗಾರಿಕಾ ಪ್ರದೇಶಕ್ಕೆ ಪ್ರತಿ ದಿನ ಕೆಲಸಕ್ಕೆ ಬಂದು ಹೋಗುವ ಕಾರ್ಮಿಕರು ಸೇರಿದಂತೆ ಸಾವಿರಾರು ಜನ ನಗರಕ್ಕೆ ಬಂದು ಹೋಗುತ್ತಾರೆ. ಆದರೆ ಸುಸಜ್ಜಿತವಾದ ಒಂದು ಸಾರ್ವಜನಿಕ ಶೌಚಾಲಯ, ಸ್ನಾನ ಗೃಹ ಇಲ್ಲ. ಇದರಿಂದ ಸಾರ್ವಜನಿಕರು ಮತ್ತು ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಸ್ವಚ್ಛ ಭಾರತ


ಉದಯವಾಹಿನಿ ಚಿತ್ರ

ಎಂಬುದು ಹೆಸರಿಗೆ ಸೀಮಿತವಾಗಿದೆ.

ನಗರದ ಸ್ಥಳೀಯ ಆಡಳಿತ, ಅಲ್ಲಿನ ಅಧಿಕಾರಿಗಳು, ಜನಪ್ರತಿನಿಧಿ ಗಳು, ಕ್ಷೇತ್ರದ ಶಾಸಕರು ಈ ಬಗ್ಗೆ ಇಚ್ಛಾಸಕ್ತಿ ತೋರುತ್ತಿಲ್ಲ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಒಂದೊಂದು ಶೌಚಾಲಯಗಳ ಸ್ಥಿತಿಯನ್ನು ನೋಡಿದರೆ ಒಮ್ಮೆ ಇಲ್ಲಿಗೆ ಹೋಗಿ ಬಂದವರು ಮತ್ತೆಂದೂ ಇಲ್ಲಿಗೆ ಹೋಗಲು ಮನಸ್ಸು ಮಾಡುವುದಿಲ್ಲ. ತುರ್ತು ಸಂದರ್ಭದಲ್ಲಿ ಇಲ್ಲಿನ ಶೌಚಾಲಯಗಳಿಗೆ ಹೋಗಿ ಬಂದರೆ ರೋಗಗಳು ಹರಡುವ ಭೀತಿ ತಪ್ಪಿದ್ದಲ್ಲ ಎನ್ನುತ್ತಾರೆ ಸಾರ್ವಜನಿಕರು.

ನಗರದ ವಿವಿಧ ಕಡೆಗಳಲ್ಲಿ ಇರುವ ಶೌಚಾಲಯಗಳಲ್ಲಿಯೂ ಕನಿಷ್ಠ ಸ್ವಚ್ಛತೆ ಮತ್ತು ಕನಿಷ್ಠ ಸೌಲಭ್ಯಗಳು ಇಲ್ಲ.

> **ರೈಲ್ವೆ ನಿಲ್ದಾಣ ಬಸ್ ನಿಲ್ದಾಣಗಳಿಗೆ ಹೊರಗಿನಿಂದ ಬರುವ ಪ್ರಯಾಣಿಕರು ಕೆಲವು ಸಂದರ್ಭಗಳಲ್ಲಿ ಬೆಳಗ್ಗೆ ಸ್ನಾನ ಮಾಡುವ ಅನಿವಾರ್ಯತೆ ಇರುತ್ತದೆ. ಆದರೆ ಇಲ್ಲಿನ ಶೌಚಾಲಯಗಳಲ್ಲಿ ಸ್ವಚ್ಛತೆಯೇ ಇಲ್ಲ. ಶೌಚಕ್ಕೆ ಹೋಗಲು ಅಸಹ್ಯ ಪಟ್ಟಿಕೊಳ್ಳುವಾಗ ಸ್ನಾನ ಮಾಡಲು ಹೇಗೆ ಸಾಧ್ಯ?**
> **-ಪ್ರಕಾಶ್ ಡಿ.ಕ್ರಾಸ್ ನಿವಾಸಿ**

# ಬೆಂಗಳೂರಿನಲ್ಲಿ ವಾಯುಪಡೆ ಅಧಿಕಾರಿಯ ಮೇಲೆ ಹಲ್ಲೆ

### ಪೊಲೀಸ್ ಠಾಣೆಯಲ್ಲಿ ದೂರು ಕೊಡಲು ಹೋದಾಗ ಸರಿಯಾಗಿ ಸ್ಪಂದಿಸಲಿಲ್ಲ ಎಂದು ಆರೋಪ

• ಉದಯವಾಹಿನಿ, ಬೆಂಗಳೂರು



**ತಮ್ಮ ಪರಿಸ್ಥಿತಿ ವಿವರಣೆ**

ಆತಂಕಕಾರಿ ಬೆಳವಣಿಗೆಯೊಂದರಲ್ಲಿ ಏ. 20ರಂದು ಬೆಂಗಳೂರಿ ನಲ್ಲಿ ಭಾರತೀಯ ವಾಯುಪಡೆಯ ಅಧಿಕಾರಿಯೊಬ್ಬರನ್ನು ಸ್ಥಳೀಯನೊಬ್ಬ ಮನಬಂದಂತೆ ಥಳಿಸಿದ್ದಾನೆ. ಆ ಅಧಿಕಾರಿಯೂ ಈ ಬಗ್ಗೆ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ವಿಡಿಯೋದಲ್ಲಿ ಅವರ ರಕ್ತಸಿಕ್ಕ ಮುಖವನ್ನು ಕಾಣಬಹುದಾಗಿದ್ದು ಬೈಕಿನಲ್ಲಿ ತಮ್ಮ ಕಾರನ್ನು ಅಡ್ಡಗಟ್ಟಿದ ವ್ಯಕ್ತಿಯೊಬ್ಬ ಜಗಳ ತೆಗೆದು ಹೊಡೆದು ಹೋಗಿದ್ದಾನೆ ಎಂದು ಆರೋಪಿಸಿದ್ದಾರೆ.

ಪೊಲೀಸರು ಆ ವ್ಯಕ್ತಿಯ ತಲಾಷ್ ನಲ್ಲಿದ್ದಾರೆ. ಸಿವಿ ರಾಮನ್ ನಗರದಲ್ಲಿರುವ ಡಿಫೆನ್ಸ್ ರಿಸರ್ಚ್ ಆ್ಯಂಡ್ ಡೆವಲಪ್ ಮೆಂಟ್ ಆರ್ಗನೈಸೇಷನ್ (ಡಿಆರ್‌ಡಿಒ) ಕಾಲೋನಿಯ ನಿವಾಸಿಯಾಗಿರುವ ಬೋಸ್, ಅವರ ಪತ್ನಿ ಮಧು ಮಿತಾ ಅವರಿಗೆ ಇಂಥದ್ದೊಂದು ಕೆಟ್ಟ ಅನುಭವವಾಗಿದೆ. ಘಟನೆಯ ನಂತರ ವಿಡಿಯೋ ಮಾಡಿ ಅವರು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

**ಆಗಿದ್ದೇನು?**: ಈ ದಂಪತಿ ವಾಯುಪಡೆಯ ಸಿಬ್ಬಂದಿ. ಬೋಸ್ ಅವರು, ವಾಯುಪಡೆಯಲ್ಲಿ ವಿಂಗ್ ಕಮಾಂಡರ್ ಆಗಿದ್ದರೆ, ಅವರ ಪತ್ನಿ ಮಧುಮಿತಾ ಅವರು ಸ್ಕ್ವಾಡ್ರನ್ ಲೀಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಏ. 20ರಂದು ಬೋಸ್ ಅವರು ತಮ್ಮ ನಿವಾಸದಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ್ದಾಗ ಅವರ ಮೇಲೆ ಹಲ್ಲೆಯಾಗಿದೆ. ಅಂದು, ಬೋಸ್. ಅವರನ್ನು ಏರ್ ಪೋರ್ಟ್ ಗೆ ಡ್ರಾಪ್ ಮಾಡಲು ಅವರ ಪತ್ನಿಯೂ ಜೊತೆಯಲ್ಲಿ ಹೊರಟಿದ್ದರು. ಮಧುಮಿತಾ ಅವರೇ ಕಾರು ಚಲಾಯಿಸುತ್ತಾ ಸಾಗುತ್ತಿದ್ದರು. ಆಗ ಬೈಕಿನಲ್ಲಿ ಬಂದ ವ್ಯಕ್ತಿಯೊಬ್ಬ ತಮ್ಮ ಮೇಲೆ ಹಲ್ಲೆ ಮಾಡಿದ್ದಾಗಿ ಬೋಸ್ ಹೇಳಿದ್ದಾರೆ.

ವಿಡಿಯೋದಲ್ಲಿ ಅವರು, ಕಾರಿನಲ್ಲಿ ನಾವು ವಿಮಾನ ನಿಲ್ದಾಣದ ಕಡೆಗೆ ಸಾಗುತ್ತಿದ್ದಾಗ ಇದ್ದಕ್ಕಿದ್ದಂತೆ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬ ತಮ್ಮ ಕಾರಿಗೆ ಅಡ್ಡ ಹಾಕಿ, ಕಾರಿನಲ್ಲಿದ್ದ ನಮ್ಮತ್ತ ಕೈ ತೋರಿಸಿ ಕನ್ನಡದಲ್ಲಿ ಬೈಯ್ಯಲಾರಂಭಿಸಿದ. ಆತ ಏನು ಬೈಯ್ಯುತ್ತಿದ್ದಾನೆ ಎಂಬುದು ಅರ್ಥವಾಗದೇ ಇದ್ದರೂ ತಮ್ಮನ್ನು ನಿಂದಿಸುತ್ತಿರುವುದು ಗೊತ್ತಾಗುತ್ತಿತ್ತು. ಮೊದಲು ನನ್ನನ್ನು ಬೈಯ್ಯುತ್ತಿದ್ದಾತ ಆನಂತರ ನನ್ನ ಪತ್ನಿಯನ್ನು ಬೈಯ್ಯಲು ಶುರು ಮಾಡಿದ. ಆಗ ನನಗೆ ತಡೆಯಲಾಗಲಿಲ್ಲ. ನಾನು ಕಾರಿನಿಂದ ಇಳಿದು ಯಾಕೆ ಬೈಯ್ಯುತ್ತಿದ್ದೀರಿ ಎಂದು ಕೇಳಲು ಹೋದೆ. ಅಷ್ಟರಲ್ಲಿ ಆತ ತನ್ನ ಬೈ ಕೀಲಿಕೈನಿಂದ ನನ್ನ ಮೇಲೆ ಬಾರಿಸಿದ, ಬೈಕ್ ಕೀಲಿ ಹಣೆಗೆ ಬಡಿದಿದ್ದರಿಂದಾಗಿ ನನಗೆ ಗಾಯವಾಗಿ ರಕ್ತ ಸುರಿಯಲಾರಂಭಿಸಿತು ಎಂದು ಹೇಳಿದ್ದಾರೆ. ಆನಂತರ ಜಗಳ ಮತ್ತಷ್ಟು ಜೋರಾಯಿತು. ಆ ಸಂದರ್ಭದಲ್ಲಿ ತೀವ್ರ ಕೋಪದಲ್ಲಿದ್ದ ಆತ ಮತ್ತೆ ನನ್ನ ಮೇಲೆ ಹಲ್ಲೆ ಮಾಡಿದ. ಅಷ್ಟರಲ್ಲಿ ಜನರು ಸೇರಿದ್ದರಾದರೂ ಎಲ್ಲರೂ ಆ ಬೈಕಿನವನಿಗೇ ಸಪೋರ್ಟ್ ಮಾಡಲಾರಂಭಿಸಿದರು. ಇದು ನನಗೆ ಬೇಸರವೂ ಆಯ್ತು. ನನಗೆ ರಕ್ತ ಸುರಿಯುತ್ತಿದ್ದರೂ ಯಾರೂ ನನ್ನ ಬಗ್ಗೆ ಕನಿಕರದ ಮಾತು ಆಡಲಿಲ್ಲ ಎಂದು ಹೇಳಿದ್ದಾರೆ.

ಘಟನೆಯ ನಂತರ ನಾವು ಹತ್ತಿರದ ಪೊಲೀಸ್ ಠಾಣೆಗೆ ದೂರು ಕೊಡಲು ಹೋದರೂ ಅಲ್ಲಿ ಪೊಲೀಸರು ಸರಿಯಾಗಿ ಸ್ಪಂದಿಸಲಿಲ್ಲ. ಹಾಗಾಗಿ, ನಾವು ವಾಪಸ್ ತೆರಳಿದೆವು ಎಂದು ಹೇಳಿದ್ದಾರೆ.

**ಇದು ರೋಡ್ ರೇಜ್ ಘಟನೆಯಾ?**

**ಇತ್ತೀಚೆಗೆ ಬೆಂಗಳೂರಿನಲ್ಲಿ ರಸ್ತೆಯಲ್ಲಿ ಜಗಳ, ಹಲ್ಲೆಯ ಘಟನೆಗಳು ನಡೆಯುತ್ತಿವೆ. ಬಹುಶಃ ಇದು ಕೂಡ ಇದೇ ರೀತಿಯ ಪ್ರಕರಣವಾಗಿರಬಹುದು ಎಂದು ಮೇಲ್ನೋಟಕ್ಕೆ ಅನ್ನಿಸುತ್ತಿದೆ. ಪೊಲೀಸರು ಈಗಲೇ ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ, ಅವರ ಪ್ರಕಾರ ಹಲ್ಲೆಗೊಳಗಾದ ಬೋಸ್ ಅವರು ಪೊಲೀಸರಲ್ಲಿ ದೂರು ದಾಖಲಿಸಿಲ್ಲ. ಬೈಕಿನವ, ಬೋಸ್ ಹಾಗೂ ಅವರ ಪತ್ನಿ ಯಾರನ್ನೂ ಸಂಪರ್ಕಿಸಲಾಗಿಲ್ಲ. ಆದರೆ, ಮಧುಮಿತಾ ಅವರ ಪರಿಚಯದಡಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದ್ದಾರೆ.**

**ಸ್ಥಳೀಯನೊಬ್ಬ ಮನಬಂದಂತೆ ಥಳಿಸಿದ್ದಾನೆ. ಹಲ್ಲೆಯಾದ ನಂತರ ಖುದ್ದು ಅಧಿಕಾರಿಯೇ ವಿಡಿಯೋ ಮೂಲಕ ತಮ್ಮ ಸ್ಥಿತಿಯನ್ನು ವಿವರಿಸಿದ್ದಾರೆ. ಆ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ವಿಡಿಯೋದಲ್ಲಿ ಅವರ ರಕ್ತಸಿಕ್ಕ ಮುಖವನ್ನು ಕಾಣಬಹುದಾಗಿದೆ. ಬೆಂಗಳೂರಿನ ಸಿವಿ ರಾಮನ್ ನಗರದ ಡಿಆರ್‌ಡಿಒ ನಗರದಲ್ಲಿ ವಾಸಿಸುತ್ತಿರುವ ಅವರು ತಮ್ಮ ಮನೆಯಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೊರಟಿದ್ದಾಗ ಈ ಘಟನೆ ನಡೆದಿದೆ.**

# ಸಿಎಂ ಮನೆಗೆ ಪಾದಯಾತ್ರೆ

• ಉದಯವಾಹಿನಿ, ಶ್ರೀರಂಗಪಟ್ಟಣ

ಸೇವೆ ಕಾಯಂ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನವಕರ್ನಾಟಕ ಅಂಗವಿಕಲರ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತರು, ವಿವಿಧೋದ್ದೇಶ ಪುನರ್ ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ ವಸತಿ ಕಾರ್ಯಕರ್ತರು ಪಟ್ಟಣದಿಂದ ಮೈಸೂರಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸದವರೆಗೆ ಸೋಮವಾರ ಪಾದಯಾತ್ರೆ ಆರಂಭಿಸಿದರು. ಇಲ್ಲಿನ ಶ್ರೀರಂಗನಾಥಸ್ವಾಮಿ ದೇವಾಲಯದಿಂದ ಪಾದಯಾತ್ರೆ ಆರಂಭವಾಯಿತು. ರಾಜ್ಯ ವಿವಿಧ ಜಿಲ್ಲೆಗಳ ನೂರಾರು ಅಂಗವಿಕಲರ ಪುನರ್ ವಸತಿ ಕಾರ್ಯಕರ್ತರು ವಿಧಾನಸೌಧ, ಚೆಕ್ ಪೋಸ್ಟ್, ನಗುವನಹಳ್ಳಿ ಗೇಟ್ ಮಾರ್ಗವಾಗಿ ಮೈಸೂರು ಕಡೆಗೆ ಹೆಜ್ಜೆ ಹಾಕಿದರು. ಉರಿ ಬಿಸಿಲನ್ನೂ ಲೆಕ್ಕಿಸದೆ ಊರುಗೋಲು, ತ್ರಿಚಕ್ರ ವಾಹನ ಸಹಿತ ಮುನ್ನಡೆದರು. ಕೆಲವರು ಡಾಂಬರು ರಸ್ತೆಯಲ್ಲಿ ತೆವಳುತ್ತಲೇ ಸಾಗಿದರು. ಅಂಗವಿಕಲರು ಹೀಗೆ ಸಾಗುತ್ತಿದ್ದ ದೃಶ್ಯ ನೋಡುಗರ ಮನ ಕಲಕುವಂತೆ ಮಾಡಿತು. 18 ವರ್ಷಗಳ ಹಿಂದೆ ತಿಂಗಳಿಗೆ 750 ಗೌರವ ಧನದಿಂದ ಸೇವೆ ಆರಂಭಿಸಿದ್ದು, ಪ್ರಸ್ತುತ 9000 ಗೌರವ ಧನ ನೀಡಲಾಗುತ್ತಿದೆ.

ಅಂಗವಿಕಲರು, ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಅಂಗವಿಕಲರು ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದು, ನಮ್ಮ ಸೇವೆಯನ್ನು ಕನಿಷ್ಠ ವೇತನ ಕಾಯಿದೆಗೆ ಒಳಪಡಿಸಿ ಕಾಯಂ ಮಾಡಬೇಕು ಎಂದು ಸಂಘಟನೆಯ ಮುಖಂಡ ಜೆ. ದೇವರಾಜು ಆಗ್ರಹಿಸಿದರು.

# ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ವಾಟಾಳ್ ಪ್ರತಿಭಟನೆ

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ತಲೆಯ ಮೇಲೆ ಖಾಲಿ ಸಿಲಿಂಡರ್ ಎತ್ತಿಕೊಂಡು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಇಲ್ಲಿನ ಹಾರ್ಡಿಂಗ್ ವೃತ್ತದ ಬಳಿ ಭಾನುವಾರ ಕೇಂದ್ರ, ರಾಜ್ಯ ಸರಕಾರ ವಿರುದ್ಧ ಪ್ರತಿಭಟನೆ ನಡೆಸಿದರು. ಡೀಸೆಲ್, ಪೆಟ್ರೋಲ್, ಗ್ಯಾಸ್ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರಕಾರ ಏರಿಸಿದರೆ, ರಾಜ್ಯ ಸರಕಾರವು ಹಾಲು, ಮೊಸರು, ವಿದ್ಯುಚ್ಛಕ್ತಿ, ನೀರಿನ ದರ, ಬಸ್ ದರ ಏರಿಸಿದ್ದಾರೆ.

ಎರಡು ಸರಕಾರಗಳನ್ನು ಜನ ಪ್ರಶ್ನೆ ಮಾಡದೇ ಇರುವುದರಿಂದ, ಬೆಲೆ ಏರಿಕೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ದಿನೇ ದಿನೇ ಬೆಲೆಯಾಗುತ್ತಿದ್ದರೂ, ಕೇಂದ್ರ, ರಾಜ್ಯ ಸರಕಾರ ವಿರುದ್ಧ ಜನ ಪ್ರತಿಭಟನೆ ಮಾಡುತ್ತಿಲ್ಲ, ಸರಕಾರಗಳ ವಿರುದ್ಧ ಸಾರ್ವಜನಿಕರು ಧ್ವನಿ ಎತ್ತಬೇಕು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಭ್ರಷ್ಟರ ಪಕ್ಷಗಳಾಗಿವೆ. ಭ್ರಷ್ಟಾಚಾರದ ಬಗ್ಗೆ ಭ್ರಷ್ಟರೆ ಹೋರಾಟ ನಡೆಸುತ್ತಿದ್ದಾರೆ. ಬೆಲೆ ಏರಿಕೆ ಮಾಡಿ ಜನಾಕ್ರೋಶ ಯಾತ್ರೆ, ಬೆಲೆ ಮಾಡುತ್ತಿದ್ದಾರೆ. ರಾಜಕಾರಣಿಗಳಿಗೆ ಬೆಲೆ ಏರಿಕೆ ಪರಿಣಾಮ ಬೀರುವುದಿಲ್ಲ, ಜನ ಸಾಮಾನ್ಯರು ಇವನ್ನೆಲ್ಲ ಪ್ರಶ್ನಿಸಬೇಕು ಎಂದರು. ಮೈಸೂರಿನಲ್ಲಿ 40 ಮರಗಳ ಹನನ ವಿಚಾರವಾಗಿ ಮಾತನಾಡಿದ ಅವರು ಇಂತಹ ನಗರದಲ್ಲಿ ದೊಡ್ಡವರು ಯಾರು ಇಲ್ಲವೇ ರಾಜಕಾರಣಿಗಳು ಏನು ಮಾಡುತ್ತಿದ್ದಾರೆ.

ಮೈಸೂರು ಮಹಾರಾಣಿ ಏನು ಮಾಡುತ್ತಿದ್ದಾರೆ ಮರಗಳ ಹನನ ಖಂಡಿಸಿ ಸ್ಥಳದಲ್ಲೆ ಮಹಾರಾಣಿ ಕೂರಬೇಕಿತ್ತು. ಅದನ್ನ ಬಿಟ್ಟು ಚಾಮರಾಜನಗರದಲ್ಲಿ ಜಾಗ ಬೇಕು ಎಂದು ಹೋಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚಾಮರಾಜನಗರ ಜಿಲ್ಲೆಯಲ್ಲಿ ಅಂದಿನ ಮಹಾರಾಜರು, ಜನರಿಗೆ ಜಾಗ ಕೊಟ್ಟಿದ್ದಾರೆ. ಆ ಜಾಗವನ್ನು ಮೈಸೂರು ಮಹಾರಾಣಿಯವರು ತಮ್ಮಗೆ ಖಾತೆ ಮಾಡಿಕೊಡಿ ಎಂದು ಕೇಳಿದಾರು. ಅಲ್ಲಿವಾಸ ಮಾಡುವವರ ಜನರಿಗೆ ಖಾತೆ ಮಾಡಿಕೊಡಿ ಅಂತ ಜಿಲ್ಲಾಧಿಕಾರಿಗೆ ಹೇಳಿ, ದೊಡ್ಡ ವ್ಯಕ್ತಿಗಳಾಗಬೇಕು ಎಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರು, ಕಸಾಪ ಸಂವಿಧಾನದಲ್ಲಿ ಯಾವುದೇ ಬೈಲಾವನ್ನು ತಿದ್ದುಪಡಿ ಮಾಡಬಾರದು. ಇವರು ಹೇಳಿದಂತೆ ಕೇಳಲು ಇವರೇನು ಸರ್ವಾಧಿಕಾರಿಯೇ? ಸಾಹಿತ್ಯ ಸಮ್ಮೇಳನವನ್ನು ಪ್ರತಿವರ್ಷ ಮಾಡದೇ, ಐದು ವರ್ಷಕ್ಕೊಮ್ಮೆ ಮಾಡಲಿ ಎಂದರು. ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರ ಶಿವಶಂಕರ್, ತೇಜೇಶ್ ಲೋಕೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ಪಾರ್ಥಸಾರಥಿ, ರಾಘವೇಂದ್ರ, ಮಧುವನಹಳ್ಳಿ, ಕೃಷ್ಣಪ್ಪ, ತಾಯೂರು ಗಣೇಶ್, ಶಿವರಾಂಗೌಡ, ಹನುಮಂತಯ್ಯ, ತ್ಯಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

# ಮತ್ತೆ ಚಿಗುರೊಡೆದ ಕೆಳಸೇತುವೆ ಕನಸು

## ಮಾದಿಗೊಂಡನಹಳ್ಳಿ ಬಳಿ ಅಂಡರ್‌ಪಾಸ್ ನಿರ್ಮಿಸುವಂತೆ ಪ್ರಾಧಿಕಾರಕ್ಕೆ ಪತ್ರ ಬರೆದ ಸಂಸದ

• ಉದಯವಾಹಿನಿ, ಮಾಗಡಿ

ರಾಷ್ಟ್ರೀಯ ಹೆದ್ದಾರಿ- 75ರ ಮಾದಿಗೊಂಡನಹಳ್ಳಿ ವೃತ್ತದ ಬಳಿ ಕೆಳಸೇತುವೆ ನಿರ್ಮಿಸುವಂತೆ ಗ್ರಾಮಸ್ಥರು ಒತ್ತಾಯಿಸುತ್ತಿದ್ದಾರೆ. ಅಪಘಾತಗಳು ಹೆಚ್ಚುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿ ದಾಟುವುದೇ ಈ ಭಾಗದ ಜನರಿಗೆ ಸಾಹಸ.

ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯು ಕುದೂರು ಹೋಬಳಿಯ ಮಾದಿಗೊಂಡನಹಳ್ಳಿ ವೃತ್ತದ ಬಳಿ 2 ಕಡೆ ಇಳಿಜಾರು ಇರುವುದರಿಂದ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಈ ಭಾಗದ ಜನರಿಗೆ ರಸ್ತೆ ದಾಟುವುದೇ ಸಾಹಸ. ಕಳೆದ ಆರು ತಿಂಗಳಲ್ಲಿ ನಡೆದ ಅಪಘಾತದಲ್ಲಿ 7ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ತುರ್ತಾಗಿ ಕೆಳಸೇತುವೆ ನಿರ್ಮಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

> **ಮಾದಿಕೊಂಡನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ದಾಟುವುದೇ ಸವಾಲಾಗಿದೆ. ಕೆಳಸೇತುವೆ ನಿರ್ಮಿಸಬೇಕು. ಇಲ್ಲವಾದಲ್ಲಿ ಅಪಘಾತಗಳು ಹೆಚ್ಚುತ್ತವೆ. ಶೀಘ್ರ ಅಂಡರ್ ಪಾಸ್ ನಿರ್ಮಾಣವಾಗುವ ವಿಶ್ವಾಸವಿದೆ.**
> **-ಮಾರುತಿ ಗೌಡ**
> **ಮಾದಿಗೊಂಡನಹಳ್ಳಿ ಗ್ರಾ.ಪಂ.ಮಾಜಿ ಅಧ್ಯಕ್ಷ**

**ಭರವಸೆ ಹೆಚ್ಚಿಸಿದ ಸಂಸದರ ಪತ್ರ:** ಹೆದ್ದಾರಿ ಅಭಿವೃದ್ಧಿ ಸಮಯದಲ್ಲಿ ಮಾದಿಗೊಂಡನಹಳ್ಳಿ ಗ್ರಾಮದ ಬಳಿ ಸಾರ್ವಜನಿಕರು ಕೆಳಸೇತುವೆ ಅಥವಾ ಸರ್ವಿಸ್ ರಸ್ತೆ ಬಿಡುವಂತೆ ರಾಷ್ಟ್ರೀಯ ಹೆದ್ದಾರಿ


ಉದಯವಾಹಿನಿ ಚಿತ್ರ

ಪ್ರಾಧಿಕಾರದ ವಿರುದ್ಧ ದೊಡ್ಡಮಟ್ಟದಲ್ಲೇ ಗಲಾಟೆ ಮಾಡಲಾಗಿತ್ತು. ಆದರೆ ಹೆದ್ದಾರಿ ಪ್ರಾಧಿಕಾರ ರಸ್ತೆ ವಿಸ್ತರಣೆ ಮಾಡಿ ಕಾಮಗಾರಿ ಆರಂಭಿಸಿತು. ಈ ಬಗ್ಗೆ ಮಾಜಿ ಶಾಸಕ ಬಾಲಕೃಷ್ಣ 2017ರಲ್ಲಿ ಮಾದಿಗೊಂಡನಹಳ್ಳಿ ಬಳಿ ಕೆಳಸೇತುವೆ ನಿರ್ಮಾಣ, ಹೈಮಾಸ್ಟ್ ದೀಪ ನಿರ್ಮಾಣ ಮಾಡುವಂತೆ ಪತ್ರ ಬರೆದಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸಂಸದ ಡಾ.ಸಿ.ಎನ್. ಮಂಜುನಾಥ್, ಮಾಜಿ ಶಾಸಕ ಎ.ಮಂಜುನಾಥ್, ಮಾದಿಗೊಂಡನಹಳ್ಳಿ ಗ್ರಾಮಸ್ಥರ ಮನವಿ ಮೇರೆಗೆ ಏಪ್ರಿಲ್ 15ರಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಾಸನ ವಿಭಾಗದ ಅಧಿಕಾರಿಗಳಿಗೆ ಪತ್ರ ಬರೆದು ಕೂಡಲೇ ಮಾದಿಗೊಂಡನಹಳ್ಳಿ ಬಳಿ ಎರಡು ಕಡೆ ಕೆಳಸೇತುವೆ ನಿರ್ಮಿಸುವಂತೆ ಪತ್ರ ಬರೆದಿರುವುದು ಈ ಭಾಗದ ಜನರ ಕೆಳಸೇತುವೆಯ ಆಸೆಯನ್ನು ಮತ್ತೆ ಚಿಗುರಿಸಿದೆ.

**ಮಾದಿಗೊಂಡನಹಳ್ಳಿ ಗ್ರಾ.ಪಂ. ಕೇಂದ್ರಸ್ಥಾನ:** ಮಾದಿಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವಾಗಿದ್ದು ಗ್ರಾಮ ಪಂಚಾಯಿತಿ ಕಚೇರಿ, ಅಂಚೆ ಕಚೇರಿ, ಶಾಲೆ, ಹಾಲಿನ ಕೇಂದ್ರ, ಕಳ್ಳಿಪಾಳ್ಯ ಭಕ್ತ ಮುನೇಶ್ವರ, ನಂದೀಶ್ವರ ದೇವಾಲಯ ಇದ್ದು, ಪ್ರತಿದಿನವೂ ವಿದ್ಯಾರ್ಥಿಗಳು, ಸಾರ್ವಜನಿಕರು ಮಾದಿಗೊಂಡನಹಳ್ಳಿ ವೃತ್ತದ ಬಳಿ ಬರಬೇಕಾಗಿದ್ದು ರಸ್ತೆ ದಾಟುವುದೇ ಸಾಹಸ.

> **ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಗಳು ಹೆಚ್ಚುತ್ತಲೇ ಇವೆ. ಹೆದ್ದಾರಿ ಪ್ರಾಧಿಕಾರ ಅಂಡರ್‌ಪಾಸ್ ನಿರ್ಮಿಸದಿದ್ದರೆ ಪಕ್ಷಾತೀತವಾಗಿ ರಸ್ತೆ ತಡೆದು ಪ್ರತಿಭಟಿಸಲಾಗುವುದು.**
> **-ಎಂ.ಸಿ. ವೆಂಕಟೇಶ್ ಕನ್ನಸಂದ**

ಮಾದಿಗೊಂಡನಹಳ್ಳಿ, ವಾಜರಹಳ್ಳಿ, ಕಳ್ಳಿಪಾಳ್ಯ, ಆಲದಕಟ್ಟೆ, ಮೇಗಲುಪಾಳ್ಯ, ಅರಳಿಮರದಪಾಳ್ಯ, ರಂಗನಾಥಪುರ ಗ್ರಾಮಸ್ಥರಿಗೆ ಪ್ರತಿ ದಿನವೂ ರಾಷ್ಟ್ರೀಯ ಹೆದ್ದಾರಿಯಿಂದ ತೊಂದರೆಯಾಗುತ್ತಿದ್ದು, ಕೂಡಲೇ ಹೆದ್ದಾರಿ ಪ್ರಾಧಿಕಾರ ಎರಡೂ ಕಡೆ ಕೆಳಸೇತುವೆ ನಿರ್ಮಿಸಬೇಕು ಇಲ್ಲದಿದ್ದರೆ ಪ್ರತಿಭಟನೆ ಮಾಡಲಾಗುವುದು ಎಂದು ಮಾದಿಗೊಂಡನಹಳ್ಳಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

> **ಮಾದಿಗೊಂಡನಹಳ್ಳಿ ಬಳಿ ಕೆಳಸೇತುವೆ ನಿರ್ಮಾಣಕ್ಕೆ ಒತ್ತಾಯಿಸಿ ಸಂಸದ ಸಿ.ಎನ್. ಮಂಜುನಾಥ್ ಹೆದ್ದಾರಿ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ಕೇವಲ ಪತ್ರ ಬರೆದರೆ ಸಾಲದು ಪ್ರಾಧಿಕಾರಕ್ಕೆ ಒತ್ತಡ ತರಬೇಕು.**
> **-ಕೆಂಚೇಗೌಡ ಮಾಗಡಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ**

ಶಾಸಕ ಬಾಲಕೃಷ್ಣ ಹೆದ್ದಾರಿ ಪ್ರಾಧಿಕಾರದೊಂದಿಗೆ ಮಾತನಾಡಿ ಕೆಳಸೇತುವೆ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕು ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಾರುತಿ ಗೌಡ ಒತ್ತಾಯಿಸಿದ್ದಾರೆ.

# ತುಕ್ಕು ಹಿಡಿಯುತ್ತಿದೆ ಕುಡಿಯುವ ನೀರಿನ ಘಟಕ

• ಉದಯವಾಹಿನಿ, ಮಳವಳ್ಳಿ

ಪಟ್ಟಣದ 15ನೇ ವಾರ್ಡಿನ ಕೀರ್ತಿನಗರದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆರು ವರ್ಷಗಳಿಂದ ನಿರುಪಯುಕ್ತವಾಗಿದೆ. ಈ ಭಾಗದ ಜನರು ಕುಡಿಯುವ ನೀರಿಗೆ ಪರದಾಡುವಂತಾಗಿದೆ. ಪುರಸಭೆಯ 2019-20ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಶೇ 18ರಷ್ಟು ಅನುದಾನದಲ್ಲಿ ಸುಮಾರು 4 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ಮಿಸಿತ್ತು. ಆದರೆ ಘಟಕಕ್ಕೆ ನೀರಿನ ಸಮರ್ಪಕವನ್ನೇ ನೀಡಿಲ್ಲ, ಅಲ್ಲದೇ ಕಳೆದ ಆರು ವರ್ಷಗಳ ಹಿಂದೆ ಅಳವಡಿಸಿರುವ ಯಂತ್ರಗಳು ತುಕ್ಕು ಹಿಡಿಯುತ್ತಿದೆ.

ಘಟಕ ನಿರ್ಮಾಣಕ್ಕೂ ಮೊದಲೇ ಅಂದರೆ 2019-20ರಲ್ಲಿಯೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪುರಸಭೆಯಿಂದ ಹಣವನ್ನು ವರ್ಗಾಯಿಸಲಾಗಿದೆ.


ಉದಯವಾಹಿನಿ ಚಿತ್ರ

ಘಟಕದಿಂದ 10 ಮೀಟರ್ ದೂರದಲ್ಲಿ ಕೊಳವೆ ಬಾವಿ ಇದೆ. ಅದರ ಸಂಪರ್ಕವನ್ನೇ ಪಡೆದು ಘಟಕಕ್ಕೆ ನೀರು ಪೂರೈಕೆ ಮಾಡಬಹುದಿತ್ತು. ಈ ಬಗ್ಗೆ ಹಲವು ಬಾರಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿದೆ. ಅಲ್ಲದೇ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಂಜಿನಿಯರ್ ಸೇರಿದಂತೆ ಹಲವು ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನುತ್ತಾರೆ 15ನೇ ವಾರ್ಡಿನ ಸದಸ್ಯ ಎಂ.ಆರ್.ರಾಜಶೇಖರ್. ಕೀರ್ತಿನಗರದ ಜನರು ಬೇರೆಯೆಡೆಯಿಂದ ಶುದ್ಧ ಕುಡಿಯುವ ನೀರು ತಂದು ಕುಡಿಯುತ್ತಿದ್ದಾರೆ. ಆರು ವರ್ಷದಿಂದ ಒಂದು ಹನಿ ನೀರು ಬಾರದಿರುವುದು ಸ್ಥಳೀಯರಲ್ಲಿ ಅಸಮಾಧಾನ ಮೂಡಿಸಿದೆ. ಇನ್ನಾದರೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಎಚ್ಚೆತ್ತು ಘಟಕವನ್ನು ದುರಸ್ಥಿ ಮಾಡಿಸಿ ನೀರಿನ ಸಂಪರ್ಕ ನೀಡಿ ಅನುಕೂಲ ಕಲ್ಪಿಸಿಕೊಡಬೇಕು ಎಂಬುದು ಸ್ಥಳೀಯರ ಆಗ್ರಹ.

> **ಈಗಾಗಲೇ ಕೀರ್ತಿನಗರಕ್ಕೆ ಭೇಟಿ ನೀಡಿ ಘಟಕವನ್ನು ಪರಿಶೀಲಿಸಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಘಟಕವನ್ನು ಪುರಸಭೆಗೆ ಹಸ್ತಾಂತರ ಮಾಡಿಲ್ಲ. ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಒಂದು ತಿಂಗಳೊಳಗೆ ಘಟಕಕ್ಕೆ ನೀರಿನ ಸಂಪರ್ಕ ನೀಡಿ ಜನರಿಗೆ ಅನುಕೂಲ ಕಲ್ಪಿಸಲಾಗುವುದು**
> **-ಎಂ.ಸಿ. ನಾಗರತ್ನ**
> **ಪುರಸಭೆ ಮುಖ್ಯಾಧಿಕಾರಿ**

# ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ಶಿಬಿರ ಸಹಕಾರಿ

• ಉದಯವಾಹಿನಿ, ಕೆ.ಆರ್.ಪೇಟೆ.


ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿ, ಸಹಕಾರ, ಸಹಬಾಳ್ವೆ, ಮಾನವೀಯ ಮೌಲ್ಯಗಳು ಮೂಡಲು ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ಆರ್.ಟಿ.ಓ ಮಲ್ಲಿಕಾರ್ಜುನ್ ಹೇಳಿದರು. ಅವರು ತಾಲ್ಲೂಕಿನ ಬೂಕನಕೆರೆ ಗ್ರಾಮದಲ್ಲಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ ಎಸ್ಎಸ್ ಘಟಕ ಹಮ್ಮಿಕೊಂಡಿರುವ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶ್ರಮದಾನ ಶಿಬಿರದಲ್ಲಿ ಭಾಗವಹಿಸಿ ಗೋವುಗಳಿಗೆ ಪೂಜೆ ಸಲ್ಲಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆ ಶಿಬಿರಗಳು ಯುವಜನರಲ್ಲಿ ನಾಯಕತ್ವದ ಗುಣ, ಸೇವಾ ಮನೋಭಾವನೆ, ಪರೋಪಕಾರ ಗುಣಗಳನ್ನು ಬೆಳೆಸುತ್ತವೆ, ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸಿ ಸಾವು ನೋವುಗಳನ್ನು ನೋಡುತ್ತಿದ್ದೇವೆ. ಕಾರಣ ಹುಡುಕಿಕೊಂಡು ಹೋದಾಗ ಯುವ ಸಮೂಹವೇ ಪ್ರಾಣ ಹಾನಿಗೆ ಒಳಗಾಗುತ್ತಿದೆ. ಇದರಿಂದ ಹಲವು ಕುಟುಂಬಗಳು ಕಷ್ಟ ಅನುಭವಿಸುವುದನ್ನು ಕಾಣುತ್ತಿದ್ದೇವೆ. ಆದ್ದರಿಂದ ಬೈಕ್ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮಟ್ ಧರಿಸಬೇಕು, ಕುಡಿದು ವಾಹನ ಚಲಾಯಿಸಬಾರದು, ವಾಹನಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ತ್ರಿಬಲ್ ರೈಡ್, ವೀಲಿಂಗ್ ಮಾಡಬಾರದು. ನಿಮ್ಮನ್ನ ನಂಬಿರುವ ನಿಮ್ಮ ಕುಟುಂಬಗಳು ಅನಾಥವಾಗುತ್ತವೆ, ಹಾಗಾಗಿ ಯುವಜನತೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ದೇಶಕ್ಕೆ ಅನ್ನ ನೀಡುತ್ತಿರುವ ರೈತರು, ನಿಮ್ಮನ್ನು ಕಷ್ಟಪಟ್ಟು ಸಾಕಿ ಸಲುಹಿದ ತಂದೆತಾಯಿಗಳು, ಗುರುಹಿರಿಯರ ಬಗ್ಗೆ ಗೌರವ ಹೊಂದಬೇಕು, ಯುವಜನರು ಶಿಕ್ಷಣದ ಮೂಲಕ ಸುಭದ್ರ ದೇಶವನ್ನು ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ.ಜಗದೀಶ್, ಮುಖಂಡರಾದ ಅಂಗಡಿ ನಾಗರಾಜು, ಬಂಕ್ ಮಂಜುನಾಥ್, ಉಪನ್ಯಾಸಕರಾದ ಪದ್ಮನಾಭ್, ಮಂಜುನಾಥ್, ರೈತ ಸಂಘದ ನಾಗರಾಜು, ಗ್ರಾಪಂ ಸದಸ್ಯ ಶ್ರೀನಿವಾಸ್, ಪ್ರಕಾಶ್, ಸಿಬ್ಬಂದಿ ಶಿಬಿರಾರ್ಥಿಗಳು ಹಾಜರಿದ್ದರು.

# ನೀರಾವರಿ ಯೋಜನೆಗೆ 139.85 ಕೋಟಿ ಮಂಜೂರು

• ಉದಯವಾಹಿನಿ, ಹುಣಸೂರು


ಉದಯವಾಹಿನಿ ಚಿತ್ರ

ನನ್ನ ಕನಸಿನ ಯೋಜನೆಗಳಲ್ಲಿ ಒಂದಾದ ಕಟ್ಟೆಮಳಲವಾಡಿ ಅಣೆಕಟ್ಟು ನಾಲ, ಹೊಡಕೆ ಕಟ್ಟೆ ನಾಲ, ಮರೂರು ನಾಲಗಳ ಆಧುನಿಕರಣ ಕಾಮಗಾರಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 139.85 ಕೋಟಿ ರೂ ಮಂಜೂರು ಮಾಡಿದ್ದು, ಈ ಮೂಲಕ ತಾಲ್ಲೂಕಿನ ಬಹುತೇಕ ನೀರಾವರಿ ಯೋಜನೆಗಳು ಸಂಪೂರ್ಣವಾದಂತಾಗಿದೆ ಎಂದು ಮಾಜಿ ಶಾಸಕ ಎಚ್. ಪಿ. ಮಂಜುನಾಥ್ ಹರ್ಷ ವ್ಯಕ್ತಪಡಿಸಿದ್ದಾರೆ. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಹಿಂದೆ ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಸುಮಾರು 45 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಸಕಾರಗೊಂಡಿತ್ತು. ಇನ್ನು ಉಳಿದಿದ್ದ ಕೆಲ ಯೋಜನೆಗಳಿಗೆ ನಾನು ಸೋತ ನಂತರವೂ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮೇಲೆ ಒತ್ತಡ ತಂದು ಈ ಅನುದಾನ ಬಿಡುಗಡೆಗೊಳಿಸಿದ್ದೇನೆ ಎಂದ ಅವರು ಇದಕ್ಕೆ ಸಹಕರಿಸಿದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಅಧಿಕಾರಿಗಳಾದ ಮಹೇಶ್, ವೆಂಕಟೇಶ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಪದೇ ಪದೇ ತಮ್ಮ ಮೇಲಿನ ಅನುದಾನ ತಡೆ ಆರೋಪಕ್ಕೆ ಪ್ರತಿಕ್ರಿಯಿಸಿದ ಮಂಜುನಾಥ್ ತಾಲ್ಲೂಕು ಅಭಿವೃದ್ಧಿ ವಿಚಾರದಲ್ಲಿ ಎಂದು ನಾನು ತಡೆಯಾದವನಲ್ಲ, ಈ ಹಿಂದೆ ನಾನು ಶಾಸಕನಾಗಿದಾಗಲು ಎರಡು ಬಾರಿ ನಮ್ಮ ಗೈರು ಸರ್ಕಾರ ಇದ್ದರೂ ಕೂಡ ಆಡಳಿತರೂಡ ಮಂತ್ರಿಗಳೊಂದಿಗೆ, ಸಚಿವರುಗಳೊಂದಿಗೆ ನಿಕಟ ಸಂಪರ್ಕ ಹೊಂದಿ ಕೋಟ್ಯಾಂತರ ರೂ ಅನುದಾನ ತಂದು ತಾಲ್ಲೂಕು ಅಭಿವೃದ್ಧಿ ಮಾಡಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಕುನ್ನೆಗೌಡ, ನಾರಾಯಣ್, ಪುಟ್ಟರಾಜು, ಕುಮಾರ್, ರಾಘು ಇನ್ನಿತರರಿದ್ದರು.

# ಪತ್ರಿಕಾ ವಿತರಕರಿಗೆ 10 ಕೋಟಿ ಕ್ಷೇಮ ನಿಧಿ ಸ್ಥಾಪಿಸಲು ಸಿಎಂಗೆ ಮನವಿ

• ಉದಯವಾಹಿನಿ, ಚಾಮರಾಜನಗರ


ಉದಯವಾಹಿನಿ ಚಿತ್ರ

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರಿಗೆ ಕ್ಷೇಮಭಿವೃದ್ಧಿ ನಿಧಿ ಸ್ಥಾಪಿಸಲು 10 ಕೋಟಿ ರೂ. ಮೀಸಲಿಡುವಂತೆ ಸಿಎಂಗೆ ಮನವಿ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಪತ್ರಿಕ ವಿತರಕರ ಒಕ್ಕೂಟದ ರಾಜ್ಯ ಅಧ್ಯಕ್ಷ ಕೆ. ಶಂಭುಲಿಂಗ ತಿಳಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಪತ್ರಿಕಾ ಪ್ರತಿನಿಧಿಗಳು, ವಿತರಕರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪತ್ರಿಕಾ ವಿತರಕರ ಒಕ್ಕೂಟ ಸ್ಥಾಪನೆಗೊಂಡ ಬಳಿಕ ವಿತರಕರಿಗೆ ಸರ್ಕಾರದಿಂದ ಅನೇಕ ಯೋಜನೆಗಳನ್ನು ಜಾರಿಗೊಳಿಸಲು ಮುಂದಾದಾಗ ಸರ್ಕಾರ ಸ್ಪಂದಿಸಿ ಅಪಘಾತ ಹೊಂದಿದಲ್ಲಿ ಪರಿಹಾರ, ಪ್ರಧಾನ ಮಂತ್ರಿ ಸ್ವನಿಧಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ, ಮುಂದಿನ ದಿನದಲ್ಲಿ 60 ವರ್ಷ ಮೇಲ್ಪಟ್ಟ ವಿತರಿಕರಿಗೆ ಪಿಂಚಣಿ ಯೋಜನೆ, ನಿವೇಶನ, ರಿಯಾಯಿತಿ ದರದಲ್ಲಿ ಎಲೆಕ್ಟ್ರಿಕ್ ಬೈಕ್ ಕಲ್ಪಿಸಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು. ಮುಂದಿನ ಆ. 28 ರಂದು ಮೈಸೂರಿನಲ್ಲಿ ರಾಜ್ಯಮಟ್ಟದ ಪತ್ರಿಕ ವಿತರಕರ ಸಮ್ಮೇಳನವನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು ಎಲ್ಲರೂ ಸಹಕಾರ ನೀಡಬೇಕೆಂದು ತಿಳಿಸಿದರು.

ರಾಜೀವ್ ಗಾಂಧಿ ಆವಾಜ್ ಯೋಜನೆ ಅಡಿ ಮನೆಗಳಿಗೆ ಅರ್ಜಿ ಕರೆಯಲಾಗಿದ್ದು ವಿತರಕರ ಸಂಘದಿಂದ ಮುಖ್ಯಮಂತ್ರಿಗಳು ಸೇರಿದಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವಂತೆ ಸಲಹೆ ನೀಡಿದರು. ಸಂಘದ ಹಿರಿಯ ಸದಸ್ಯ ಸಿದ್ದಲಿಂಗಸ್ವಾಮಿ ಮಾತನಾಡಿ, ಇತ್ತೀಚಿಗೆ ದಿನನಿತ್ಯ ಬಳಸುವ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಿದ್ದು, ಪತ್ರಿಕೆ ಬೆಲೆ ಕಡಿಮೆಯಾಗಿದೆ, ಪತ್ರಿಕೆ ವಿತರಣೆಗೆ ಖರ್ಚು ಹೆಚ್ಚಾಗುತ್ತಿದ್ದು, ಪತ್ರಿಕೆ ದರವನ್ನು ಹೆಚ್ಚು ಮಾಡಬೇಕೆಂದು ಸಲಹೆ ನೀಡಿದರು. ಗೂಳಿಪುರ ನಂದೀಶ್ ಮಾತನಾಡಿ ಪತ್ರಿಕೆ ಹಂಚಲು ಹುಡುಗರು ಸಿಗುತ್ತಿಲ್ಲ, ಅಸಂಘಟಿತ ವಲಯಕ್ಕೆ ಸೇರಿದ ಪತಿಕಾ ವಿತರಕರಿಗೆ ಎಲೆಕ್ಟ್ರಿಕ್ ಸ್ಕೂಟರ್ ಕೊಡಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಎಲ್. ಶಿವಲಿಂಗ ಮೂರ್ತಿ ಮಾತನಾಡಿ ಪತ್ರಿಕಾ ವಿತರಕರಿಗೆ ಭದ್ರತೆ ಇರುವುದಿಲ್ಲ ದಶಕಗಳ ಕಾಲ ದುಡಿದು ಯಾವುದೇ ಸೌಲಭ್ಯವಿಲ್ಲದೆ ಇಂದಿಗೂ ಸಾಕಷ್ಟು ಪತ್ರಕರ್ತರು ಕಷ್ಟವನ್ನು ಎದುರಿಸುತ್ತಿದ್ದಾರೆ, ಹೀಗಾಗಿ ವಿತರಕರಿಗೆ ಪಿಂಚಣಿ ಸೌಲಭ್ಯ ಹಾಗೂ ನಿವೇಶನ ಕಲ್ಪಿಸಿ ಕೊಡಬೇಕೆಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಸಂಘದ ಜಿಲ್ಲಾಧ್ಯಕ್ಷ ಓಂ ದೇವ್, ಕಾರ್ಯದರ್ಶಿ ಶಿವಣ್ಣ, ಸಂಘದ ಜಿಲ್ಲಾಧ್ಯಕ್ಷ ಪುರುಷೋತ್ತಮ್, ಗೌರವಾಧ್ಯಕ್ಷ ಎಚ್.ಎಸ್. ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಅಕ್ಷಯ್ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

# ನಿರ್ವಹಣೆ ಇಲ್ಲದೆ ಹಸಿರು ಕಳೆದುಕೊಂಡ ನರ್ಸರಿ

## ಗೌರಿಬಿದನೂರು ಹೊರವಲಯದ ಕರೇಕಲ್ಲಹಳ್ಳಿ ಬಳಿ ತೋಟಗಾರಿಕಾ ಇಲಾಖೆಗೆ ಸೇರಿದ ಸ್ವತ್ತು

• ಉದಯವಾಹಿನಿ, ಗೌರಿಬಿದನೂರು

ಒಂದು ಕಾಲದಲ್ಲಿ ಸಸ್ಯಕಾಶಿಯಂತೆ ಹಸಿರಿನಿಂದ ಕಂಗೊಳಿಸುತ್ತಿದ್ದ ನಗರದ ಕರೇಕಲ್ಲಹಳ್ಳಿ ತೋಟಗಾರಿಕಾ ಇಲಾಖೆಯ ನರ್ಸರಿ ಈಗ ಅನಾಥವಾಗಿದೆ. ಕರೇಕಲ್ಲಹಳ್ಳಿ ಬಳಿ ತೋಟಗಾರಿಕಾ ಇಲಾಖೆಗೆ ಸೇರಿದ 35 ಎಕರೆಯಲ್ಲಿ ನರ್ಸರಿ ಇದೆ. ಇಲ್ಲಿನ ಉತ್ತಮ ವಾತಾವರಣ, ಗುಣಮಟ್ಟದ ಕೆಂಪು ಮಣ್ಣಿನಿಂದ ಕೂಡಿದ್ದ ಜಾಗದಲ್ಲಿ 300 ಮಾವು, 120 ಸಪೋಟ, 30 ತೆಂಗು, 80 ನೇರಳೆ ಸೇರಿದಂತೆ ಹಲವು ವಿಧದ ಹಣ್ಣಿನ ಮರಗಳು ಇವೆ.

ಆದರೆ ಇಷ್ಟು ಮರಗಳ ನಿರ್ವಹಣೆಗೆ ಕೇವಲ ಒಬ್ಬ ಮಹಿಳಾ ಸಿಬ್ಬಂದಿ ಮತ್ತು ಎರಡು ಕೊಳವೆ ಬಾವಿಗಳಿವೆ. ಅದರಲ್ಲಿ ಒಂದು ಕೊಳವೆ ಬಾವಿ ಕೆಟ್ಟಿದೆ. ಇದರಿಂದ ಗಿಡಗಳಿಗೆ ಸಕಾಲದಲ್ಲಿ ನೀರುಣಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಹಲವು ಮರಗಳು ಒಣಗಿವೆ. ಇಲ್ಲಿ ಕೆಲಸ ಮಾಡಲು ಒಬ್ಬ ಮಹಿಳಾ ಸಿಬ್ಬಂದಿ ಮಾತ್ರ ಇರುವುದರಿಂದ ಸಮಯಕ್ಕೆ ಸರಿಯಾಗಿ ಗಿಡ ಮರಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಯಾವುದೇ ರೀತಿಯಲ್ಲಿ ಹನಿ ನೀರಾವರಿ, ತುಂತುರು ನೀರಾವರಿ ವ್ಯವಸ್ಥೆಯನ್ನೂ ಅಳವಡಿಸಿಲ್ಲ. ಒಂದು ಕಾಲದಲ್ಲಿ ಇಲ್ಲಿ ತಾಲ್ಲೂಕಿನ ರೈತರಿಗೆ ಬೇಕಾದ ಮಾವು, ಸಪೋಟ, ಹಲಸು ಸೇರಿ ದಂತೆ ಹಲವಾರು ಬಗೆಯ ಹಣ್ಣಿನ


ಉದಯವಾಹಿನಿ ಚಿತ್ರ

**ಹಲವು ಮರಗಳು ಒಣಗಿವೆ**

ಗಿಡಗಳಿಗೆ ಕಸಿ ಕಟ್ಟಲಾಗುತ್ತಿತ್ತು. ಕಸಿ ಕಟ್ಟಿದ ಗಿಡ ಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಜೊತೆಗೆ ಪ್ರತಿ ವರ್ಷ ಉತ್ತಮ ಜಾತಿಯ ಹತ್ತು ಸಾವಿರಕ್ಕೂ ಹೆಚ್ಚಿನ ತೆಂಗಿನ ಗಿಡಗಳನ್ನು ಬೆಳೆಸಿ ರೈತರಿಗೆ ನೀಡಲಾಗುತ್ತಿತ್ತು.

ಕಸಿ ಕಟ್ಟುವುದಕ್ಕಾಗಿ ಇಲ್ಲಿನ ಹತ್ತಾರು ಸಿಬ್ಬಂದಿಗೆ ತರಬೇತಿ ನೀಡಲಾಗಿತ್ತು. ಉತ್ತಮ ಜಾತಿಯ ಮಾವು, ಹಲಸು ಸಪೋಟ ಗಿಡಗಳನ್ನು ಬೆಳೆಸಿ, ಸದಾಕಾಲ ರೈತರ ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾಡುತ್ತಿದ್ದರು. ಇದರಿಂದ ಇಲಾಖೆಗೆ ಉತ್ತಮ ಆದಾಯವೂ ಬರುತ್ತಿತ್ತು.

ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಸಿ ಕಟ್ಟಿದ ಗಿಡಗಳನ್ನು ಬೆಳೆಸುವುದನ್ನೇ ನಿಲ್ಲಿಸಲಾಗಿದೆ. ಇವುಗಳ ಸಂರಕ್ಷಣೆಗೆ ಹಾಕಿದ್ದ ನೆರಳಿನ ಪರದೆ (ಪಾಲಿಹೌಸ್) ಹಾಳಾಗಿದೆ. ಪಾಲಿಹೌಸ್‌ನಲ್ಲಿ ಗಿಡಗಂಟೆಗಳು ಬೆಳೆದಿವೆ. ಇತ್ತೀಚಿನ ವರ್ಷಗಳಲ್ಲಿ ಬಂದ ಯಾವ ಅಧಿಕಾರಿಯು ತೋಟಗಾರಿಕೆ ಕ್ಷೇತ್ರವನ್ನು ಬೆಳೆಸುವ ಉತ್ಸಾಹ ತೋರುತ್ತಿಲ್ಲ. ಕೇವಲ ಮಳೆ ಬಂದಾಗ ಮಾತ್ರ ತನ್ನಷ್ಟಕ್ಕೆ ತಾನು ಗಿಡಗಳು ಬೆಳೆದು ನಿಂತಿವೆ. ತೋಟಗಾರಿಕೆ ನರ್ಸರಿಯಲ್ಲಿರಬೇಕಾದ ಯಾವುದೇ ಅಲಂಕಾರಿಕ ಸಸ್ಯ, ಔಷಧೀಯ ಸಸ್ಯ, ಹಣ್ಣಿನ ಗಿಡಗಳನ್ನು ಬೆಳೆಸುವುದನ್ನು ನಿಲ್ಲಿಸಲಾಗಿದೆ. ರೈತರಿಗೆ ಅಗತ್ಯವಾದ ಗಿಡಗಳಾಗಲಿ ಬೆಳೆಸುವುದನ್ನು ನಿಲ್ಲಿಸಲಾಗಿದೆ ಎನ್ನುವುದು ರೈತರ ಅಸಮಾಧಾನದ ನುಡಿ. ಪ್ರಸ್ತುತ ಮಾವಿನ ಹಣ್ಣುಗಳ ಮಾರಾಟದಿಂದ ಮಾತ್ರ ಪ್ರತಿವರ್ಷ ತೋಟಗಾರಿಕೆ ಇಲಾಖೆಯ ಬೊಕ್ಕಸಕ್ಕೆ ಸ್ವಲ್ಪ ಹಣ ಬರುತ್ತಿದೆ. ಈ ಸಮಯದಲ್ಲಿ ಮಾತ್ರ ಅಲ್ಪ ಸ್ವಲ್ಪ ಮಾವಿನ ಗಿಡಗಳ ನಿರ್ವಹಣೆ ಮಾಡುತ್ತಾರೆ. ಮಾವಿನ ತೋಪನ್ನು ಖರೀದಿಸಿದ ಗುತ್ತಿಗೆದಾರರು ಮಾವಿನ ಹಣ್ಣು ಕಳ್ಳತನವಾಗದಿರಲು ಸುತ್ತಲೂ ಬೇಲಿ ನಿರ್ಮಿಸಿಕೊಳ್ಳುತ್ತಾರೆ. ಹೀಗೆ ರೈತರಿಗೆ ಅನುಕೂಲವಾಗುತ್ತಿದ್ದ ಮತ್ತು ತೋಟಗಾರಿಕಾ ಇಲಾಖೆಗೆ ಆದಾಯ ತರುತ್ತಿದ್ದ ನರ್ಸರಿಯು ಇದೀಗ ನಿರ್ವಹಣೆ ಇಲ್ಲದೆ ಹಾಳು ಸುರಿಯುತ್ತಿದೆ. ಅಧಿಕಾರಿಗಳು ಸಹ ನರ್ಸರಿಯ ಪುನರುಜ್ಜೀವನಕ್ಕೂ ಮನಸ್ಸು ಮಾಡುತ್ತಿಲ್ಲ.

> **ನೀರು ಸಿಬ್ಬಂದಿ ಕೊರತೆ**
> **ಇಲ್ಲಿ ನೀರಿನ ಕೊರತೆ ಮತ್ತು ಸಿಬ್ಬಂದಿ ಕೊರತೆ ಇದೆ. ಈ ವಿಷಯವನ್ನು ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ಹಣ ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಹಣ ಬಿಡುಗಡೆಯಾದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಕಿರಣ್ ಸಹಾಯಕ ಕೃಷಿ ನಿರ್ದೇಶಕ ತೋಟಗಾರಿಕೆ ಇಲಾಖೆ ಗೌರಿಬಿದನೂರು ಅಭಿವೃದ್ಧಿಗೆ ಕಾಳಜಿ ಇಲ್ಲ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಈ ನರ್ಸರಿಯನ್ನು ಅಭಿವೃದ್ಧಿ ಮಾಡುವ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಮಳೆಗಾಲದಲ್ಲಿ ಮಾತ್ರ ಗಿಡಗಳಿಗೆ ಬೆಂಕಿ ಬೀಳದಿರಲು ಹುಲ್ಲನ್ನು ತೆಗೆಸುತ್ತಾರೆಯೇ ಹೊರತು ರೈತರಿಗೆ ಅನುಕೂಲ ಆಗುವ ಯಾವುದೇ ರೀತಿಯ ಗಿಡಗಳನ್ನು ಇಲ್ಲಿ ಬೆಳೆಸಿಲ್ಲ.**
> **-ಎಸ್.ಆರ್ ಮನೋಹರ್, ವಕೀಲರು ಕರೇಕಲ್ಲಹಳ್ಳಿ**

# ಮಿನಿ ನ್ಯೂಸ್

## ಇತಿಹಾಸ ಪ್ರಸಿದ್ಧ ಹಾರೋಹಳ್ಳಿಯ ಚಾಮುಂಡೇಶ್ವರಿ ದೇಗುಲದಲ್ಲಿ ಕಳ್ಳತನ

• ಉದಯವಾಹಿನಿ, ಕನಕಪುರ

ಇತಿಹಾಸ ಪ್ರಸಿದ್ಧ ಹಾರೋಹಳ್ಳಿಯ ಚಾಮುಂಡೇಶ್ವರಿ ದೇವಾಲಯದ ಬಾಗಿಲು ಒಡೆದು ದೇವಿಯ ಮೇಲಿದ್ದ ಚಿನ್ನಾಭರಣ ಹಾಗೂ ಹುಂಡಿಯಲ್ಲಿದ್ದ ಲಕ್ಷಾಂತರ ರೂ.ಗಳನ್ನು ಕಳ್ಳರು ದೋಚಿದ್ದಾರೆ. ಕಳೆದ ಒಂದು ತಿಂಗಳ ಹಿಂದೆ ಇಲ್ಲಿ ವೈಭವದ ಚಾಮುಂಡೇಶ್ವರಿ ಜಾತ್ರೆ ನಡೆದಿತ್ತು. ಸಾವಿರಾರು ಭಕ್ತರು ಆಗಮಿಸಿ ದೇವರಿಗೆ ಕಾಣಿಕೆ ಸಲ್ಲಿಸಿದ್ದರು. ಕಳೆದ ರಾತ್ರಿ ದೇವಾಲಯದ ಬಾಗಿಲು ಮುರಿದು ಒಳನುಗ್ಗಿದ ಕಳ್ಳರು ದೇವಿಯ ಮೇಲಿದ್ದ ಚಿನ್ನದ ಗುಂಡು, ಸರ, ತಾಳಿ ಸೇರಿದಂತೆ 40 ಗ್ರಾಂ ತೂಕದ ಚಿನ್ನಾಭರಣ, ಹುಂಡಿ ತೆಗೆದು ಎಣಿಸಲು ಇಟ್ಟಿದ್ದ ಸುಮಾರು 4 ಲಕ್ಷ ರೂ.ಗಳನ್ನು ಕಳವು ಮಾಡಿದ್ದಾರೆ. ಮುಜರಾಯಿ ಇಲಾಖೆಗೆ ಒಳಪಡುವ ಈ ದೇವಾಲಯದಲ್ಲಿ ಪ್ರತಿದಿನ ಭಕ್ತರು ಆಗಮಿಸುತ್ತಾರೆ. ಆದರೆ ಜಾತ್ರೆ ವೇಳೆ ಸಲ್ಲಿಸಲಾಗಿದ್ದ ಕಾಣಿಕೆಗಳನ್ನು ಎಣಿಕೆ ಮಾಡಲು ಕಳೆದ 25 ದಿನಗಳ ಹಿಂದೆಯೇ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಹಣವನ್ನೆಲ್ಲ ತೆಗೆದು ಬ್ಯಾಗ್‌ನಲ್ಲಿಟ್ಟು ಬೀರುವಿನಲ್ಲಿ ಇಡಲಾಗಿತ್ತು.

ಯಾರೋ ಗೊತ್ತಿರುವವರೇ ಈ ಕೃತ್ಯ ನಡೆಸಿರಬಹುದೆಂದು ಶಂಕಿಸಲಾಗಿದೆ. ಜಾತ್ರೆ ನಡೆದು 20 ದಿನಗಳು ಕಳೆದರೂ ತಾಲ್ಲೂಕು ಆಡಳಿತ ಸಿಬ್ಬಂದಿ ಹುಂಡಿ ಎಣಿಕೆ ಮಾಡದೆ, ಅದನ್ನು ಬ್ಯಾಂಕ್‌ಗೆ ಜಮೆ ಮಾಡದೆ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ. ಸೋಮವಾರ ಬೆಳಿಗ್ಗೆ ಅರ್ಚಕ ಕಲ್ಯಾಣ್ ಕುಮಾರ್ ದೇವಸ್ಥಾನದ ಬಾಗಿಲು ತೆರೆಯಲು ಬಂದಾಗ ಕಳ್ಳತನ ನಡೆದಿರುವುದು ಗೊತ್ತಾಗಿದೆ. ತಕ್ಷಣ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಹಾರೋಹಳ್ಳಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಸದಾಶಿವರೆಡ್ಡಿ ಮೇಲೆ ಹಲ್ಲೆ ಖಂಡಿಸಿ ವಕೀಲರಿಂದ ಪ್ರತಿಭಟನೆ

• ಉದಯವಾಹಿನಿ, ಮಳವಳ್ಳಿ

ಹಿರಿಯ ವಕೀಲ ಸದಾಶಿವರೆಡ್ಡಿ ಅವರ ಮೇಲೆ ಹಲ್ಲೆ ಮಾಡಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ತಾಲ್ಲೂಕು ವಕೀಲರ ಸಂಘದ ನೇತೃತ್ವದಲ್ಲಿ ವಕೀಲರು ನ್ಯಾಯಾಲಯ ಕಲಾಪದಿಂದ ಹೊರಗುಳಿದು ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ನ್ಯಾಯಾಲಯದ ಆವರಣದಿಂದ ಮೆರವಣಿಗೆ ಮೂಲಕ ಸಾಗಿದ ವಕೀಲರು ತೋಳಿಗೆ ಕೆಂಪು ಪಟ್ಟಿ ಧರಿಸಿ ಹಲ್ಲೆ ನಡೆಸಿರುವ ಆರೋಪಿಗಳ ವಿರುದ್ಧ ಧಿಕ್ಕಾರ ಕೂಗುತ್ತಾ ತಾಲ್ಲೂಕು ಕಚೇರಿ ಮುಂಭಾಗ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದರು. ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಡಿ.ಎಂ.ಸುಂದರ್ ಮಾತನಾಡಿ, ಹಿರಿಯ ವಕೀಲ ಸದಾಶಿವ ರೆಡ್ಡಿ ಅವರ ಕಚೇರಿಗೆ ಅಕ್ರಮವಾಗಿ ಪ್ರವೇಶ ಮಾಡಿದ್ದ ದುಷ್ಕರ್ಮಿಗಳು ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇದು ವಕೀಲ ಸಮುದಾಯದಲ್ಲಿ ಆತಂಕ ಸೃಷ್ಟಿ ಮಾಡಿದೆ. ನ್ಯಾಯಾಲಯದಲ್ಲಿ ವಕೀಲರಿಗೆ ರಕ್ಷಣೆ ಇಲ್ಲದಂತಾಗಿದೆ. ಕಕ್ಷಿದಾರರಿಗೆ ನ್ಯಾಯಾಲಯದಲ್ಲಿ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಇಂಥ ಕೃತ್ಯ ನಿಲ್ಲಬೇಕು ಎಂದು ಆಗ್ರಹಿಸಿದರು. ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ತ್ವರಿತಗತಿಯಲ್ಲಿ ಕಠಿಣ ಶಿಕ್ಷೆ ವಿಧಿಸಬೇಕು. ಅಲ್ಲದೇ ವಕೀಲರ ರಕ್ಷಣೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

## ಜಾತಿಗಣತಿಗೆ ಸ್ವಪಕ್ಷೀಯ ಶಾಸಕರಿಂದ ಅಪಸ್ವರವಿಲ್ಲ: ಶಾಸಕ ಕೆ.ಎಂ. ಉದಯ್

• ಉದಯವಾಹಿನಿ, ಮದ್ದೂರು

ಜಾತಿಗಣತಿಗೆ ಸ್ವಪಕ್ಷೀಯ ಶಾಸಕರಿಂದ ಯಾವುದೇ ಅಪಸ್ವರವಿಲ್ಲ ಎಂದು ಶಾಸಕ ಕೆ.ಎಂ. ಉದಯ್ ತಿಳಿಸಿದರು. ತಾಲ್ಲೂಕಿನ ನವಿಲೆ, ಚಿಕ್ಕಅಂಕನಹಳ್ಳಿ ಗ್ರಾಮಗಳಲ್ಲಿ ಸೋಮವಾರ ಶಾಲಾ ಕೊಠಡಿಗಳ ನಿರ್ಮಾಣ, ಸಮುದಾಯ ಭವನದ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಜಾತಿ ಗಣತಿ ವಿಷಯದಲ್ಲಿ ಸುಮ್ಮನೆ ಗೊಂದಲ ಸೃಷ್ಟಿಸಲಾಗುತ್ತಿದೆ. ಈ ಬಗ್ಗೆ ನಮ್ಮ ಪಕ್ಷದ ಶಾಸಕರು ಕೆಲವು ನ್ಯೂನ್ಯತೆ ಇದ್ದರೆ ಸರಿಪಡಿಸಲು, ಮರುಪರಿಶೀಲಿಸಲು ಒತ್ತಾಯಿಸಿದ್ದಾರೆಯೇ ಹೊರತು ವಿರೋಧಿಸಿಲ್ಲ ಎಂದು ಹೇಳಿದರು. ತಾಲ್ಲೂಕು ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಸರ್ಕಾರಿ ಶಾಲಾ ಕೊಠಡಿಗಳನ್ನು ಗುರುತಿಸಿ ಹೊಸ ಕೊಠಡಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಈ ಹಿಂದಿನ ಶಾಸಕರ ಅವಧಿಯಲ್ಲಿ ಯಾವುದೇ ಆಸಕ್ತಿ ವಹಿಸದೇ ಇದ್ದುದ್ದರಿಂದ ಕೆಲವೊಂದು ಕಡೆ ಕೊಠಡಿಗಳ ಸಮಸ್ಯೆಯಾಗಿತ್ತು ಎಂದರು.

## ಚಲಿಸುತ್ತಿದ್ದ ಬೈಕ್ ಮೇಲೆ ಬಿದ್ದ ವಿದ್ಯುತ್ ತಂತಿ ಯುವಕ ಸಾವು

• ಉದಯವಾಹಿನಿ, ಕೊರಟಗೆರೆ

ತಾಲ್ಲೂಕಿನ ಚೀಲಗಾನಹಳ್ಳಿ ಬಳಿ ಭಾನುವಾರ ರಾತ್ರಿ, ಗಾಳಿ-ಮಳೆಗೆ ವಿದ್ಯುತ್ ತಂತಿ ತುಂಡಾಗಿ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದವರ ಮೇಲೆ ಬಿದ್ದ ಪರಿಣಾಮ ವಿದ್ಯುತ್ ಪ್ರವಹಿಸಿ ವ್ಯಕ್ತಿ ಸ್ಥಳದಲ್ಲೆ ಮೃತಪಟ್ಟಿದ್ದಾರೆ. ಚೀಲಗಾನಹಳ್ಳಿಯ ಸಿ.ಎನ್. ಯೋಗೀಶ್ (42) ಮೃತರು. ಸಿ.ಎನ್. ನರಸಿಂಹರಾಜು ತೀವ್ರ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಯೋಗೀಶ್, ನರಸಿಂಹರಾಜು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಊರಿಗೆ ಮರಳುತ್ತಿದ್ದರು. ಊರು ತಲುಪುವ ವೇಳೆ ಬಿರುಗಾಳಿ ಸಹಿತ ಬಿದ್ದ ಮಳೆಗೆ ವಿದ್ಯುತ್ ತಂತಿ ತುಂಡಾಗಿ ಬಿದ್ದು ಅವಘಡ ಸಂಭವಿಸಿದೆ. ಅವಘಡ ಸಂಭವಿಸಿದ ವೇಳೆ ಸುರಿವ ಮಳೆ ಲೆಕ್ಕಿಸದೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನರೇಂದ್ರ, ಮುಖಂಡರಾದ ಮಾರುತಿ, ಸತೀಶ ಎಂಬುವರು ಸ್ಥಳಕ್ಕೆ ದಾವಿಸಿ ವಿದ್ಯುತ್ ನಿಷ್ಕ್ರಿಯಗೊಳಿಸಿ ಆಗಬಹುದಾದ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

## ಸರ್ವೋತ್ತಮ ಪ್ರಶಸ್ತಿ ಪುರಸ್ಕಾರಕ್ಕೆ ಎಡಿಸಿ ಗೀತಾ ಹುಡೇದ ಆಯ್ಕೆ

• ಉದಯವಾಹಿನಿ, ಚಾಮರಾಜನಗರ



ಅತ್ಯುತ್ತಮವಾಗಿ ಸೇವೆ ಸಲ್ಲಿಸಿದವರಿಗೆ ರಾಜ್ಯ ಸರ್ಕಾರ ನೀಡುವ 2023ನೇ ಸಾಲಿನ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕಾರಕ್ಕೆ ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಆಯ್ಕೆಯಾಗಿದ್ದಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಯ್ಕೆ ಸಮಿತಿಯು ಎಲ್ಲಾ ಅರ್ಹ ನಾಮ ನಿರ್ದೇಶನಗಳನ್ನು ಪರಿಶೀಲಿಸಿ ರಾಜ್ಯದ ವಿವಿಧ ಜಿಲ್ಲೆಗಳ 30 ಅರ್ಹ ಅಧಿಕಾರಿ ನೌಕರರನ್ನು ರಾಜ್ಯ ಮಟ್ಟದ ಸರ್ವೋತ್ತಮ ಪ್ರಶಸ್ತಿಗೆ ಆಯ್ಕೆಮಾಡಿದೆ. ಆಯ್ಕೆಯಾದವರಲ್ಲಿ ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಸೇರಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ 50 ಸಾವಿರ ಪ್ರಶಸ್ತಿ ಮೊತ್ತ, ಫಲಕ, ಶಾಲು, ಹಾರಗಳೊಂದಿಗೆ ಗೌರವಿಸಲಾಗುತ್ತದೆ.

ಅಂತರಾಳದಿಂದ..
EDITORIAL

# ರೋಹಿತ್ ಕಾಯ್ದೆ ಶೀಘ್ರ ಜಾರಿಯಾಗಲಿ




ರಾಜ್ಯದಲ್ಲಿ ಜಾತಿ ಅಸಮಾನತೆಗಳು ಬೇರೆ ಬೇರೆ ಕಾರಣಗಳಿಗಾಗಿ ಚರ್ಚೆಯಲ್ಲಿರುವ ಹೊತ್ತಿನಲ್ಲೇ, ರೋಹಿತ್ ವೇಮುಲಾ ಕಾಯ್ದೆ ಅನುಷ್ಠಾನ ಪ್ರಕ್ರಿಯೆ ಮುನ್ನೆಲೆಗೆ ಬಂದಿದೆ. ರೋಹಿತ್ ವೇಮುಲಾ ಆತ್ಮಹತ್ಯೆಯ ಬೆನ್ನಿಗೇ ಹುಟ್ಟಿಕೊಂಡ ಪ್ರತಿಭಟನೆಗಳು ಅಂತಿಮವಾಗಿ ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ದಲಿತ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಶಿಕ್ಷಣವನ್ನು ತಮ್ಮದಾಗಿಸುವ ವಾತಾವರಣವೊಂದು ನಿರ್ಮಾಣವಾಗಬೇಕು ಎನ್ನುವ ಬೇಡಿಕೆಯನ್ನು ಮುಂದಿಟ್ಟವು. ಅದಕ್ಕಾಗಿ ರೋಹಿತ್ ವೇಮುಲಾ ಹೆಸರಿನಲ್ಲಿ ಕಾಯ್ದೆಯೊಂದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಗಳು ಕೇಳಿಬಂದವು. ಕರ್ನಾಟಕದಲ್ಲೂ ವಿವಿಧ ವಿದ್ಯಾರ್ಥಿ ಸಂಘಟನೆಗಳು, ದಲಿತ ನಾಯಕರು ಈ ಕಾಯ್ದೆಗಾಗಿ ಧ್ವನಿಯೆತ್ತುತ್ತಲೇ ಬಂದಿದ್ದರು. ಇತ್ತೀಚೆಗಷ್ಟೇ ಈ ಕಾಯ್ದೆಗೆ ಸಂಬಂಧಿಸಿ, ವಿವಿಧ ಸಂಘಟನೆಗಳು ಬೆಂಗಳೂರಿನಲ್ಲಿ ಪ್ರತಿಭಟನೆಗಳನ್ನು ನಡೆಸಿದ್ದವು. ವಿಶ್ವವಿದ್ಯಾನಿಲಯಗಳು, ಕಾಲೇಜುಗಳಲ್ಲಿ ದಲಿತ ವಿದ್ಯಾರ್ಥಿಗಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಅವರ ಮೇಲೆ ಪ್ರದರ್ಶನವಾಗುತ್ತಿರುವ ಅಸಹನೆ, ಇವುಗಳನ್ನು ತಡೆಯಲು ಪ್ರತ್ಯೇಕ ಕಾನೂನಿನ ಅಗತ್ಯವಿದೆ. ಇಲ್ಲವಾದರೆ ವಿಶ್ವವಿದ್ಯಾನಿಲಯಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಅವರಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಹಗ್ಗ ಅಥವಾ ವಿಷವನ್ನು ಮೊದಲೇ ಕೊಟ್ಟು ಬಿಡಬೇಕು ಎಂಬ ರೋಹಿತ್ ವೇಮುಲಾ ಮಾತಿನಂತೆ, ವಿದ್ಯಾರ್ಥಿಗಳಿಗೆ ಈ ದೌರ್ಜನ್ಯಗಳಿಂದ ಪಾರಾಗಲು ಆತ್ಮಹತ್ಯೆ ಕಟ್ಟ ಕಡೆಯ ದಾರಿಯಾಗಿ ಬಿಡಬಹುದು. ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರವು ತನ್ನನ್ನು ತಾನು ದಲಿತ ಪರ ಎಂದು ಕರೆದುಕೊಂಡಿದೆ. ಸಿದ್ದರಾಮಯ್ಯ ಅವರು ನಾನು ಕೂಡ ದಲಿತ ಎಂದು ಹೇಳಿಕೊಂಡಿದ್ದಾರೆ. ಹೀಗಿರುವಾಗ ರಾಜ್ಯದಲ್ಲಿ ರೋಹಿತ್ ವೇಮುಲಾ ಕಾಯ್ದೆ ಜಾರಿಗೊಳ್ಳಲು ಹಿಂಜರಿಕೆಯಾಕೆ ಎಂದು ಕೇಳುವುದು ಸಹಜವೇ ಆಗಿದೆ.

**ರೋಹಿತ್ ವೇಮುಲಾ ಕಾನೂನು ಜಾರಿಗೊಳಿಸಲು ಎರಡು ದಿನಗಳ ಹಿಂದೆ ರಾಹುಲ್ ಗಾಂಧಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರವನ್ನು ಬರೆದಿದ್ದರು. ಅದರ ಬೆನ್ನಿಗೇ ಇದೀಗ ಕಾಯ್ದೆಯ ಕರಡು ರಚನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿರುವುದು ಅಭಿನಂದನೀಯವಾಗಿದೆ.**

ರಾಹುಲ್ ಗಾಂಧಿಯವರ ಪತ್ರಕ್ಕೆ ಉತ್ತರಿಸಿರುವ ಸಿದ್ದರಾಮಯ್ಯ ಅವರು, ರಾಹುಲ್ ಗಾಂಧಿಯವರೇ, ನಿಮ್ಮ ಸಹಾನುಭೂತಿಯ ಪತ್ರ ಮತ್ತು ನ್ಯಾಯಕ್ಕಾಗಿ ಅಚಲ ಧ್ವನಿಗೆ ಧನ್ಯವಾದಗಳು. ಜಾತಿ, ವರ್ಗ ಅಥವಾ ಗುರುತಿನ ಹೆಸರಿನಲ್ಲಿ ಯಾವುದೇ ವಿದ್ಯಾರ್ಥಿ ಎಂದಿಗೂ ತಾರತಮ್ಯ ಅಥವಾ ಬಹಿಷ್ಕಾರವನ್ನು ಎದುರಿಸದಂತೆ ನೋಡಿಕೊಳ್ಳಲು ನಮ್ಮ ಸರಕಾರ ಬದ್ಧ ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ರೋಹಿತ್ ವೇಮುಲಾ ಕಾಯ್ದೆಯ ಕರಡು ರಚನೆಯನ್ನು ಪ್ರಾರಂಭಿಸಲು ನಾನು ಕಾನೂನು ತಂಡಕ್ಕೆ ನಿರ್ದೇಶನ ನೀಡಿದ್ದೇನೆ' ಎಂದು ತಿಳಿಸಿದ್ದಾರೆ. ಕರಡು ರಚನೆಗೆ ಆದೇಶ ನೀಡಿದಾಕ್ಷಣ ಕಾನೂನು ಜಾರಿಗೊಂಡೇ ಬಿಟ್ಟಿತು ಎಂದು ನಾವು ಸಂಭ್ರಮ ಪಡಬೇಕಾಗಿಲ್ಲ. ಜಾತಿ ಗಣತಿ ವರದಿ, ಒಳಮೀಸಲಾತಿ ಅನುಷ್ಠಾನದ ಗತಿಯನ್ನು ನೋಡುತ್ತಿರುವವರಿಗೆ ಈ ಕರಡು ಕಾನೂನಾಗಿ ಜಾರಿಗೊಳ್ಳುವ ಬಗ್ಗೆ ವಿಶೇಷ ನಿರೀಕ್ಷೆಗಳೇನೂ ಇಲ್ಲ.

ದಲಿತರ ಸ್ವಾಭಿಮಾನದ ಬದುಕು ತೆರೆದುಕೊಳ್ಳುವುದು ಶಿಕ್ಷಣದ ಮೂಲಕ. ಶಾಲೆ, ಕಾಲೇಜುಗಳ ಮೂಲಕವೇ ಅವರು ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬೇಕು. ಇದಕ್ಕೆ ಹೊರತಾದ ಬೇರೆ ದಾರಿ ಇಲ್ಲ. ಇಂತಹ ಶಾಲಾ ಕಾಲೇಜುಗಳಲ್ಲಿ ದಲಿತರು ಆತ್ಮವಿಶ್ವಾಸದಿಂದ ಓಡಾಡುವ, ಕಲಿಯುವ ವಾತಾವರಣ ನಿರ್ಮಾಣ ಮಾಡುವುದು ಅತ್ಯಗತ್ಯವಾಗಿದೆ. ಆದುದರಿಂದ, ಇಲ್ಲಿ ಶಿಕ್ಷಕರಿಂದ, ಸಿಬ್ಬಂದಿಯಿಂದ, ಸಹ ವಿದ್ಯಾರ್ಥಿಗಳಿಂದ ಅವಮಾನಿತರಾಗದಂತೆ ದಲಿತರನ್ನು ಕಾಪಾಡಲು ಒಂದು ಕಾನೂನಿನ ಅಗತ್ಯವಿದೆ. ಮೊತ್ತ ಮೊದಲನೆಯದಾಗಿ ಕರಡು ರಚನೆಗೆ ಸೂಚನೆ ನೀಡಿದಾಕ್ಷಣ ಕಾನೂನು ಜಾರಿಯಾಗಿ ಬಿಡುವುದಿಲ್ಲ. ಅದು ಅಧಿಕೃತವಾಗಿ ಕಾನೂನಾಗಿ ಜಾರಿಗೊಳ್ಳಲು ಹಲವು ಪ್ರಕ್ರಿಯೆಗಳಿವೆ. ಈ ಹಿಂದೆ, ತಾನೇ ಆದೇಶ ನೀಡಿದ ಜಾತಿ ಗಣತಿಯ ವರದಿಯನ್ನು ಜಾರಿಗೊಳಿಸಲು ಸಿದ್ದರಾಮಯ್ಯ ಅವರು ತಿಣುಕಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇರುವ ಜಾತಿ ದೌರ್ಜನ್ಯ ತಡೆ ಕಾನೂನನ್ನೇ ಕೆಲವು ಶಕ್ತಿಗಳು ದುರ್ಬಲಗೊಳಿಸಲು ನೋಡುತ್ತಿರುವಾಗ, ದಲಿತರ ಪರವಾಗಿ ಹೊಸದೊಂದು ಕಾನೂನನ್ನು ಜಾರಿಗೊಳಿಸಲು ಅವಕಾಶ ನೀಡುತ್ತಾರೆ ಎಂದು ನಂಬುವಂತಿಲ್ಲ. ಜಾರಿಗೊಂಡ ಬಳಿಕ ಅದರ ಪರಿಣಾಮಕಾರಿ ಅನುಷ್ಠಾನದ ಅಗತ್ಯವೂ ಇದೆ. ಇಂದು ಜಾತಿ ದೌರ್ಜನ್ಯ ತಡೆ ಕಾನೂನಿನ ಮರೆಯಲ್ಲೇ ನಿರಂತರವಾಗಿ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆಯನ್ನು ಯಾವ ಮುಜುಗರವೂ ಇಲ್ಲದೆ ಆಚರಿಸುತ್ತಿದ್ದಾರೆ. ಜಾತಿ ಗಣತಿಯು ದಲಿತರ ಸ್ಥಿತಿಗತಿಯ ಹಲವು ವಾಸ್ತವಗಳನ್ನು ತೆರೆದಿಡಲಿದ್ದರೆ, ಅದರ ಮುಂದುವರಿಕೆಯ ಭಾಗವಾಗಿ ಒಳ ಮೀಸಲಾತಿಯು ದಲಿತರ ಸ್ಥಿತಿಗತಿಗೆ ಅನುಗುಣವಾಗಿ ಸವಲತ್ತುಗಳನ್ನು ಸಮಾನವಾಗಿ ವಿತರಿಸಲು ಸಹಾಯ ಮಾಡಲಿದೆ. ಇದೇ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಯೊಳಗಿರುವ ತಾರತಮ್ಯಕ್ಕೆ ದಲಿತ ಯುವ ಸಮೂಹ ಬಲಿಯಾಗದಂತೆ ನೋಡಿಕೊಳ್ಳಲು ರೋಹಿತ್ ವೇಮುಲಾ ಕಾನೂನನ್ನು ಸಮರ್ಥವಾಗಿ ಬಳಸಿಕೊಳ್ಳಲು ಸರಕಾರ ಮುಂದಾಗಬೇಕಾಗಿದೆ.

# ರಾಮಾಯಣ



## ದಶರಥರಾಯನ ಪ್ರಲಾಪ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಚಂದ್ರನಿಲ್ಲದ ಆಕಾಶದಂತೆ ರಾಮ ಲಕ್ಷ್ಮಣ ಸೀತಾದೇವಿಯರಿಲ್ಲದೆ ಭಯಂಕರವಾದ ಆ ಅರಮನೆಯನ್ನು ಕಂಡು ದುಃಖಾತಿಶಯದಿಂದ ತೋಳುಗಳನ್ನು ಮೇಲಕ್ಕೆ ನೆಗಹಿಕೊಂಡು ಗೋಳಿಟ್ಟು ರೋದನವನ್ನು ಮಾಡುತ್ತ ಹಾ ರಾಘವ ಹಾ ರಾಮ ಹಾ ಪ್ರಿಯಪುತ್ರನೇಹಾ ಸತ್ಯಸಂಧನೇ ನನ್ನನ್ನು ಬಿಟ್ಟು ಹೋದೆಯಾ ಲೋಕದಲ್ಲಿರುವ ಜನರು ವನವಾಸವನ್ನು ಮಾಡಿ ತಿರುಗಿ ಬರುವ ನಿನ್ನನ್ನು ಕಂಡು ಕೃತಾರ್ಥರಾಗಿ ಸುಖವಾಗಿರುವರು ಎಂದು ಹಂಬಲಿಸುತ್ತಲಿದ್ದನು. ಅರ್ಧರಾತ್ರಿಯು ಅವನ ಮೃತ್ಯುಕಾಲದಂತೆ ಅತ್ಯಂತ ಪ್ರಯಾಸದಿಂದ ಕಳೆಯಿತು. ದಶರಥನು ಕೌಸಲ್ಯಾದೇವಿಯನ್ನು ಕುರಿತು ಕೌಸಲ್ಯೆ, ನನಗೆ ಕಣ್ಣು ಕಾಣಿಸುವುದಿಲ್ಲ. ನೀನು ಎಲ್ಲಿದ್ದೀಯೋ ಕಾಣೆನು. ನನ್ನ ದೃಷ್ಟಿಯು ಶ್ರೀರಾಮನ ಸಂಗಡ ಹೋದದ್ದು ತಿರುಗಿ ಬರಲಾರದು. ನನ್ನನ್ನು ಕೈಯಿಂದ ಹಿಡಿದುಕೊ ಎಂದು ನುಡಿದನು. ಆ ದೇವಿಯು ಆತನನ್ನು ಹಿಡಿದುಕೊಂಡು ತನ್ನ ಸಮೀಪದಲ್ಲಿ ಕುಳ್ಳಿರಿಸಿ ನಿಟ್ಟುಸಿರು ಬಿಡುತ್ತ ಹಂಬಲಿಸುತ್ತಿದ್ದಳು.

### ಕೌಸಲ್ಯಾದೇವಿಯಂ ದಶರಥರಾಯನೊಡನೆ ಪ್ರಲಾಪಿಸಿದ್ದು

ಆಮೇಲೆ ಕೌಸಲ್ಯಾದೇವಿಯು ಶೋಕಾತಿಶಯದಿಂದ ಕಂಗೆಟ್ಟು ಮಂಚದ ಮೇಲೆ ಕುಳಿತಿದ್ದ ದಶರಥರಾಯನನ್ನು ನೋಡಿ ಮಹಾರಾಜ, ಪುರುಷೋತ್ತಮನಾದ ಶ್ರೀರಾಮನಲ್ಲಿ ಕೈಕೇಯಾದೇವಿಯು ವಿಷವನ್ನು ಬಿಟ್ಟು ಪೊರೆಗಳೆದ ಸರ್ಪಿಣಿಯಂತಾಗಿದ್ದಾಳೆ. ಅವಳು ಮುಂದೆಯೂ ನನ್ನನ್ನು ಬೆದರಿಸುವಳು. ಶ್ರೀರಾಮನನ್ನು ವನಕ್ಕೆ ಕಳುಹಿಸದೆ ಭರತನಿಗೆ ಪಟ್ಟವನ್ನು ಕಟ್ಟಿ ಆಕೆಯು ಸುಖವಾಗಿದ್ದ ಪಕ್ಷದಲ್ಲಿ ಅಯೋಧ್ಯಾಪಟ್ಟಣದಲ್ಲಿ ಭಿಕ್ಷಾಹಾರವನ್ನಾದರೂ ಮಾಡಿಕೊಂಡು ನನ್ನ ಮಗನು ಮನೆಯಲ್ಲಿ ಸುಖವಾಗಿರುತ್ತಿದ್ದನು. ಆತನು ಕೈಕೇಯಾದೇವಿಗೆ ಭೃತ್ಯನಂತೆ ಸೇವೆಯನ್ನು ಮಾಡಿಕೊಂಡಿದ್ದೂ ಅಸೂಯೆಯಿಂದ ಆತನನ್ನು ವನಕ್ಕೆ ಕಳುಹಿಸಬೇಕೆಂದು ನಿನ್ನಲ್ಲಿ ವರವನ್ನು ಬೇಡಿಕೊಂಡಳು. ಆತನನ್ನು ತನ್ನ ಮನಸ್ಸಿಗೆ ಬಂದಹಾಗೆ ಸ್ಥಾನಭ್ರಷ್ಟನನ್ನಾಗಿ ಮಾಡಿ ಆಹಿತಾಗ್ನಿಗಳು ಪರ್ವಕಾಲದಲ್ಲಿ ದೇವತೆಗಳಿಗೆ ಕೊಡುವ ಹವಿರ್ಭಾಗವು ರಾಕ್ಷಸರಿಗೆ ದಕ್ಕಿದಂತಾಯಿತು. ಮದ್ದಾನೆಯಂತೆ ಗಂಭೀರವಾದ ನಡೆಯುಳ್ಳವನೂ ಬಿಲ್ಲುಗಾರನೂ ಮಹಾಭುಜಬಲಪರಾಕ್ರಮಿಯೂ ಆದ ಶ್ರೀರಾಮನು ಸೀತಾಲಕ್ಷ್ಮಣರೊಡನೆ ವನವನ್ನೈದಿದನು. ಒಂದು ದಿನವೂ ವನವಾಸದುಃಖವನ್ನರಿಯದ ಅವರು ಕೈಕೇಯಾದೇವಿಯ ಮಾತನ್ನು ಮೀರದಿದ್ದ ನಿನ್ನಿಂದ ವನವಾಸಕ್ಕೆ ಹೋದರು. ಆ ವನದಲ್ಲಿ ಯಾವ ಅವಸ್ಥೆಯುಂಟಾಗುವುದೋ ತಿಳಿಯದು. ರಾಮ ಲಕ್ಷ್ಮಣ ಸೀತಾದೇವಿಯರು ಬಾಲ್ಯಾವಸ್ಥೆಯುಳ್ಳವರು. ಉತ್ತಮವಾದ ರತ್ನಾಭರಣಗಳನ್ನು ಧರಿಸಿಕೊಂಡು ಸುಖವಾಗಿರುವ ಕಾಲದಲ್ಲಿ ವವಕ್ಕೆ ಹೋಗಿ ಕಂದಮೂಲಫಲಾಹಾರಗಳನ್ನು ಮಾಡಿಕೊಂಡು ದೈನ್ಯವೃತ್ತಿಯಿಂದ ಹೇಗೆ ಇರುವರು. ಸೀತಾಲಕ್ಷ್ಮಣಸಮೇತನಾಗಿ ವನದಿಂದ ತಿರುಗಿ ಬರುವ ಶ್ರೀರಾಮನನ್ನು ಯಾವಾಗ ಕಾಣುವೆನು. ನನ್ನ ಶೋಕವನ್ನು ಪರಿಹರಿಸುವ ಮಂಗಲಮಯವಾದ ಆ ಕಾಲವು ಈಗಲೇ ಬಂದೀತೆ. ಅವರು ಯಾವಾಗ ಅಯೋಧ್ಯಾನಗರಕ್ಕೆ ಹಿಂದಿರುಗಿ ಬಂದಾರು. ಸೀತಾಲಕ್ಷ್ಮಣ ಸಮೇತನಾದ ಶ್ರೀರಾಮನನ್ನು ಕಂಡು ಯಾವಾಗ ಅಯೋಧ್ಯಾಪಟ್ಟಣವು ಹುಣ್ಣಿಮೆಯ ಚಂದ್ರನನ್ನು ಕಂಡ ಸಮುದ್ರದಂತೆ ಸಂತೋಷದಿಂದ ಉಕ್ಕಿ ಸೊಕ್ಕುವುದು. ಮಹಾಬಲಪರಾಕ್ರಮಿ ಯಾದ ಶ್ರೀರಾಮನು ಕೊಬ್ಬಿದ ವೃಷಭರಾಜನು ಹಸುವನ್ನು ಮುಂದಿಟ್ಟುಕೊಂಡು ಗಂಭೀರವಾಗಿ ಬರುವಂತೆ ರಥದಲ್ಲಿ ಸೀತಾದೇವಿಯನ್ನು ಮುಂದಿಟ್ಟುಕೊಂಡು ಅಯೋಧ್ಯಾ ಪಟ್ಟಣವನ್ನು ಯಾವಾಗ ಪ್ರವೇಶಿಸುವನೊ. ಶಾಸ್ತ್ರಾಭ್ಯಾಸದಿಂದ ಪ್ರಸಿದ್ಧರಾದ ಬ್ರಾಹ್ಮಣರಿಂದ ಕೊಂಡಾಡಲ್ಪಟ್ಟ ಶ್ರೀರಾಮ ಲಕ್ಷ್ಮಣ ಸೀತಾದೇವಿಯರು ಪುರಜನಸಮೂಹದಿಂದ ಚೌಬೀದಿಯಲ್ಲಿ ಅರಳು ಪರಿಮಳ ಪುಷ್ಪಗಳಿಂದ ಸೇಸೆಯಿಕ್ಕಲ್ಪಟ್ಟವರಾಗಿ ರಾಜಮಾರ್ಗದಲ್ಲಿ ಯಾವಾಗ ಬರುವರೋ.

ಮುಂದುವರಿಯುವುದು...

# ಕಲೋಪಾಸಕಿ ಮಾಧುರಿ ಪವನ್ ಭಟ್ ಭರವಸೆಯ ರಂಗಪ್ರವೇಶ




ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

**ಬಹುಮುಖ ಪ್ರತಿಭೆಯ ಸೌಂದರ್ಯಾವರಣ**


ಬೆಂಗಳೂರಿನ ಸಾಧನಾ ಡ್ಯಾನ್ಸ್ ಸೆಂಟರ್' ನೃತ್ಯಶಾಲೆಯ ನೃತ್ಯಗುರು ಭಾವನಾ ಬದ್ಧತೆ ಮತ್ತು ಪ್ರಯೋಗಶೀಲತೆಗಳಿಗೆ ಹೆಸರಾದವರು. ಎರಡು ದಶಕಗಳಿಗೂ ಹೆಚ್ಚಿನ ನೃತ್ಯಾನುಭಾವವುಳ್ಳ ಭಾವನಾ, ಸ್ವತಃ ತಾವೇ ಉತ್ತಮ ನೃತ್ಯ ಕಲಾವಿದೆಯಾಗಿರುವ ಜೊತೆ ನೂರಾರು ನೃತ್ಯಾಕಾಂಕ್ಷಿಗಳಿಗೆ ಉತ್ತಮ ವಿದ್ಯಾಧಾರೆಯೆರೆಯುತ್ತ ಭರವಸೆಯ ಕಲಾವಿದೆಯರನ್ನು ರೂಪಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತ ಬಂದಿದ್ದಾರೆ. ಇಂಥ ಗುರುಗಳ ಮಾರ್ಗದರ್ಶನದಲ್ಲಿ ನೃತ್ಯದ ಹೊಸ ಮಜಲುಗಳನ್ನು ಅಭ್ಯಾಸ ಮಾಡುತ್ತಿರುವ ಶ್ರೀಮತಿ ಮಾಧುರಿ – ಶ್ರೀ ಬಾಲಕೃಷ್ಣ ರಾವ್ ಮತ್ತು ಮಮತಾ ಅವರ ಪುತ್ರಿ, ಪವನ್ ಭಟ್ ಪತ್ನಿ, ಓಜಸ್, ಆರ್ಣ ಎಂಬ ಇಬ್ಬರು ಮುದ್ದಾದ ಮಕ್ಕಳ ತಾಯಿ. ನಾಟ್ಯದ ಬಗ್ಗೆ ಅಪಾರ ಒಲವುಳ್ಳ ಮಾಧುರಿ, ತನ್ನ ಏಳನೆಯ ವಯಸ್ಸಿನಿಂದಲೇ ಭರತನಾಟ್ಯ ಕಲಿತು, ಕರ್ನಾಟಕ ಸರ್ಕಾರದ ಜ್ಯೂನಿಯರ್, ಸೀನಿಯರ್ ನೃತ್ಯಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಗಳಿಸಿದ್ದು, ಇದೀಗ 'ವಿದ್ವತ್' ಪರೀಕ್ಷೆಗೆ ತಯಾರಿ ನಡೆಸಿದ್ದಾಳೆ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಜ್ಯೂನಿಯರ್ ಮಾಡಿಕೊಂಡಿರುವ ಮಾಧುರಿ ಕಂಪ್ಯೂಟರ್ ಎಂಜಿನಿಯರಿಂಗ್ ಪದವೀಧರೆ, ಚಿತ್ರಕಲಾವಿದೆಯಾಗಿ, ಬಹುಮುಖ ಪ್ರತಿಭೆಯಾಗಿರುವ ಇವಳು, ನಾಡಿನಾದ್ಯಂತ ತನ್ನ ನೃತ್ಯಪ್ರದರ್ಶನಗಳನ್ನು ನೀಡಿದ್ದಾಳೆ. ಡಾ.ಗಂಗೂಬಾಯಿ ಹಾನಗಲ್ ಸಂಗೀತ–ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಶಿಕ್ಷಕಿ, ತರಬೇತಿದಾರರಾಗಿರುವ ಮಾಧುರಿ, ತನ್ನ ಪ್ರತಿಭಾ ಪ್ರದರ್ಶನಕ್ಕಾಗಿ ಇದೇ ತಿಂಗಳ ದಿ.27 ಭಾನುವಾರದಂದು ಬೆಳಗ್ಗೆ 9.45 ಕ್ಕೆ ಜಯನಗರದ 'ವಿವೇಕ' – ಯುವಪಥ ಆಡಿಟೋರಿಯಂನಲ್ಲಿ ವಿದ್ಯುಕ್ತವಾಗಿ ತನ್ನ ರಂಗಪ್ರವೇಶವನ್ನು ನೆರವೇರಿಸಿಕೊಳ್ಳಲಿದ್ದಾಳೆ. ಅವಳ ಕಣ್ಮನ ಸೆಳೆಯುವ ನೃತ್ಯವಲ್ಲರಿಯನ್ನು ಕಣ್ತುಂಬಿಕೊಳ್ಳಲು ಎಲ್ಲಾ ಕಲಾರಸಿಕರಿಗೂ ಆದರದ ಸುಸ್ವಾಗತ. ಮೂಲತಃ ಚಿಕ್ಕಮಗಳೂರಿನವರಾದ ಮಾಧುರಿ ಬಹುಮುಖ ಪ್ರತಿಭೆ.

ಬಾಲ್ಯದಿಂದಲೂ ನೃತ್ಯ ಎಂದರೆ ಮಹಾ ಒಲವು. ಅವಳ ನೃತ್ಯಪ್ರತಿಭೆಯನ್ನು ಗಮನಿಸಿದ ಹೆತ್ತವರು ಅವಳ ಏಳರ ಎಳವೆಯಲ್ಲೇ ಶಾಸ್ತ್ರೀಯವಾಗಿ ನೃತ್ಯ ಕಲಿಸತೊಡಗಿದರು. ವಿ. ಸುಮನಾ ರಾಮಚಂದ್ರ ಅವರ ಬಳಿ ಕಲಿತು ಜ್ಯೂನಿಯರ್ ಮತ್ತು ಸೀನಿಯರ್ ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್ ಪಡೆದ ಸಾಧನೆ ಮಾಧುರಿಯದು.

ಮದುವೆಯಾಗಿ ಬೆಂಗಳೂರಿಗೆ ಬಂದನತರವೂ ನೃತ್ಯದ ಒಲವು ಹೆಚ್ಚುತ್ತಲೇ ಹೋದದ್ದು ಮಾಧುರಿ ವೈಶಿಷ್ಟ್ಯ. ಅನಂತರ ಬೆಂಗಳೂರಿನಲ್ಲಿ ಸಾಧನಾ ಡ್ಯಾನ್ಸ್ ಸೆಂಟರ್'ನ ಗುರು ಭಾವನಾ ಅವರ ಮಾರ್ಗದರ್ಶನದಲ್ಲಿ ನೃತ್ಯ ಮುಂದುವರಿಸಿ, ಕಲಾತ್ಮಕ ಆಯಾಮಗಳ ಕಡೆ ಗಮನವಿತ್ತು ಬಹು ಬದ್ಧತೆ– ಪರಿಶ್ರಮದಿಂದ ಅಭ್ಯಾಸ ಮಾಡುತ್ತಿದ್ದಾಳೆ. ನಾಡಿನಾದ್ಯಂತ ನೃತ್ಯ ಪ್ರದರ್ಶನ ನೀಡಿರುವ ಇವಳು ಅನೇಕ ನೃತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನ– ಮೆಚ್ಚುಗೆಗಳನ್ನು ಗಳಿಸಿದ್ದಾಳೆ. ಇವಳು ಭಾಗವಹಿಸಿದ ಕೆಲವು ನೃತ್ಯ ಕಾರ್ಯಕ್ರಮಗಳೆಂದರೆ– ಹಂಪಿ ಉತ್ಸವ, ಸಾಧನೋತ್ಸವ, ಮೈಸೂರು ದಸರಾ, ಚುಂಚನ, ಕಾಮೆಟ್ ಉತ್ಸವ, ಸಿ. ಅಶ್ವತ್ ನಮನ, ಜನಪದ ಉತ್ಸವ , ಪ್ರತಿಭಾ ಕಾರಂಜಿ ಇನ್ನೂ ಮುಂತಾದ ಹಲವು ನೃತ್ಯೋತ್ಸವಗಳಲ್ಲಿ ತನ್ನ ಪ್ರತಿಭಾ ಪ್ರದರ್ಶನ ಮಾಡಿರುವುದು ಇವಳ ವಿಶೇಷ. ಕಂಪ್ಯೂಟರ್ ಎಂಜಿನಿಯರ್ ಆದ ಮಾಧುರಿ, ಪ್ರವಾಸದಲ್ಲಿ ತುಂಬಾ ಒಲವುಳ್ಳವಳು ಕೂಡ. ವಿಶ್ವದ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಅರಿಯಲು ಸುಮಾರು 15 ಕ್ಕೂ ಹೆಚ್ಚು ದೇಶಗಳ ಪ್ರವಾಸ ಮಾಡಿದ್ದು, ತನ್ನ ಅನುಭವ ವಿಸ್ತರಿಸಿಕೊಂಡಿದ್ದಾಳೆ. ನೃತ್ಯರಂಗದಲ್ಲಿ ಇನ್ನೂ ಅಪಾರ ಸಾಧನೆ ಮಾಡುವ ಕನಸು ಮಾಧುರಿಯದು.



# ಹೆಚ್ಚು ಹೆಚ್ಚು ಹಿಂದೂಗಳನ್ನು ಸಂಘಟಿಸಿ: ಯೋಗಿ ಆದಿತ್ಯನಾಥ್, ಮುಖ್ಯಮಂತ್ರಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಲಕ್ನೋ

ಸನಾತನ ಸಂಸ್ಥೆಯ ಸಂಸ್ಥಾಪಕರಾದ ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಲಾಜಿ ಆಠವಲೆ ಅವರ 83 ನೇ ಜನ್ಮೋತ್ಸವ ಮತ್ತು ಸನಾತನ ಸಂಸ್ಥೆಯ ರಜತ ಮಹೋತ್ಸವ ವರ್ಷದ ಸಂದರ್ಭದಲ್ಲಿ, 2025 ರ ಮೇ 17 ರಿಂದ 19 ರವರೆಗೆ ಗೋವಾದಲ್ಲಿ ನಡೆಯಲಿರುವ ಭವ್ಯವಾದ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ಕ್ಕೆ 'ಗೋರಕ್ಷಪೀಠ ಪೀಠಾಧೀಶ್ವರ' ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀ. ಯೋಗಿ ಆದಿತ್ಯನಾಥ್ ಮಹಾರಾಜ್ ಅವರಿಗೆ ಆಮಂತ್ರಿಸಲಾಯಿತು. ಈ ಸಂದರ್ಭದಲ್ಲಿ 'ಸನಾತನ ರಾಷ್ಟ್ರ ಶಂಖನಾದ ಮಹೋತ್ಸವ'ದ 'ಸ್ವಾಗತ ಸಮಿತಿ'ಯಿಂದ ಸದ್ಗುರು (ಡಾ.) ಚಾರುದತ್ತ ಪಿಂಗಳೆ, ಮಡಿಯಾಹು ವಿಧಾನಸಭಾ ಕ್ಷೇತ್ರದ ಜೌನಪುರದ ಶಾಸಕ ಶ್ರೀ. ರವೀಂದ್ರ ಕುಮಾರ್ ಪಟೇಲ್ ಮತ್ತು ಶ್ರೀ. ವಿಶ್ವನಾಥ ಕುಲಕರ್ಣಿ ಇವರು ಉತ್ತರ ಪ್ರದೇಶದ ಲಕ್ನೋದಲ್ಲಿರುವ ಮುಖ್ಯಮಂತ್ರಿ ಕಚೇರಿಯಲ್ಲಿ ಯೋಗಿಯವರನ್ನು ಭೇಟಿಯಾದರು.

ಕಳೆದ 25 ವರ್ಷಗಳಲ್ಲಿ ಸನಾತನ ಸಂಸ್ಥೆಯ ಕಾರ್ಯದ ಬಗ್ಗೆ ಮುಖ್ಯಮಂತ್ರಿಯವರಿಗೆ ತಿಳಿಸಲಾಯಿತು. ಸನಾತನ ಸಂಸ್ಥೆಯ ಕಾರ್ಯದ ಬಗ್ಗೆ ಕೇಳಿದ ನಂತರ ಅವರು ಸನಾತನ ಸಂಸ್ಥೆಯ ಉತ್ತಮ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು. ಈ ಕಾರ್ಯಕ್ಕೆ ಅಭಿನಂದನೆಗಳು ! ಪ್ರಸ್ತುತ, ಹಿಂದೂಗಳನ್ನು ವಿಭಜಿಸಲು ದೊಡ್ಡ ಪ್ರಮಾಣದ ಪ್ರಯತ್ನಗಳು ನಡೆಯುತ್ತಿವೆ. ಹೆಚ್ಚು ಹೆಚ್ಚು ಹಿಂದೂಗಳನ್ನು ಸಂಘಟಿಸುವುದು ಅಗತ್ಯ. ಇಂತಹ ಕಾರ್ಯಕ್ರಮಗಳ ಮೂಲಕ ಹೆಚ್ಚು ಹೆಚ್ಚು ಹಿಂದೂಗಳನ್ನು ಸಂಘಟಿಸುವಂತೆ ಅವರು ಆಶೀರ್ವದಿಸಿದರು.

ಕೊನೆಗೆ, 'ಸನಾತನ ಸಂಸ್ಥೆ' ನಿರ್ಮಿಸಿದ ಸಾತ್ತ್ವಿಕ ಚಿತ್ರವಿರುವ ಶ್ರೀರಾಮನ ಭವ್ಯ ಪ್ರತಿಮೆ, ಹಾಗೂ ಹಿಂದೂ ಜನಜಾಗೃತಿ ಸಮಿತಿ ನಿರ್ಮಿಸಿದ 'ಹಿಂದೂ ರಾಷ್ಟ್ರ ಏಕೆ ಬೇಕು', 'ಹಿಂದೂ ರಾಷ್ಟ್ರ ಸ್ಥಾಪನೆಯ ದಿಶೆ', 'ಹಿಂದೂ ರಾಷ್ಟ್ರ – ಆಕ್ಷೇಪ ಮತ್ತು ಖಂಡನೆ', 'ಹಲಾಲ್ ಜಿಹಾದ್' ಎಂಬ ಹಿಂದಿ ಭಾಷಾ ಗ್ರಂಥಗಳನ್ನು ಮುಖ್ಯಮಂತ್ರಿ ಅವರಿಗೆ ಉಡುಗೊರೆಯೆಂದು ನೀಡಲಾಯಿತು.

# ಷೇರು ಮಾರುಕಟ್ಟೆಯ ಜ್ಞಾನ ಎಂದಿಗೂ ನೇರ, ಸ್ಪಷ್ಟವಾಗಿಲ್ಲ...



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

**ಬದಲಾವಣೆ ಮಾತ್ರ ಇರುತ್ತದೆ**

ಕಳೆದ ಸುಮಾರು 35 ವರ್ಷಗಳಿಂದ ಷೇರು ಮಾರುಕಟ್ಟೆಯ ಅಂಕಿ ಸಂಖ್ಯೆಗಳನ್ನು ಗಮನಿಸುತ್ತಿದ್ದೇನೆ. ಅದರ ಏರಿಳಿತಗಳು ಕೆಲವೊಮ್ಮೆ ಊಹೆಗೂ ನಿಲುಕುವುದಿಲ್ಲ. ಇದು ಸಂಪೂರ್ಣ ಜೂಜಲ್ಲ. ಆದರೆ ಸಾಕಷ್ಟು ಜೂಜಿನ ಗುಣಲಕ್ಷಣಗಳನ್ನೇ ಹೊಂದಿರುವ ಒಂದು ವ್ಯಾಪಾರ ವಹಿವಾಟು ವ್ಯವಸ್ಥೆ. ಸಾಧಾರಣ ಸಾಮಾನ್ಯ ದಿನಗಳಲ್ಲಿ ಇದು ಸಾಕಷ್ಟು ನಿಯಂತ್ರಣದಲ್ಲಿಯೇ ಕಾರ್ಯನಿರ್ವಹಿಸುತ್ತದೆ. ಆಗ ಸಣ್ಣ ಪ್ರಮಾಣದ ಬದಲಾವಣೆ ಮಾತ್ರ ಇರುತ್ತದೆ. ಆದರೆ ಕೆಲವು ಸುದ್ದಿಗಳು – ಗಾಳಿ ಸುದ್ದಿಗಳು – ಇನ್ನೂ ವಾಸ್ತವಕ್ಕೆ ತುಂಬಾ ದೂರವಿರುವಾಗಲೇ ವಿವೇಚನೆಯೂ ಬಳಸದೆ ದಿಡೀರನೇ ಆಘಾತಕಾರಿ ಬೆಳವಣಿಗೆಗಳು ಕಂಡು ಬರುತ್ತವೆ. ಆಗ ಅದರಲ್ಲಿ ತೊಡಗಿರುವ ಜನಗಳ ಮಾನಸಿಕತೆಯ ಬಗ್ಗೆ ತುಂಬಾ ಕುತೂಹಲ ಮೂಡುತ್ತದೆ. ಇದಕ್ಕೆ ಹಲವಾರು ಕಾರಣಗಳು ಇರಬಹುದು.ಹಣದ ಮೇಲಿನ ಅತಿಯಾದ ವ್ಯಾಮೋಹ, ನಷ್ಟದ ಭೀತಿ, ಏಜೆಂಟರುಗಳು ಸೃಷ್ಟಿಸುವ ಕೃತಕ ತಂತ್ರಗಳು, ಕೆಲವು ಕಂಪನಿಗಳ ಸುಳ್ಳು ಲೆಕ್ಕಗಳು ಇನ್ನೂ ಏನೇನೂ ಇರಬಹುದು. ಕಾರಣಗಳು ಏನೇ ಇರಲಿ, ಹೊರಗೆ ನಿಂತು ನೋಡುವ ವರಿಗೆ ಷೇರು ಮಾರುಕಟ್ಟೆಯ ವಹಿವಾಟು ನಡೆಸುವವರಿಗೆ ತಾಳ್ಮೆ ಕಡಿಮೆ ಇರಬೇಕು ಎನಿಸುತ್ತದೆ. ಏಕೆಂದರೆ ಅವರ ದಿಢೀರ್ ತೀರ್ಮಾನಗಳು ಹಾಗೆಯೇ ಇರುತ್ತದೆ. ದೀರ್ಘಕಾಲದ ಬಂಡವಾಳ ಹೂಡಿಕೆ ಮಾಡು ವವರನ್ನು ಹೊರತುಪಡಿಸಿ, ದಿನನಿತ್ಯದ ವ್ಯವಹಾರ ಮಾಡುವವರು ದುಡ್ಡಿನ ಜೊತೆ ತಮ್ಮ ಭಾವನೆಗಳನ್ನು ಜೋಡಿಸಿರುತ್ತಾರೆ. ಯಾವುದೋ ಒಂದು ಸುದ್ದಿಯನ್ನು ನೋಡಿ ದಿಢೀರನೆ ತೀರ್ಮಾನ ಕೈಗೊಳ್ಳುತ್ತಾರೆ. ಅದರಿಂದಾಗಿಯೇ ಆಸೆ, ನಿರಾಸೆ, ಒತ್ತಡಗಳು, ಕನಸುಗಳು ಎಲ್ಲವೂ ರಕ್ತದೊತ್ತಡದಂತೆ ಏರಿಳಿತ ದಾಖಲಿಸುತ್ತದೆ. ಸುದ್ದಿ ಯಾವುದೇ ಇರಲಿ, ಅದರ ಪರಿಣಾಮ ಫಲಿತಾಂಶ ಎಲ್ಲವೂ ಸಮಯವನ್ನು ಅವಲಂಬಿಸಿರುತ್ತದೆ. ಆದರೆ ಈ ಷೇರು ಮಾರುಕಟ್ಟೆ ಜನಗಳು ಅದಕ್ಕೆ ಕಾಯದೆ ಬೇಗ ಪ್ರತಿಕ್ರಿಯಿಸುತ್ತಾರೆ. ಅದನ್ನು ಏರು ಮುಖದಲ್ಲಿ ಇದ್ದಾಗ ಗೂಳಿ ಓಟ ಎನ್ನುತ್ತಾರೆ, ಕೆಳ ಮುಖವಾಗಿ ಬಿದ್ದಾಗ ಕರಡಿ ಕುಣಿತ ಎನ್ನುತ್ತಾರೆ. ಈ ಷೇರು ಮಾರುಕಟ್ಟೆಯ ಇನ್ನೊಂದು ವಿಚಿತ್ರವೆಂದರೆ ಹಲವಾರು ಆರ್ಥಿಕ ತಿಳಿವಳಿಕೆಯವರು, ಏಜೆಂಟರುಗಳು ಕೆಲವು ಶಿಬಿರಗಳನ್ನು ಏರ್ಪಡಿಸಿ ಸಾಮಾನ್ಯ ಜನರನ್ನು ಈ ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸಲು ಭೋದನೆ ಮಾಡುತ್ತಾರೆ. ಬಹಳಷ್ಟು ಲಾಭದ ಭರವಸೆ ನೀಡುತ್ತಾರೆ. ಅದಕ್ಕೆ ತಾವು ಸಲಹೆ ಸೂಚನೆ ಮಾರ್ಗದರ್ಶನ ನೀಡುವುದಾಗಿ ಹೇಳುತ್ತಾರೆ.

**ನನ್ನ ಕುತೂಹಲ ಏನೆಂದರೆ:** ಈ ರೀತಿಯಲ್ಲಿ ಸಲಹೆ ನೀಡುವವರೆ ತಮ್ಮಲ್ಲಿರುವ ಹಣವನ್ನು ಷೇರು ಪೇಟೆಯಲ್ಲಿ ತೊಡಗಿಸಿ ಸಾಧ್ಯವಿರುವ ಎಲ್ಲಾ ಲಾಭಗಳನ್ನು ಮಾಡಿಕೊಳ್ಳಬಹುದಲ್ಲವೇ ಅಥವಾ ಜನರ ಹಣವನ್ನು ಪಡೆದು ಅದಕ್ಕೆ ಗ್ಯಾರಂಟಿ ನೀಡಿ ಅವರೂ ಲಾಭ ಮಾಡಿಕೊಂಡು ಜನರಿಗೂ ಲಾಭ ಮಾಡಿಕೊಡಬಹುದಲ್ಲವೇ ?..... ಆದರೆ ಅದರಲ್ಲಿ ತುಂಬಾ ರಿಸ್ಕ್ ಇರುತ್ತದೆ. ಅದನ್ನು ಅವರು ಮರೆ ಮಾಚುವಂತೆ ಹೇಳುತ್ತಾರೆ. ಎಚ್ಚರಿಕೆ ಇರಬೇಕು ಎಂದು ಸಲಹೆ ನೀಡುತ್ತಾರೆ. ಸಮಸ್ಯೆ ಇರುವುದೇ ಅಲ್ಲಿ. ಯಾವ ರೀತಿಯ ಎಚ್ಚರಿಕೆ ಎಂಬುದೇ ಗೊಂದಲ. ಷೇರು ಪೇಟೆಯ ವ್ಯವಹಾರಗಳು ಅನೇಕ ಬಾರಿ ಯಾರ ಊಹೆಗೂ ನಿಲುಕುವುದಿಲ್ಲ. ಆಗ ಬಹಳಷ್ಟು ನಷ್ಟ ಸಂಭವಿಸುತ್ತವೆ. ಅದನ್ನು ತಡೆದುಕೊಳ್ಳಲು ಸಾಮಾನ್ಯರಿಗೆ ಸಾಧ್ಯವಾಗುವುದಿಲ್ಲ..... ಷೇರು ಪೇಟೆಯ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ, ಪತ್ರಿಕೆಗಳಲ್ಲಿ ಬರೆಯುವ, ಟಿವಿಯಲ್ಲಿ ಮಾತನಾಡುವ, ಅದರಲ್ಲಿ ಸಾಕಷ್ಟು ಬಂಡವಾಳ ಹೂಡಿರುವ ಜನರೊಂದಿಗೆ ಇದರ ಬಗ್ಗೆ ಚರ್ಚಿಸಿದಾಗ ನನ್ನ ಗ್ರಹಿಕೆಗೆ ಸಿಕ್ಕ ವಿಷಯವೇನೆಂದರೆ.....

ಷೇರು ಮಾರುಕಟ್ಟೆಯ ಜ್ಞಾನ ಎಂದಿಗೂ ನೇರ ಮತ್ತು ಸ್ಪಷ್ಟವಾಗಿಲ್ಲ. ಅದು ಯಾರಿಗೂ ಸಂಪೂರ್ಣ ನಿಯಂತ್ರಣಕ್ಕೆ ಸಿಗುವುದಿಲ್ಲ. ಅದು ಅನೇಕ ಸಮಯ ಸಂದರ್ಭಗಳನ್ನು ಅವಲಂಬಿಸಿರುತ್ತೆ. ಅದೃಷ್ಟ ದುರಾದೃಷ್ಟಗಳು ಎಂದು ಕರೆಯಲ್ಪಡುವ ಸಮಯ ಪ್ರಜ್ಞೆ ಇಲ್ಲಿ ಸ್ವಲ್ಪ ಕೆಲಸ ಮಾಡುತ್ತದೆ. ಕೆಲವರಿಗೆ ಮಾತ್ರ ಲಾಭವಾಗಿ ಬಹಳಷ್ಟು ಜನರಿಗೆ ನಷ್ಟವಾಗುತ್ತದೆ. ಷೇರು ಮಾರುಕಟ್ಟೆಯ ಬಗ್ಗೆ ನಮಗೆ ಸಂಪೂರ್ಣ ತಿಳಿದಿದೆ ಎಂಬುದು ಜ್ಯೋತಿಷಿಗಳ ಭವಿಷ್ಯದಂತೆ ಕೇವಲ ಸಾಧ್ಯತೆಗಳು ಮಾತ್ರ. ಇಂತಹ ಅನಿಶ್ಚಿತ ವ್ಯವಹಾರದಲ್ಲಿ ಎಲ್ಐಸಿ ಮತ್ತು ಎಸ್ ಬಿ ಐ ಸೇರಿ ಕೆಲವು ಪ್ರಮುಖ ಬ್ಯಾಂಕುಗಳು ಸಾರ್ವಜನಿಕ ಹಣವನ್ನು ತೊಡಗಿಸುವುದು ಎಷ್ಟು ಸರಿ, ಎಷ್ಟು ಅವಶ್ಯ. ಠೇವಣಿಗಳಿಗೆ ಒಂದಷ್ಟು ಬಡ್ಡಿ ನೀಡಿ, ಸಾಲಗಳಿಗೆ ಅದಕ್ಕಿಂತ ಸ್ವಲ್ಪ ಹೆಚ್ಚು ಬಡ್ಡಿ ವಸೂಲಿ ಮಾಡಿಕೊಂಡು ಆಡಳಿತ ವೆಚ್ಚ ಸರಿದೂಗಿಸಿ ಜನರಿಗೆ ಒಳ್ಳೆ ನಂಬಿಕೆಯ ಸೇವೆ ಸಲ್ಲಿಸುತ್ತಾ ಅತ್ಯಂತ ಸುರಕ್ಷಿತವಾಗಿ ದೀರ್ಘಕಾಲ ವ್ಯವಹಾರ ಮಾಡುವುದು ಒಳ್ಳೆಯದಲ್ಲವೇ.... ಅದರಿಂದ ದೇಶದ ನಂಬುಗೆಯ ಸುಭದ್ರ ಆರ್ಥಿಕ ತಳಹದಿ ಪರೋಕ್ಷವಾಗಿ ಅಭಿವೃದ್ಧಿ ಸಾಧಿಸುತ್ತದೆಯಲ್ಲವೇ. ಕಳೆದ ದಶಕದ ವಿಶ್ವ ಆರ್ಥಿಕ ಕುಸಿತದ ಸಂದರ್ಭದಲ್ಲಿ ಭಾರತದ ಸರ್ಕಾರಿ ಬ್ಯಾಂಕಿಂಗ್ ವ್ಯವಸ್ಥೆ ವಿಶ್ವದಲ್ಲೇ ಹೆಚ್ಚು ಸ್ಥಿರತೆ ಕಾಪಾಡಿಕೊಂಡು ಒಂದು ಮಾದರಿ ಎನಿಸಿತಲ್ಲವೇ..... ಯಾರೋ ಖಾಸಗಿ ವ್ಯಕ್ತಿಗಳು ರಿಸ್ಕ್ ತೆಗೆದುಕೊಂಡು ಷೇರು ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸಿ ಲಾಭ ನಷ್ಟ ಮಾಡಿಕೊಳ್ಳಲಿ. ಅದು ಅವರ ಆಯ್ಕೆ.... ಶಿಕ್ಷಣ ಮತ್ತು ಆರೋಗ್ಯ ವ್ಯಾಪರೀಕರಣವಾಗಿದೆ. ಈಗ ಎಲ್ಐಸಿ ಮತ್ತು ಭಾರತದ ಸರ್ಕಾರಿ ಬ್ಯಾಂಕುಗಳು ಸಹ ಆರ್ಥಿಕ ಸೇವಾ ಸಂಸ್ಥೆಗಳಾಗಿ ತಮ್ಮ ಪ್ರಾಮಾಣಿಕ ನಂಬಿಕೆಯ ಸಂಸ್ಥೆಗಳಾಗದೆ ಹಣದ ಹಿಂದೆ ಬಿದ್ದು ಅಂದರೆ ಸೇವೆಯೂ ವ್ಯಾಪಾರವಾದರೆ ಮನುಷ್ಯ ಗ್ರಾಹಕನಾದರೆ ನಾಗರಿಕ ಸಮಾಜ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತದೆ. ಮತ್ತೆ ಅನಾಗರಿಕ ಸಮಾಜ ಜಾರಿಯಲ್ಲಿರುತ್ತದೆ. ಈಗ ಅದು ಪ್ರಾರಂಭವಾಗಿದೆ.



# ಅತ್ಯಾಧುನಿಕ ಸಣ್ಣ ಶಸ್ತ್ರಾಸ್ತ್ರ ಉತ್ಪಾದನಾ ಘಟಕ ಆರಂಭ

## ಕಾರ್ಕಲ್ ಮತ್ತು ಐಕಾಮ್ ನಡುವೆ ಮಹತ್ವದ ಒಪ್ಪಂದ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಹೈದರಾಬಾದ್

ಯುಎಇಯ ಪ್ರಮುಖ ಸಣ್ಣ ಶಸ್ತ್ರಾಸ್ತ್ರ ತಯಾರಕ ಮತ್ತು ಎಡ್ಜ್ ಸಮೂಹದ ಕಾರ್ಕಲ್, ಸಹಯೋಗದೊಂದಿಗೆ ಮೇಘಾ ಎಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್)ನ ಸಮೂಹ ಕಂಪನಿಯಾದ ಐಕಾಮ್ ಟೆಲಿ ಲಿಮಿಟೆಡ್ ಇಲ್ಲಿನ ಐಕಾಮ್ನ ಇಂಟಿಗ್ರೇಟೆಡ್ ಎಂಜಿನಿಯರಿಂಗ್ ಘಟಕದಲ್ಲಿ ವಿಶ್ವದರ್ಜೆಯ ಸಣ್ಣ ಶಸ್ತ್ರಾಸ್ತ್ರ ಉತ್ಪಾದನಾ ಸೌಲಭ್ಯಕ್ಕೆ ಚಾಲನೆ ನೀಡಲಾಯಿತು. ಈ ಘಟಕವು ಟಿಓಟಿ ಒಪ್ಪಂದದಂತೆ ಸುಧಾರಿತ ಶಸ್ತ್ರಾಸ್ತ್ರಗಳ ಸಮಗ್ರ ಸ್ಥಳೀಯ ಉತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ.

### ಐಕಾಮ್‌ನ ಈ ಘಟಕದಲ್ಲಿ ಉತ್ಪಾದಿಸಲಾಗುವ ಶಸ್ತ್ರಾಸ್ತ್ರಗಳ ವಿವರ

- 5.56X45MM NATOನಲ್ಲಿ ಚೇಂಬರ್ ಮಾಡಲಾದ ಮಿಷನ್ -ಸಾಬೀತಾದ ಇಕ್ಕ 816 ಕ್ಲೋಸ್-ಕ್ವಾರ್ಟರ್ಸ್ ಬ್ಯಾಟಲ್ ರೈಫಲ್
- 7.62X51MM NATOದಲ್ಲಿ ಚೇಂಬರ್ ಮಾಡಲಾದ, ಹೆಚ್ಚು ವಿಶ್ವಾಸಾರ್ಹ CAR 817 ಅಸಾಲ್ಟ್ ರೈಫಲ್.
- ಹಗುರವಾದ CSR 338 ಬೋಲ್ಟ್-ಆಕ್ಷನ್ ಸ್ನೈಪರ್ ರೈಫಲ್, .338 ಲ್ಯಾಪುವಾ ಮ್ಯಾಗ್ನಮ್ನಲ್ಲಿ ಚೇಂಬರ್ ಮಾಡಲಾಗಿದೆ.
- ಹಗುರವಾದ CSR 308 ಬೋಲ್ಟ್-ಆಕ್ಷನ್ ಸ್ನೈಪರ್ ರೈಫಲ್, 308 ವಿಂಚೆಸ್ಟರ್ನಲ್ಲಿ ಚೇಂಬರ್ ಮಾಡಲಾಗಿದೆ.
- 12.7X99MM NATOದಲ್ಲಿ ಚೇಂಬರ್ ಮಾಡಲಾದ, ಹೆಚ್ಚು ನಿಖರವಾದ ಇಖ್ಖ 50 ಬೋಲ್ಟ್-ಆಕ್ಷನ್ ಆಂಟಿ-ಮೆಟೀರಿಯಲ್ ಸ್ನೈಪರ್ ರೈಫಲ್.
- ಆಧುನಿಕ CMP9 ಸಬ್ಮಷಿನ್ ಗನ್, 9X19MM ಚೇಂಬರ್ಡ್
- ಬಹುಮುಖ CARACAL EF, CARACAL F GEN II ಯುದ್ಧ ಪಿಸ್ತೂಲ್ಗಳು, 9X19MM ಚೇಂಬರ್ ಮಾಡಲಾಗಿದೆ.

**ಒಂದು ಪ್ರಮುಖ ಹೆಜ್ಜೆ**

ಇದು ಯುಎಇ– ಭಾರತ ರಕ್ಷಣಾ ಸಹಯೋಗದಲ್ಲಿ ಒಂದು ಹೆಗ್ಗುರುತು ಮೈಲಿಗಲ್ಲಾಗಿದೆ. ಈ ಮುಂದಿನ ಪೀಳಿಗೆಯ ಶಸ್ತ್ರಾಸ್ತ್ರಗಳು ಭಾರತೀಯ ಸಶಸ್ತ್ರ ಪಡೆಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು (ಸಿಆರ್ಪಿಎಫ್), ವಿಶೇಷ ಪಡೆಗಳು, ರಾಜ್ಯ ಪೊಲೀಸ್ ಪಡೆಗಳು, ಎಸ್ಪಿಜಿಗಳ ನಿರ್ಣಾಯಕ ಅಗತ್ಯಗಳನ್ನು ಪೂರೈಸುತ್ತವೆ ಮತ್ತು ಕಾರ್ಕಲ್‌ನ ಜಾಗತಿಕ ರಫ್ತಿಗೂ ಸಹಕಾರಿಯಾಗಲಿದೆ. ಈ ಸೌಲಭ್ಯವು ಭಾರತದ ರಕ್ಷಣಾ ಪಡೆಗಳಿಗೆ ನಮ್ಮ ಅಚಲ ಬದ್ಧತೆ ಮತ್ತು ನಮ್ಮ ಗೌರವಾನ್ವಿತ ಪ್ರಧಾನ ಮಂತ್ರಿ ನರೇಂದ್ರ ಅವರ ದೂರದೃಷ್ಟಿಯ ಮೇಲಿನ ನಮ್ಮ ನಂಬಿಕೆಗೆ ಸಾಕ್ಷಿಯಾಗಿದೆ. ಮೋದಿ ಅವರ ಆತ್ಮನಿರ್ಭರ ಭಾರತಕ್ಕಾಗಿ ಐಕಾಮ್ನಲ್ಲಿ ನಾವು ಭಾರತದಲ್ಲಿ ಮಾತ್ರ ತಯಾರಿಸುತ್ತಿಲ್ಲ, ಭಾರತಕ್ಕಾಗಿ ಮತ್ತು ಜಾಗತಿಕವಾಗಿ ನಿಖರತೆ, ಹೆಮ್ಮೆ ಮತ್ತು ಪ್ರಬಲ ಉದ್ದೇಶದಿಂದ ತಯಾರಿಸುತ್ತಿದ್ದೇವೆ ಎಂದು ಐಕಾಮ್ನ ವ್ಯವಸ್ಥಾಪಕ ನಿರ್ದೇಶಕ ಸುಮಂತ್ ಪಟೂರು ಹರ್ಷಿಸಿದರು.

ಐಕಾಮ್– ಕಾರ್ಕಲ್ ಸಣ್ಣ ಶಸ್ತ್ರಾಸ್ತ್ರ ಸಂಕೀರ್ಣದ ಉದ್ಘಾಟನೆಯು ಭಾರತೀಯ ಶಸ್ತ್ರಾಸ್ತ್ರ ಮಾರುಕಟ್ಟೆ ಮತ್ತು ರಕ್ಷಣಾ ವಲಯವನ್ನು ಬೆಂಬಲಿಸುವ ನಮ್ಮ ಪ್ರಯತ್ನಗಳಲ್ಲಿ ಇದು ಒಂದು ಮೈಲಿಗಲ್ಲು, ಯುಎಇಯಿಂದ ಭಾರತಕ್ಕೆ ಮೊದಲ ಸಣ್ಣ ಶಸ್ತ್ರಾಸ್ತ್ರ ತಂತ್ರಜ್ಞಾನ ವರ್ಗಾವಣೆಯಾಗಿರುವ ಈ ಕಾರ್ಖಾನೆಯು ಪ್ರಧಾನಿ ಮೋದಿಯವರ ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೆ ನಮ್ಮ ಬದ್ಧತೆಯನ್ನು ಮತ್ತಷ್ಟು ಎತ್ತಿ ತೋರಿಸುತ್ತದೆ ಎಂದು ಕಾರ್ಕಲ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಮದ್ ಅಲಮೇರಿ ಹೇಳಿದರು. ಹೈದರಾಬಾದ್ನಲ್ಲಿ ತಲೆಎತ್ತಿರುವ ಈ ಅತ್ಯಾಧುನಿಕ ಶಸ್ತ್ರಾಸ್ತ್ರ ನಿರ್ಮಾಣ ಘಟಕವು ದೇಶದ ಆತ್ಮನಿರ್ಭರ ಭಾರತ್, ಮೇಕ್ ಇನ್ ಇಂಡಿಯಾ ಪ್ರಯಾಣದಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ.




ಉದಯವಾಹಿನಿ ಚಿತ್ರ

ಜಾಗತಿಕ ತಂತ್ರಜ್ಞಾನವನ್ನು ಭಾರತೀಯ ಉತ್ಪಾದನಾ ಶ್ರೇಷ್ಠತೆಯೊಂದಿಗೆ ಸಂಯೋಜಿಸುತ್ತದೆ. ಇದು ಕಾರ್ಕಲ್ನ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಸಹ ಬೆಂಬಲಿಸುತ್ತದೆ, ವಿಶ್ವಾಸಾರ್ಹ ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗಿ ಭಾರತದ ಪಾತ್ರವನ್ನು ಬಲಪಡಿಸುತ್ತದೆ.

● ಪುರುಷರು ಬಾರುಕೋಲು ಹಾಗೂ ಮಹಿಳೆಯರು ಪೊರಕೆ ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

# ಅಲಿಬಾಬ ತದ್ರೂಪ ಮುಖ್ಯಮಂತ್ರಿ ಸಿದ್ದರಾಮಯ್ಯ: ಡಿ.ವಿ.ಸದಾನಂದಗೌಡ

• ಉದಯವಾಹಿನಿ ದಾವಣಗೆರೆ

ಅಲಿಬಾಬ ಮತ್ತು 40 ಕಳ್ಳರ ತದ್ರೂಪವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಸಚಿವ ಸಂಪುಟದ ಡೋಗಿ ಮಂತ್ರಿಗಳು, ಸರ್ಕಾರದ ಖಜಾನೆಯನ್ನು ಕೊಳ್ಳೆ ಹೊಡೆದ ಇವರು ಬೆಲೆ ಏರಿಕೆಯ ಹೆಸರಿನಲ್ಲಿ ಜನರ ಜೇಬಿಗೂ ಕೈಹಾಕಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಟೀಕಿಸಿದರು.

ಜಯದೇವ ವೃತ್ತದಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ 3ನೇ ಹಂತದ ಜನಾಕ್ರೋಶ ಯಾತ್ರೆಯ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು. ಪುರುಷರು ಬಾರುಕೋಲು ಹಾಗೂ ಮಹಿಳೆಯರು ಪೊರಕೆ ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ರಾಜ್ಯದ ಖಜಾನೆಯನ್ನು ಕಳ್ಳರೆಲ್ಲರೂ ಸೇರಿ ಲೂಟಿ ಮಾಡಿದ್ದಾರೆ. ಕೊಳ್ಳೆ ಹೊಡೆಯಲು ಮತ್ತೆ ಖಜಾನೆ ಭರ್ತಿಗೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದಾರೆ. ಕರ್ನಾಟಕದ 300 ಕಿ.ಮೀ ಉದ್ದದ ಕರಾವಳಿಗೆ ಅಪ್ಪಳಿಸುವ ಸಮುದ್ರದ ತೆರೆ ಹಾಗೂ ಉಸಿರಾಡುವ ಗಾಳಿ ಹೊರತುಪಡಿಸಿ ಎಲ್ಲದಕ್ಕೂ ರಾಜ್ಯದಲ್ಲಿ ತೆರಿಗೆ ವಿಧಿಸಲಾಗಿದೆ' ಎಂದು ಕುಟುಕಿದರು. ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿಯಾದ ಬಳಿಕ ಹಾಲು, ಅಡುಗೆ ಎಣ್ಣೆ, ಇಂಧನ, ಕಂದಾಯ ಸೇರಿ 48 ರೀತಿಯಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ರಾಜ್ಯದ ಜನರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ರಾಜ್ಯದಲ್ಲಿ ಹೊಸ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಆದರೆ, ಪ್ರತಿ ಕಚೇರಿಯಲ್ಲಿ ಕಲೆಕ್ಷನ್ ಏಜೆಂಟ್‌ಗಳನ್ನು ನೇಮಕ ಮಾಡಲಾಗಿದೆ' ಎಂದು ಆರೋಪಿಸಿದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ನಿವೃತ್ತ ಪೊಲೀಸ್ ಮಹಾ ನಿರ್ದೇಶಕರೊಬ್ಬರು ಕೊಲೆಯಾಗಿದ್ದಾರೆ. ಜನರು ಮನೆಯಿಂದ ಹೊರಬರಲು ಭಯಪಡು ಸ್ಥಿತಿ ನಿರ್ಮಾಣವಾಗಿದೆ. ಹಾಡಹಗಲೇ ಬ್ಯಾಂಕ್‌ಗಳು ದರೋಡೆಯಾಗುತ್ತಿವೆ. ರಾಜಕೀಯ ವಿರೋಧಿಗಳನ್ನು ಆತ್ಮಹತ್ಯೆಗೆ ಪ್ರಚೋದಿಸುವ ಹುನ್ನಾರವೂ ನಡೆಯುತ್ತಿದೆ. ಕುಂಭಮೇಳದಲ್ಲಿ ಮುಳುಗೆದ್ದ ಮಾತ್ರಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾಪ, ಕಳಂಕ ನಿವಾರಣೆಯಾಗುವುದಿಲ್ಲ' ಎಂದರು.


ಉದಯವಾಹಿನಿ ಚಿತ್ರ

## ಸಿದ್ದೇಶ್ವರ, ಬಿ.ಪಿ.ಹರೀಶ್ ಗೈರು

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬದಲಾವಣೆಗೆ ಪಟ್ಟು ಹಿಡಿದಿದ್ದ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಹರಿಹರದ ಶಾಸಕ ಬಿ.ಪಿ.ಹರೀಶ್ ಜನಾಕ್ರೋಶ ಯಾತ್ರೆಗೆ ಗೈರಾಗಿದ್ದರು. ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರೊಂದಿಗೆ ಗುರುತಿಸಿಕೊಂಡ ಬಿಜೆಪಿ ಮುಖಂಡರು ಮಾತ್ರವೇ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. 'ಭಿನ್ನಾಭಿಪ್ರಾಯ ಬದಿಗಿಟ್ಟು ಒಗ್ಗೂಡಿ ಪಕ್ಷ ಕಟ್ಟುವ ಕೆಲಸ ಮಾಡಬೇಕಿದೆ. ಜನಾಕ್ರೋಶ ಯಾತ್ರೆ ಮುಗಿದ ಬಳಿಕ ಪ್ರತಿ ಜಿಲ್ಲೆಗೆ ಭೇಟಿ ನೀಡಿ ಚರ್ಚೆ ಮಾಡುತ್ತೇನೆ. ಎಲ್ಲರನ್ನು ಒಂದುಗೂಡಿಸಿಕೊಂಡು ಹೋಗುತ್ತೇನೆ' ಎಂದು ಬಿ.ವೈ.ವಿಜಯೇಂದ್ರ ಬಹಿರಂಗ ಸಭೆಯಲ್ಲಿ ಹೇಳಿದರು.

## 'ಧಾರ್ಮಿಕ ಭಾವನೆಗೆ ಧಕ್ಕೆ ತರಬೇಡಿ'

'ಬ್ರಾಹ್ಮಣರ ಜನಿವಾರವೂ ಸೇರಿದಂತೆ ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ರಾಜ್ಯ ಸರ್ಕಾರ ಧಕ್ಕೆಯುಂಟು ಮಾಡಬಾರದು. ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರವಾಗಿ ಪರಿಗಣಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು. ದೇಶದಾದ್ಯಂತ ಚರ್ಚೆ ಆಗುತ್ತಿರುವ ಜನಿವಾರದ ವಿಚಾರವನ್ನು ಸಿದ್ದರಾಮಯ್ಯ ಹಗುರವಾಗಿ ಪರಿಗಣಿಸಿದಂತೆ ಕಾಣುತ್ತಿದೆ. ಇದನ್ನು ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಬೇಡಿ. ಸಮುದಾಯದ ನಂಬಿಕೆಗಳನ್ನು ಗೌರವಿಸಿ' ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದರು. ಗ್ಯಾರಂಟಿ ಭ್ರಮೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯದ ವಾಸ್ತವ ಸ್ಥಿತಿ ಅರ್ಥವಾಗುತ್ತಿದೆ. ಬೆಂಗಳೂರಿಗೆ ಸೀಮಿತ ಆಗಿದ್ದ ಅವರು ಬಿಜೆಪಿ ಜನಾಕ್ರೋಶ ಯಾತ್ರೆಯಿಂದ ಎಚ್ಚೆತ್ತುಕೊಂಡು ರಾಜ್ಯ ಪ್ರವಾಸ ಮಾಡುತ್ತಿದ್ದಾರೆ' ಎಂದರು.

'ರಾಜ್ಯದ ಹಿಂದುಳಿದ ವರ್ಗ ಹಾಗೂ ಶೋಷಿತ ಸಮುದಾಯಗಳಿಗೆ ನ್ಯಾಯ ಸಿಗಬೇಕು ಎಂಬುದು ಬಿಜೆಪಿ ನಿಲುವು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಾಮಾಣಿಕತೆ, ಸಾಮಾಜಿಕ ಕಾಳಜಿ ಇಲ್ಲ. ಮುಖ್ಯಮಂತ್ರಿ ಕುರ್ಚಿ ಅಲುಗಾಡುತ್ತಿದ್ದಾಗ ಜಾತಿ ಜನಗಣತಿ ವರದಿಯ ಚರ್ಚೆಯನ್ನು ಮುನ್ನೆಲೆಗೆ ತರುತ್ತಾರೆ. ಅವರಿಗೆ ವರದಿ ಅನುಷ್ಠಾನಗೊಳಿಸುವ ಇಚ್ಛಾಶಕ್ತಿ ಇಲ್ಲ' -ಬಿ.ವೈ.ವಿಜಯೇಂದ್ರ

## ಮಿನಿ ನ್ಯೂಸ್

### 2 ಬೈಕ್‌ಗಳು ಮುಖಾಮುಖಿ ಡಿಕ್ಕಿ ಡಿಲಿವರಿ ಬಾಯ್ ಸ್ಥಳದಲ್ಲೇ ಸಾವು

• ಉದಯವಾಹಿನಿ ಹಾಸನ

ಎರಡು ದ್ವಿಚಕ್ರ ವಾಹನಗಳು ಮುಖಾಮುಖಿ ಡಿಕ್ಕಿಯಾಗಿ ಫುಡ್ ಡಿಲಿವರಿ ಬಾಯ್ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಗರದ ಹೊರವಲಯದ ಭುವನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ನಲ್ಲಿ ನಡೆದಿದೆ.

ನಗರದ ಎಸ್‌ಬಿಎಂ ಲೇಔಟ್‌ನ ಶರಾವತಿ ಬಡಾವಣೆಯ ನಿವಾಸಿ ಶರತ್ (40) ಮೃತಪಟ್ಟ ವ್ಯಕ್ತಿ. ರಾತ್ರಿ 11 ಗಂಟೆ ಸುಮಾರಿನಲ್ಲಿ ಫುಡ್ ಡಿಲಿವರಿ ಮಾಡಲು ನಗರ ಕಡೆಯಿಂದ ಬಂದು ಗೆಂಡೆಗಟ್ಟೆಗೆ ಹೋಗುವ ರಸ್ತೆ ಬಳಿ ತಿರುವು ತೆಗೆದುಕೊಳ್ಳುತ್ತಿದ್ದಾಗ ಬೆಂಗಳೂರು ಕಡೆಯಿಂದ ಬ ಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದು ಈ ಅವಘಡ ಸಂಭವಿಸಿದೆ. ಕೆಳಗೆ ಬಿದ್ದ ಶರತ್‌ಗೆ ಗಂಭೀರವಾದ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮತ್ತೊಂದು ಬೈಕ್ ಸವಾರನಿಗೆ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಆಟೊ ಚಾಲಕನ ಮೇಲೆ ಹಲ್ಲೆ: ಗಂಭೀರ ಗಾಯ

• ಉದಯವಾಹಿನಿ ಬೆಳಗಾವಿ

ತನ್ನ ಪತ್ನಿಯ ವಾಟ್ಸ್ ಆ್ಯಪ್‌ಗೆ ಮೆಸೇಜ್ ಮಾಡಿದ್ದನ್ನು ಪ್ರಶ್ನಿಸಿದ ಆಟೊ ಚಾಲಕರೊಬ್ಬರ ಮೇಲೆ ಯುವಕರ ಗುಂಪು, ಇಲ್ಲಿನ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ತೀವ್ರ ಹಲ್ಲೆ ಮಾಡಿದೆ. ಗಾಯಗೊಂಡ ಚಾಲಕ ಜಿಲ್ಲಾಸ್ಪತ್ರೆ ಸೇರಿದ್ದಾರೆ. ವಾಸೀಮ್ ಬೇಪಾರಿಗೆ ಗಂಭೀರವಾಗಿ ಗಾಯಗೊಂಡಿದ್ದಾರೆ.

ವೀರಭದ್ರೇಶ್ವರ ನಗರದ ಯುವಕ ತನ್ನ ಪತ್ನಿಗೆ ಪದೇಪದೇ ವಾಟ್ಸ್ ಆ್ಯಪ್‌ನಲ್ಲಿ ಮೆಸೇಜ್ ಮಾಡಿದ್ದ. ವಾರದ ಹಿಂದೆಯೇ ಮೆಸೇಜ್ ಮಾಡುತ್ತಿದ್ದ ಯುವಕನನ್ನು ಚಾಲಕ ಪ್ರಶ್ನೆ ಮಾಡಿದ್ದರು. ಇದೇ ಸಿಟ್ಟು ಇಟ್ಟುಕೊಂಡು 20 ಸ್ನೇಹಿತರೊಂದಿಗೆ ಬಂದ ಯುವಕ ಹಲ್ಲೆ ಮಾಡಿದ್ದಾನೆ ಎನ್ನಲಾಗಿದೆ. ಇಲ್ಲಿನ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಆಟೊ ಚಾಲಕ ಚಹಾ ಕುಡಿಯುತ್ತಿದ್ದ ವೇಳೆ, ಮಾತನಾಡಲು ಬರುವಂತೆ ಯುವಕರು ಕರೆದಿದ್ದರು. ಏಕಾಏಕಿ ಜಂಬೆ ಹಾಗೂ ಬಡಿಗೆಯಿಂದ ಹೊಡೆದರು. ಬಳಿಕ ಇಬ್ಬರೇ ಆರೋಪಿಗಳು ಖುದ್ದಾಗಿ ಮಾರ್ಕೆಟ್ ಠಾಣೆಗೆ ಹೋಗಿ ಶರಣಾಗಿದ್ದಾರೆ ಎಂದು ವಾಸೀಮ್ ಅವರ ಸಹೋದರ ಸಲೀಮ್ ಮಾಧ್ಯಮಗಳ ಮುಂದೆ ಮಾಹಿತಿ ನೀಡಿದರು.

### ಬಾಲಕಿ ಮೇಲೆ ಅತ್ಯಾಚಾರ ಯತ್ನ: ಬಂಧನ

• ಉದಯವಾಹಿನಿ ಅಥಣಿ

ತಾಲ್ಲೂಕಿನ ಗ್ರಾಮವೊಂದರಲ್ಲಿ 13 ವರ್ಷದ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಮಾಡಲು ಯತ್ನಿಸಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿ ಮೇಲೆ ಪೋಕ್ಸೋ ಪ್ರಕರಣ ದಾಖಲಿಸಲಾಗಿದೆ. ಮಹಾಂತೇಶ ಹನುಮಂತ ಹಿಪ್ಪರಗಿ ಬಂಧಿತ. ಬೆಳಿಗ್ಗೆ ತೋಟದ ವಸತಿಯ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಆರೋಪಿ ಬಾಲಕಿ ಮೇಲೆ ಅತ್ಯಾಚಾರ ಎಸಗಲು ಪ್ರಯತ್ನಿಸಿದ್ದ. ಬಾಲಕಿ ಜೋರಾಗಿ ಚೀರಾಡಿ, ಮನೆಯಿಂದ ಹೊರ ಓಡಿ ಬಂದಿದ್ದಾಳೆ. ಸಹಯಕ್ಕಾಗಿ ಧಾವಿಸಿದ ಸ್ಥಳೀಯ ಜನ ಮಹಾಂತೇಶನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಐಗಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಾರದ ಬಸ್: ವಿದ್ಯಾರ್ಥಿಗಳ ಪರದಾಟ

• ಉದಯವಾಹಿನಿ ಯಮಕನಮರಡಿ

ಸ್ಥಳೀಯ ಹತ್ತರಗಿ ಬಸ್ ನಿಲ್ದಾಣಕ್ಕೆ ಸಂಕೇಶ್ವರದ ಹಾಗೂ ಬೆಳಗಾವಿ ಕಡೆಯಿಂದ ಬರುವ ಎಲ್ಲಾ ಬಸ್‌ಗಳು ಬಸ್ ನಿಲ್ದಾಣದ ಒಳಗೆ ಬಾರದ ಕಾರಣ ಪ್ರಯಾಣಿಕರು, ವಿದ್ಯಾರ್ಥಿಗಳು ರಾಷ್ಟ್ರೀಯ ಹೆದ್ದಾರಿ 4ರ ಲೋಕಲ್ ರಸ್ತೆ ಮೇಲೆ ನಿಂತು ಬಸ್‌ಗಾಗಿ ನಿತ್ಯ ತೊಂದರೆ ಅನುಭವಿಸುವತ್ತಿದ್ದಾರೆ ಎಂದು ಆನಂದಪೂರ, ಹತ್ತರಗಿ ಪ್ರಯಾಣಿಕರು ಆರೋಪಿಸಿದ್ದಾರೆ. ನಿಲ್ದಾಣದಲ್ಲಿ ಬಸ್ ನಿಲುಗಡೆಗೆ ವ್ಯವಸ್ಥೆ ಇದ್ದರೂ 500 ಮೀ. ಮುಂದೆ ಹೋಗಿ ಚಾಲಕ ಬಸ್ ನಿಲುಗಡೆ ಮಾಡುತ್ತಾರೆ. ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಓಡಿ ಹೋಗಿ ಬಸ್ ಹತ್ತಬೇಕು. ಅಷ್ಟರಲ್ಲಿ ಬಸ್ ಹೊರಟು ಹೋಗುತ್ತದೆ. ಈ ಪರಿಸ್ಥಿತಿ ನಿತ್ಯವೂ ಇದೆ. ವಿದ್ಯಾರ್ಥಿಗಳ ಪರೀಕ್ಷೆ ಸಮಯದಲ್ಲಿ ಸರಿಯಾಗಿ ಶಾಲಾ ಕಾಲೇಜುಗಳಿಗೆ ತಲುಪಲು ಸಾಧ್ಯವಾಗುತ್ತಿಲ್ಲ. ಬೆಳಿಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಬಸ್ ಸೌಲಭ್ಯ ಅವಶ್ಯಕತೆ ಇದೆ. ಆದ್ದರಿಂದ ಅಧಿಕಾರಿಗಳು ಬಸ್‌ಗಳನ್ನು ನಿಲ್ದಾಣ ಒಳಗೆ ಮತ್ತು ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

## ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪ: ಮೂವರ ವಿರುದ್ಧ ಪ್ರಕರಣ

• ಉದಯವಾಹಿನಿ ಮಂಗಳೂರು

ಕೇಂದ್ರ ಸರಕಾರದ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಎ.18ರಂದು ಕರ್ನಾಟಕ ಉಲಮಾ ಒಕ್ಕೂಟದ ನೇತೃತ್ವದಲ್ಲಿ ಅಡ್ಯಾರ್ ಕಣ್ಣೂರಿನ ಶಾ ಗಾರ್ಡನ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಯ ವೇಳೆ ರಾಷ್ಟ್ರೀಯ ಹೆದ್ದಾರಿ 73ರಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಅಡ್ಡಿ ಪಡಿಸಿದರೆಂಬ ಆರೋಪದಲ್ಲಿ ಮೂವರ ವಿರುದ್ಧ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣಾಪುರದ ಜಲೀಲ್, ವಳಚ್ಚಿಲ್‌ನ ಫಝುಲ್ ಮತ್ತು ಮೊಹಮ್ಮದ್ ಹನೀಫ್ ನೌಫಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನೇರ ವೀಕ್ಷಣೆ ಹಾಗೂ ಆರಂಭಿಕ ವೀಡಿಯೊ ವಿಶ್ಲೇಷಣೆಯ ಆಧಾರದ ಮೇಲೆ ಕರ್ತವ್ಯಕ್ಕೆ ನಿಯೋಜಿಸಲಾದ ಪೊಲೀಸರು ನೀಡಿರುವ ದೂರಿನಂತೆ ಮೂವರ ವಿರುದ್ಧ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಘಟನೆಯಲ್ಲಿ ಭಾಗಿಯಾದ ಎಲ್ಲರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ವಿಡಿಯೋ ದೃಶ್ಯಗಳ ವಿವರವಾದ ವಿಶ್ಲೇಷಣೆಯ ಆಧಾರದ ಮೇಲೆ ಇತರ ಆರೋಪಿಗಳನ್ನು ಗುರುತಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ನಗರ ಪೊಲೀಸ್ ಆಯುಕ್ತರ ಪ್ರಕಟನೆ ತಿಳಿಸಿದೆ.


ಉದಯವಾಹಿನಿ ಚಿತ್ರ

ಇನ್ನು ಪ್ರತಿಭಟನಾಕಾರರ ಗುಂಪೊಂದು ಉದ್ದೇಶಪೂರ್ವಕವಾಗಿ ರಾಷ್ಟ್ರೀಯ ಹೆದ್ದಾರಿ 73ರ ಬದಿಯಲ್ಲಿ ಮತ್ತು ಮಧ್ಯದಲ್ಲಿ ಜಮಾಯಿಸಿ, ವಾಹನಗಳ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಿತು. ಪ್ರತಿಭಟನಾಕಾರರಲ್ಲಿ ವಾಹನಗಳ ಸಂಚಾರಕ್ಕೆ ಮುಕ್ತ ಅವಕಾಶ ನೀಡುವಂತೆ ಪೊಲೀಸರು ಪದೇ ಪದೇ ಮನವಿ ಮಾಡಿದ್ದರೂ, ಪದೇ ಪದೇ ಸೂಚನೆಗಳನ್ನು ನೀಡಿದ್ದರೂ, ಕೆಲವು ಪ್ರತಿಭಟನಾಕಾರರು ಸಂಚಾರಕ್ಕೆ ಅಡ್ಡಿಪಡಿಸುವ, ತುರ್ತು ಸೇವೆಗಳಿಗೆ ಅಡ್ಡಿಪಡಿಸುವ ಮತ್ತು ಸಾರ್ವಜನಿಕ ಸೇವಕರು ಅಧಿಕೃತ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಹಸ್ತಕ್ಷೇಪ ನಡೆಸಿದ್ದಾರೆಂದು ಆರೋಪಿಸಲಾಗಿದೆ.

## ರಸ್ತೆ ಅಪಘಾತ: ಪತ್ರಕರ್ತ ಸಂದೀಪ್ ಪೂಜಾರಿ ನಿಧನ

• ಉದಯವಾಹಿನಿ ಉಡುಪಿ



ಅಪಘಾತದಲ್ಲಿ ಗಾಯಗೊಂಡಿದ್ದ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯ ಹಾಗೂ ಈಟಿವಿ ಭಾರತ್ ಉಡುಪಿ ಜಿಲ್ಲಾ ವರದಿಗಾರ ಸಂದೀಪ್ ಪೂಜಾರಿ (37) ಅವರು ಇಂದು ಬೆಳಗ್ಗೆ ಸಾವನ್ನಪ್ಪಿದ್ದಾರೆ.ಸಕಲೇಶಪುರ ಸಮೀಪದ ಬಾಳ್ಳುಪೇಟೆ ಎಂಬಲ್ಲಿ ಮಾ.29ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಸಂದೀಪ್ ಪೂಜಾರಿ ಗಂಭೀರವಾಗಿ ಗಾಯಗೊಂಡು ಮಣಿಪಾಲದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ಅಪಘಾತದಲ್ಲಿ ಸಂದೀಪ್ ಅವರ ಬೆನ್ನು ಹುರಿ (ಸ್ಪೈನಲ್ ಕಾಡ್)ಗೆ ತೀವ್ರ ಪೆಟ್ಟಾಗಿದ್ದು, ಇದೀಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕಾಪು ತಾಲ್ಲೂಕಿನ ಶಿರ್ವ ನಿವಾಸಿಯಾಗಿರುವ ಸಂದೀಪ್ ಅವರು, ಮಾಧ್ಯಮ ಕ್ಷೇತ್ರದಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರು ತಂದೆ ತಾಯಿ ಸಹೋದರ ಹಾಗೂ ಸಹೋದರಿಯನ್ನು ಅಗಲಿದ್ದಾರೆ. ನಿಧನಕ್ಕೆ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ.

## ಅಂಗನವಾಡಿಗೆ ಕೊಳೆತ ಮೊಟ್ಟೆಗಳ ಪೂರೈಕೆ: ಆಕ್ರೋಶ

• ಉದಯವಾಹಿನಿ ಚಿತ್ತಾಪುರ

ಅಂಗನವಾಡಿ ಕೇಂದ್ರಕ್ಕೆ ಕೊಳೆತ ಮೊಟ್ಟೆಗಳ ಪೂರೈಕೆ ಮಾಡುತ್ತಿರುವುದರಿಂದ ಮಕ್ಕಳ ಪೌಷ್ಟಿಕತೆ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಕರವೇ ಗ್ರಾಮ ಘಟಕದ ಅಧ್ಯಕ್ಷ ದೇವಿಂದ್ರಪ್ಪಾ ಮಾಟ್ನಳ್ಳಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರದಿಂದ ಶಾಲಾಪೂರ್ವ ಶಿಕ್ಷಣ ಪಡೆಯುತ್ತಿರುವ ಅಂಗನವಾಡಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಅಪೌಷ್ಟಿಕಾಂಶ ಕೊರತೆ ನೀಗಿಸಿ ಪೌಷ್ಟಿಕತೆ ಹೆಚ್ಚಿಸುವ ನಿಟ್ಟಿನಲ್ಲಿ ಮೊಟ್ಟೆ ವಿತರಣೆ ಮಾಡಲಾಗುತ್ತಿದ್ದು ಮೊಟ್ಟೆ ಪೂರೈಕೆ ಮಾಡುವ ಗುತ್ತಿಗೆದಾರರು ಕೊಳೆತ ಮೊಟ್ಟೆಗಳನ್ನು ಪೂರೈಕೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನ ಯಾಗಾಪೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ಪೂರೈಕೆ ಮಾಡಲಾಗಿದ್ದು ಪೂರೈಕೆ ಮಾಡಿದ ಬಹುತೇಕ ಮೊಟ್ಟೆಗಳು ಒಡೆದ ಮತ್ತು ಕೊಳೆತ ಮೊಟ್ಟೆಗಳನ್ನು ಪೂರೈಕೆ ಮಾಡಿದ್ದಾರೆ. ಕೊಳೆತ ಮೊಟ್ಟೆಗಳ ಪೂರೈಕೆಯ ಬಗ್ಗೆ ಪ್ರಶ್ನಿಸಿದರೆ ಪೂರೈಕೆ ಮಾಡುವ ಗುತ್ತಿಗೆದಾರರು ಬೇಜವಾಬ್ದಾರಿ ಉತ್ತರ ನೀಡುತ್ತಿದ್ದಾರೆ ಎಂದು ಕರವೇ ಯಾಗಾಪೂರ ಗ್ರಾಮ ಘಟಕದ ಅಧ್ಯಕ್ಷ ದೇವಿಂದ್ರಪ್ಪಾ ಮಾಟ್ನಳ್ಳಿ ಅವರು ಆರೋಪಿಸಿದ್ದಾರೆ.ಈ ಕುರಿತು ಅಂಗನವಾಡಿಯ ಮೇಲ್ವಿಚಾರಕರಿಗೆ ತಿಳಿಸಿದರೆ ನಾವೇನು ಮಾಡುವುದು ಮೊಟ್ಟೆ ಪೂರೈಕೆ ಮಾಡುವವರಿಗೆ ನೀವೇ ಕೇಳಿ ಎಂಬ ಹಾರೈಕೆ ಉತ್ತರ ನೀಡಿದ್ದು ಮೊಟ್ಟೆ ಪೂರೈಕೆ ಮಾಡುವವರ ಸನ್ನದ್ದು ರದ್ದು ಮಾಡಬೇಕು ಮತ್ತು ಅಂಗನವಾಡಿ ಮೇಲ್ವಿಚಾರಕರ ಮೇಲೆ ಮೇಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

## ದಾಂಪತ್ಯ ಜೀವನಕ್ಕೆ ಕಾಲಿಟ್ಟ ಆರು ಜೋಡಿ

• ಉದಯವಾಹಿನಿ ರಟ್ಟಿಹಳ್ಳಿ

ಸಂಸಾರ ಅಂದರೆ ಸುಖ-ದುಃಖಗಳ ಸಮ್ಮಿಲನ, ಸುಖವೇ ಬರಲಿ, ದುಃಖವೇ ಪ್ರಾಪ್ತವಾಗಲಿ ಸತಿ-ಪತಿಗಳು ಒಂದಾಗಿ ಜೀವನ ಸಾಗಿಸಬೇಕು.

ಇಬ್ಬರೂ ರಥದ ಎರಡು ಗಾಲಿಗಳಂತೆ ಜೀವನ ಚಕ್ರ ನಡೆಸಬೇಕು' ಎಂದು ಆನಂದಪುರ ಬೆಕ್ಕಿನಕಲ್ಮಠ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು. ರಟ್ಟಿಹಳ್ಳಿ ಕಬ್ಬಿಣ ಕಂತಿಮಠದಲ್ಲಿ ಕಳೆದ ಎರಡು ದಿನಗಳಿಂದ ಜರುಗುತ್ತಿರುವ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಷಷ್ಠ್ಯಬ್ದಿ ಸಮಾರಂಭ ಹಾಗೂ ಜಯಸಿದ್ದಲಿಂಗ ಸ್ವಾಮೀಜಿ ಪುಣ್ಯಾರಾಧನೆ ಹಾಗೂ ಸರಳ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಸೋಮವಾರ ಮಾತನಾಡಿದರು. ರಟ್ಟಿಹಳ್ಳಿ ಕಬ್ಬಿಣಕಂತಿಮಠದ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಸಮಾಜದ ಒಂದು ಜಾತಿಗೆ ಸೀಮಿತರಾದವರಲ್ಲ, ಎಲ್ಲರ ಸುಖ, ದುಃಖ, ಕಷ್ಟಗಳಲ್ಲಿ ಪಾಲ್ಗೊಂಡು ಸಮಾಜಕ್ಕೆ ಉತ್ತಮ ಸಂದೇಶ ನೀಡುವವರಾಗಿದ್ದಾರೆ' ಎಂದರು.

ಆರು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ನೂತನ ವಟುಗಳಿಗೆ ಶಿವದೀಕ್ಷೆ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ನೆರದಿದ್ದ ಸಮಸ್ತ ಮಹಿಳೆಯರಿಗೆ ಮಠದಿಂದ ಬಾಗೀನ ಸಮರ್ಪಣೆ ಮಾಡಲಾಯಿತು.


ಉದಯವಾಹಿನಿ ಚಿತ್ರ

## ಅಧಿಕ ತಾಪಮಾನ: ಆರೋಗ್ಯ ಕಾಪಾಡಿಕೊಳ್ಳಲು ಸಲಹೆ

• ಉದಯವಾಹಿನಿ ರಾಂಪುರ

ಬಿಸಿಲಿನ ತಾಪ ಅಧಿಕವಾಗುತ್ತಿದ್ದು, ಕೂಲಿ ಕಾರ್ಮಿಕರು ತಾಪಮಾನಕ್ಕೆ ಹೈರಾಣಾಗದೇ ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದು ಬೇವೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಗಿರೀಶ ನಾಯಕ ಹೇಳಿದರು.

ಸಮೀಪದ ಬೇವೂರ ಗ್ರಾಮದಲ್ಲಿ ನರೇಗಾ ಕೂಲಿ ಕಾರ್ಮಿಕರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಮ ಪಂಚಾಯತಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಿ ಮಾತನಾಡಿದರು. ಪ್ರತಿ ವ್ಯಕ್ತಿಗೂ ಆರೋಗ್ಯ ಮುಖ್ಯವಾಗಿದ್ದು, ಬಿಸಿಲಿನ ಸಮಯದಲ್ಲಿ ಅನುಸರಿಸಬೇಕಾದ ಆರೋಗ್ಯ ಕ್ರಮಗಳನ್ನು ಪಾಲಿಸಬೇಕು' ಎಂದರು.


ಉದಯವಾಹಿನಿ ಚಿತ್ರ

ಬಿಸಿಲಿಗೆ ನಿರ್ಜಲೀಕರಣವಾಗುವುದು ಸಹಜ. ಮುಂಜಾಗ್ರತೆಗೆ ಪ್ರತಿ 20 ನಿಮಿಷಕ್ಕೊಮ್ಮೆ ಶುದ್ಧ ಕುಡಿಯುವ ನೀರು ಬಳಸಬೇಕು.

ಶಿಬಿರದಲ್ಲಿ ನೂರಾರು ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಲಾಯಿತು. ಮಧುಮೇಹ ಮತ್ತು ರಕ್ತದೊತ್ತಡ ಪರೀಕ್ಷೆ ನಡೆಸಲಾಯಿತು.

ಅಧ್ಯಕ್ಷೆ ಫರೀದಾ ಗುರಗುನ್ನಿ, ಗ್ರಾಮ ಪಂಚಾಯಿತಿ ಪಿಡಿಒ ಭೀಮಪ್ಪ ಇಟಗಿ, ಶರಣಪ್ಪ ಮಾಗನೂರ, ಚಿದಾನಂದ ಹೊಸಮನಿ, ಗ್ಯಾನಪ್ಪ ಬಾಲನಾಯಕ, ಬಸವರಾಜ ಭಗವತಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಇದ್ದರು.

ಬಾಯಾರಿಕೆ ಆಗದಂತೆ ನೋಡಿ ಕೊಂಡು, ಆಗಾಗ ಓ.ಆರ್.ಎಸ್ ಬಳಸುವುದು ಸೂಕ್ತ. ಬೆಳಿಗ್ಗೆ 11 ಗಂಟೆ ನಂತರ ಕೆಲಸ ಮಾಡುವುದು ಆರೋಗ್ಯದ ದೃಷ್ಟಿಯಿಂದ ಸೂಕ್ತವಲ್ಲ' ಎಂದು ಹೇಳಿದರು. ಕೂಲಿ ಕಾರ್ಮಿಕರಿಗೆ ದಣಿವು ನಿವಾರಿಸಿಕೊಳ್ಳಲು ವಿಶ್ರಾಂತಿಗೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಇದರ ಪ್ರಯೋಜನ ಪಡೆದು ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದು ತಿಳಿಸಿದರು.
-ಡಾ.ಗಿರೀಶ ನಾಯಕ

## ಜೆಜೆಎಂ ಕಾಮಗಾರಿ ಕಳಪೆ: ಆರೋಪ

### ಬಾದಾಮಿ, ಗುಳೇದಗುಡ್ಡ ತಾಲ್ಲೂಕಿನ 154 ಗ್ರಾಮಗಳಲ್ಲಿ ಯೋಜನೆ ಪೂರ್ಣ

• ಉದಯವಾಹಿನಿ ಬಾದಾಮಿ

ಬಾದಾಮಿ ಮತ್ತು ಗುಳೇದಗುಡ್ಡ ತಾಲ್ಲೂಕಿನ ಒಟ್ಟು 161 ಗ್ರಾಮಗಳ ಪೈಕಿ 154 ಗ್ರಾಮಗಳಿಗೆ ಜಲಜೀವನ್ ಮಿಷನ್ (24ಥ7) ಯೋಜನೆಯಡಿ ಕಾಮಗಾರಿ ಮುಗಿದಿದ್ದು, 5 ಗ್ರಾಮಗಳಲ್ಲಿ ಕಾಮಗಾರಿ ನಡೆದಿದೆ. ಎರಡು ಗ್ರಾಮಗಳಿಗೆ ಈ ಯೋಜನೆ ಕೈಬಿಡಲಾಗಿದೆ. ಆದರೆ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಜೆಜೆಎಂ ಕಾಮಗಾರಿ ಕಳಪೆಯಾಗಿದ್ದು, ಕೆಲವು ಗ್ರಾಮಗಳಲ್ಲಿ ಕೊಳವೆ ಸರಿಯಾಗಿ ಜೋಡಿಸಿಲ್ಲ. ನೀರು ಸರಿಯಾಗಿ ಬರುತ್ತಿಲ್ಲ. ಹಳೆಯ ನಳಗಳಿಂದ ನೀರು ಪೂರೈಕೆಯಾಗುತ್ತಿದೆ ಎಂಬುದು ಪಟ್ಟದಕಲ್ಲು, ನಂದಿಕೇಶ್ವರ, ಬಾಚಿನಗುಡ್ಡ, ಬಿ.ಎನ್. ಜಾಲಿಹಾಳ ಗ್ರಾಮಸ್ಥ ಆರೋಪ.

ಬೇಲೂರ ಗ್ರಾಮದ ಹೊರವಲಯದ ರಸ್ತೆಯಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಪುನಶ್ಚೇತನ ಕಾಮಗಾರಿಯಲ್ಲಿ ಕೇಂದ್ರದ ಹರ್ ಘರ್ ಜಲ ಯೋಜನೆಯ ಜೆಜೆಎಂ ಅನುದಾನದಲ್ಲಿ 2.14 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಈ ಯೋಜನೆಯಿಂದ ಬೇಲೂರು ಸೇರಿದಂತೆ ಸುತ್ತಲಿನ ಜಾಲಿಜಾಳ, ಚಿಕ್ಕನಸಬಿ, ಹಿರೇನಸಬಿ, ಢಾಣಕಶಿರೂರ, ಮಣ್ಣೇರಿ, ಗಿಡ್ಡನಾಯಕನಹಾಳ, ಹೊಸೂರ ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ' ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆರ್.ಎಸ್. ಬಂಡಿ ಹೇಳಿದರು.


ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ನೀರಲಕೇರಿ ಮತ್ತು ಗಂಗನಬೂದಿಹಾಳ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಿದ್ದು, ರೈತರ ಖಾಸಗಿ ಕೊಳವೆ ಬಾವಿಗಳಿಂದ ನೀರು ಪೂರೈಸಲಾಗುತ್ತಿದೆ. ಗಿಡ್ಡನಾಯಕನಾಳ ಗ್ರಾಮದಲ್ಲಿ ನೀರಿನ ಕೊರತೆ ಬಗ್ಗೆ ಗುರುತಿಸಲಾಗಿದೆ. ಖಾಸಗಿಯವರಿಂದ ನೀರು ಪಡೆದು ಪೂರೈಸಲಾಗುವುದು ಎಂದು ತಿಳಿಸಿದರು.

'ಬೇಲೂರ ಗ್ರಾಮದ ಕಲ್ಮಠ ಏರಿಯಾದಲ್ಲಿ ಜೆಜೆಎಂ ನೀರು ಬರುತ್ತಿಲ್ಲ. ನೀರಿನ ವಾಲ್ ಚಾಲೂ ಮಾಡುವುದಿಲ್ಲ. ನಾವು ಬೇರೆ ಕಡೆಯಿಂದ ಹೊತ್ತು ತರುತ್ತೇವೆ' ಎಂದು ಶಾಂತಪ್ಪ ಕವಲಗಿ ಹೇಳಿದರು.

ಗ್ರಾಮೀಣ ಪ್ರದೇಶದಲ್ಲಿ 150 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಅದರಲ್ಲಿ 39ಕ್ಕೂ ಅಧಿಕ ಘಟಕಗಳು ಅನುಪಯುಕ್ತವಾಗಿವೆ. ದುರಸ್ತಿಗಾಗಿ ವಿಶೇಷ ಅನುದಾನದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಕಳಿಸಲಾಗಿದೆ. ಅನುದಾನ ಬಂದ ನಂತರ ದುರಸ್ತಿ ಕೈಗೊಳ್ಳಲಾಗುವುದು -ಆರ್.ಎಸ್. ಬಂಡಿ

## ಯತ್ನಾಳ ವಿರುದ್ಧ ಮುಸ್ಲಿಂ ಸಮುದಾಯ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಶಿರಹಟ್ಟಿ

ಪ್ರವಾದಿ ಮಹಮ್ಮದ್ ಪೈಗಂಬರ್ ವಿರುದ್ಧ ಅವ ಹೇಳನಕಾರಿ ಮಾತುಗಳನ್ನಾಡಿದ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಸ್ಥಳೀಯ ಅಹಲೆ ಉನ್ನತ ಉಲ್ ಜಮಾತ್ ಜಾಮಿಯಾ ಮಸ್ಜಿದ್ ಹಾಗೂ ವಿವಿಧ ಮುಸ್ಲಿಂ ಸಂಘಟನೆಗಳ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅನಿಲ ಬಡಿಗೇರ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಸಮುದಾಯದ ಮುಖಂಡ ಹುಮಾಯೂನ್ ಮಾಗಡಿ ಮಾತನಾಡಿ, ಭಾಷಣ ಮಾಡುವ ಭರದಲ್ಲಿ ಯತ್ನಾಳ್ ಅವರು ಪ್ರವಾದಿ ಮಹಮ್ಮದ್ ಪೈಗಂಬರ್ ಬಗ್ಗೆ ಕೀಳು ಮನೋಭಾವದಿಂದ ಮಾತನಾಡಿದ್ದು, ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿದೆ. ಕೋಮು ಸೌಹಾರ್ದದ ನೆಲೆವೀಡಾದ ರಾಜ್ಯದಲ್ಲಿ ಯತ್ನಾಳ ಅವರ ಹೇಳಿಕೆ ಧಾರ್ಮಿಕ ಪ್ರಚೋದನಕಾರಿಯಾಗಿದೆ ಎಂದು ದೂರಿದರು.

ಒಬ್ಬ ಜನಪ್ರತಿನಿಧಿಯಾಗಿ ಶಾಸಕ ಸ್ಥಾನಕ್ಕೆ ಅಗೌರವ ತರುವಂಥ ಭಾಷಣ ಮಾಡುತ್ತಿರುವ ಯತ್ನಾಳ ಮುಸ್ಲಿಂ ಧಾರ್ಮಿಕ ಭಾವನೆಗಳ ಜೊತೆಗೆ ಆಟವಾಡುತ್ತಿದ್ದಾರೆ. ದ್ವೇಷ ಭಾಷಣದ ಮೂಲಕ ಕಾನೂನು ಸುವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡುತ್ತಿರುವ ಅವರ ವಿರುದ್ಧ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಹಂಪಿಯಲ್ಲಿ ಜನವೋ ಜನ : ಭಾರೀ ಬಿಸಿಲಿನ ತಾಪಕ್ಕೆ ಪ್ರವಾಸಿಗರು ಸುಸ್ತು

● ಪ್ರವಾಸಿಗರಿಗೆ ಬಿಸಿಲಿನ ತಾಪಮಾನ ನೆತ್ತಿ ಸುಡುತ್ತಿದ್ದು ● ಛತ್ರಿ ಇಡಿದು ಸ್ಮಾರಕವನ್ನು ವೀಕ್ಷಣೆ ಮಾಡುತ್ತಿದ್ದಾರೆ

• ಉದಯವಾಹಿನಿ, ಹೊಸಪೇಟೆ

ವಿಶ್ವ ಪಾರಂಪರಿಕ ತಾಣ ಹಂಪಿಗೆ ಸುಡುವ ಬಿಸಲಿನಲ್ಲಿಯೂ ನಿತ್ಯ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಮತ್ತು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ದಕ್ಷಿಣ ಕಾಶಿ ಐತಿಹಾಸಿಕ ಹಂಪಿ ಶ್ರೀವಿರೂಪಾಕ್ಷೇಶ್ವರ ಜಾತ್ರೆ ನಂತರ ಹಾಗೂ ಬೇಸಿಗೆ ರಜೆ ಹಿನ್ನೆಲೆ ಹಂಪಿಗೆ ಆಗಮಿಸುವ ಭಕ್ತರು ಮತ್ತು ಪ್ರವಾಸಿಗರ ಸಂಖ್ಯೆ ದ್ವಿಗುಣವಾಗಿದೆ.

ವಿಶ್ವ ವಿಖ್ಯಾತ ಹಂಪಿಗೆ ಬರುವ ಪ್ರವಾಸಿಗರಿಗೆ ಬಿಸಿಲಿನ ತಾಪಮಾನ ನೆತ್ತಿ ಸುಡುತ್ತಿದ್ದು, ಛತ್ರಿ ಇಡಿದು ಸ್ಮಾರಕವನ್ನು ವೀಕ್ಷಣೆ ಮಾಡುತ್ತಿದ್ದಾರೆ. ಬೇಸಿಗೆ ಹಿನ್ನೆಲೆಯಲ್ಲಿ ಕೆಲ ದಿನಗಳಿಂದ ಹಂಪಿಗೆ ಬರುವ ಪ್ರವಾಸಿಗರ ಸಂಖ್ಯೆ ಗಣನೀಯ ಇಳಿಮುಖವಾಗಿತ್ತು.


ಬೇಸಿಗೆ ರಜೆ ಹಿನ್ನಲೆಯಲ್ಲಿ ಹಂಪಿಯ ಪ್ರಸಿದ್ಧ ಸ್ಮಾರಕಗಳನ್ನು ಕಣ್ತುಂಬಿಕೊಳ್ಳಲು ರಾಜ್ಯ ಸೇರಿದಂತೆ ಆಂಧ್ರ ಮತ್ತು ತೆಲಂಗಾಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಹಂಪಿಗೆ ಆಗಮಿಸುತ್ತಿದ್ದಾರೆ. ಮೇ ನಲ್ಲಿ ಇನ್ನಷ್ಟು ಪ್ರವಾಸಿಗರು ಆಗಮಿಸುವ ನಿರೀಕ್ಷೆ ಇದೆ. ದೇಶ- ವಿದೇಶಗಳಿಂದ ಹಂಪಿಗೆ ಬರುವ ಪ್ರವಾಸಿಗರು ಬಿಸಿಲಿನ ತಾಪಮಾನಕ್ಕೆ ಛತ್ರಿ, ಮೊರೆ ಹೊಗುತ್ತಿದ್ದಾರೆ.

**ಹರಿಗೋಲು ಹತ್ತಿ ವೀಕ್ಷಣೆ:** ಇತ್ತ ರಾಮ ಲಕ್ಷ್ಮಣ ದೇವಸ್ಥಾನ ಬಳಿಯ ಚಕ್ರತೀರ್ಥದ ಬಳಿ ಪ್ರವಾಸಿಗರು ಹರಿಗೋಲು ಹತ್ತಿ ಒಂದು ಸುತ್ತು ಹಾಕಿ ಹಂಪಿಯ ಸುಂದರ ಪರಿಸರವನ್ನು ನೋಡಿ ಫೋಟೊ ಕ್ಲಿಕಿಸಿಕೊಳ್ಳುತ್ತಿರುವ ದೃಶ್ಯ ಕಂಡು ಬಂತು. ಒಬ್ಬರಿಗೆ 500 ರೂಪಾಯಿ ಶುಲ್ಕ ನಿಗದಿ ಮಾಡಿದರೂ ಹಿಂದೆ ಮುಂದೆ ನೋಡದೆ ಪ್ರವಾಸಿಗರು ಕುಟುಂಬ ಸಹಿತ ಹರಿಗೋಲು ಹತ್ತಿ ವೀಕ್ಷಣೆ ಮಾಡುತ್ತಿರುವ ದೃಶ್ಯ ಕಂಡು ಬಂತು. ವಿರೂಪಾಕ್ಷೇಶ್ವರ ದೇವಾಲಯದ ಪಕ್ಕದ ಚಪ್ಪಲಿ ಸ್ಟಾಂಡ್ ಬಳಿ ಹಾಗೂ ವಿಜಯ ವಿಠಲ ದೇವಾಲಯದ ಬಳಿ ಹಾಗೂ ರಾಣಿ ಸ್ನಾನಗೃಹದ ಬಳಿ ಶುದ್ಧ ಕುಡಿಯುವ ನೀರಿನ ಘಟಕಗಳು ಆಗೊಮ್ಮೆ ಈಗೊಮ್ಮೆ ಕಾರ್ಯನಿರ್ವಹಿಸುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ನೀರಿನ ನಿರ್ವಹಣೆ ವ್ಯವಸ್ಥೆ ಮಾಡುತ್ತಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

ಬೇಸಿಗೆ ಇದ್ದರಿಂದ ಕೆಲ ದಿನಗಳಿಂದ ಹಂಪಿಯಲ್ಲಿ ಪ್ರವಾಸಿಗರ ಸುಳಿವು ಇರಲಿಲ್ಲ. ಹಂಪಿ ಜಾತ್ರೆ ನಂತರ ಭಕ್ತರು ಮತ್ತು ಪ್ರವಾಸಿಗರು ಹಂಪಿಗೆ ಬರುತ್ತಿದ್ದು, ಸ್ವಲ್ಪ ಮಟ್ಟಿಗೆ ವ್ಯಾಪಾರ ವಹಿವಾಟು ನಡೆಯುತ್ತಿದೆ ಎನ್ನುತ್ತಾರೆ ರಾಮು, ಹಂಪಿಯ ಪುಸ್ತಕ ಮತ್ತು ಫೋಟೊ ವ್ಯಾಪಾರಿ.

### ಸ್ಮಾರಕಗಳ ದರ್ಶನ

ಕೆಲ ದಿನಗಳಿಂದ ಪ್ರವಾಸಿಗರಿಲ್ಲದೆ ಸ್ಮಾರಕಗಳು ಬಿಕೋ ಎನ್ನುತ್ತಿದ್ದವು. ಬೇಸಿಗೆ ರಜೆ ಹಿನ್ನೆಲೆಯಲ್ಲಿ ಪ್ರವಾಸಿಗರು ಹಂಪಿಯತ್ತ ಮುಖ ಮಾಡಿದ್ದಾರೆ. ಶುಕ್ರವಾರ, ಶನಿವಾರ ಮತ್ತು ಭಾನುವಾರ ಹಂಪಿಗೆ ಭಕ್ತರು ಮತ್ತು ಪ್ರವಾಸಿಗರು ದಂಡು ಹರಿದು ಬಂದಿತ್ತು. ಹಂಪಿ ಶ್ರೀವಿರೂಪಾಕ್ಷೇಶ್ವರ ದೇವಾಲಯ ದರ್ಶನ ಪಡೆದು ನಂತರ ಎದುರು ಬಸವಣ್ಣ, ಸಾಸಿವೆ ಕಾಳು ಗಣಪ, ಕಮಲ್ ಮಹಲ್, ಮಹಾನವಮಿ ದಿಬ್ಬ, ವಿಜಯ ವಿಠಲ ದೇಗುಲ, ರಾಣಿ ಸ್ನಾನಗೃಹ ಸೇರಿದಂತೆ ಸ್ಮಾರಕಗಳನ್ನು ವೀಕ್ಷಣೆ ಮಾಡಿದರು.


ಉದಯವಾಹಿನಿ ಚಿತ್ರ

### ಮೂಲ ಸೌಕರ್ಯ ಒದಗಿಸಲಿ

ವಿಜಯ ವಿಠಲ ದೇವಾಲಯ, ಪುರಂದರ ಮಂಟಪ, ಕೋದಂಡರಾಮಸ್ವಾಮಿ ದೇವಸ್ಥಾನ, ಕಮಲ್ ಮಹಲ್, ಮಹನವಮಿದಿಬ್ಬ, ಎದುರು ಬಸವಣ್ಣ, ಉಗ್ರನರಸಿಂಹ ಸ್ಮಾರಕಗಳ ಬಳಿ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಬೇಕಾಗಿದೆ. ಈ ಜಾಗದಲ್ಲಿ ಬೇಗ ನೀರು ಸಿಗುವುದು ಕಷ್ಟವಾಗಿದೆ ಆದ್ದರಿಂದ ಪ್ರವಾಸಿಗರು ನೀರಿನ ಬಾಟಲಿಯನ್ನು ಕೈಯಲ್ಲಿ ಹಿಡಿದುಕೊಂಡು ಒಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಮಾರಕ ವೀಕ್ಷಣೆಗೆ ಬರುವ ಪ್ರವಾಸಿಗರಿಂದ ಪಡೆಯುವ ಶುಲ್ಕ ವರ್ಷಕ್ಕೆ ಕೋಟಿಗಟ್ಟಲೆ ಆದಾಯ ಪಡೆಯುವ ಇಲಾಖೆಗಳು ಕುಡಿಯವ ನೀರು ಸೇರಿದಂತೆ ಕನಿಷ್ಠ ಮೂಲ ಸೌಕರ್ಯ ಒದಗಿಸಲಿ ಎಂಬುವುದು ಪ್ರವಾಸಿಗರ ಒತ್ತಾಯವಾಗಿದೆ.

### ವ್ಯಾಪಾರ, ವಹಿವಾಟು ಜೋರು

ಬೇಸಿಗೆಯ ಕೆಲ ದಿನಗಳಿಂದ ಹಂಪಿಯಲ್ಲಿ ಪ್ರವಾಸಿಗರು ಇಲ್ಲದೆ ಪ್ರವಾಸಿ ಮಾರ್ಗದರ್ಶಿಗಳಿಗೆ ಹಾಗೂ ಹಂಪಿಯ ಪುಸ್ತಕ ಫೋಟೊ ವ್ಯಾಪಾರಿಗಳು, ಹೋಟೆಲ್, ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ಇರಲಿಲ್ಲ. ಹಂಪಿ ಜಾತ್ರೆ ನಂತರ ಮತ್ತು ಬೇಸಿಗೆ ರಜೆ ಹಿನ್ನೆಲೆಯಲ್ಲಿ ಭಕ್ತರು ಮತ್ತು ಪ್ರವಾಸಿಗರು ಹಂಪಿಯತ್ತ ಬರುತ್ತಿದ್ದು, ವ್ಯಾಪಾರ-ವಹಿವಾಟು ಜೋಧಿರಾಗಿ ನಡೆಯುತ್ತಿದೆ.

- ಬೇಸಿಗೆ ರಜೆ ಹಿನ್ನೆಲೆಯಲ್ಲಿ ಟೂರಿಸ್ಟ್‌ಗಳ ಸಂಖ್ಯೆ ದ್ವಿಗುಣ
- ಬಿಕೋ ಎನ್ನುತ್ತಿದ್ದ ಸ್ಮಾರಕಗಳಿಗೆ ಜೀವಕಳೆ
- ಪ್ರವಾಸಿಗರಿಗೆ ಬಿಸಿಲಿನ ತಾಪಮಾನ ನೆತ್ತಿ ಸುಡುತ್ತಿದ್ದು, ಛತ್ರಿ ಇಡಿದು ಸ್ಮಾರಕವನ್ನು ವೀಕ್ಷಣೆ ಮಾಡುತ್ತಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ.

**ವೃಷಭ** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು – ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

**ಮಿಥುನ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಆರ್ಥಿಕ ಜೀವನದಲ್ಲಿ ಸಂತೋಷ ಉಳಿದಿರುತ್ತದೆ. ಇದರೊಂದಿಗೆ ನೀವು ಇಂದು ಸಾಲಗಳಿಂದ ಮುಕ್ತರಾಗಬಹುದು.

**ಕರ್ಕಾಟಕ** ಇಂದು ನಿಮ್ಮ ಉಚಿತ ಸಮಯ ಮನೆಯನ್ನು ಸ್ವಚ್ಛಗೊಳಿಸುವಲ್ಲಿ ಕಳೆಯಬಹುದು. ಇಂದು ನಿಮ್ಮ ವೈವಾಹಿಕ ಜೀವನದಲ್ಲಿನ ಪರಿಸ್ಥಿತಿಗಳು ನಿಮ್ಮ ನಿಯಂತ್ರಣ ಮೀರಬಹುದು.

**ಸಿಂಹ** ಉತ್ತಮ ಜೀವನಕ್ಕಾಗಿ ನಿಮ್ಮ ಆರೋಗ್ಯ ಮತ್ತು ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಕನ್ಯಾ** ಪ್ರೀತಿಪಾತ್ರರಲ್ಲದೇ ನಿಮ್ಮ ಸಮಯ ಕೊಲ್ಲುವುದು ಕಷ್ಟ. ನೀವು ಯಾವುದೇ ಚಲನಚಿತ್ರವನ್ನು ನೋಡಬಹುದು. ಮತ್ತು ನೀವು ನಿಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿದ್ದೀರಿ ಎಂದು ಬಯಸುವಿರಿ.

**ತುಲಾ** ಮಕ್ಕಳಿಗೆ ಅವರ ಮನೆಗೆಲಸ ಪೂರ್ಣಗೊಳಿಸಲು ಸಹಾಯ ಮಾಡುವ ಸಮಯ. ನಿಮ್ಮ ಪ್ರೇಮಿಯ ಜೊತೆ ಹೊರಹೋದಾಗ ನಿಮ್ಮ ರೂಪ ಮತ್ತು ವರ್ತನೆಯಲ್ಲಿ ನೈಜತೆಯಿರಲಿ.

**ವೃಶ್ಚಿಕ** ಈ ರಾಶಿಚಕ್ರದ ಜನರು ತಮ್ಮ ಸಹೋದರ–ಸಹೋದರಿಯರೊಂದಿಗೆ ಮನೆಯಲ್ಲಿ ಯಾವುದೇ ಚಲನ ಚಿತ್ರ , ಮ್ಯಾಚ್ ನೋಡಬಹುದು. ಇದನ್ನು ಮಾಡುವುದರಿಂದ ನಿಮ್ಮ ನಡುವಿನ ಪ್ರೀತಿಯಲ್ಲಿ ಹೆಚ್ಚಳವಾಗುತ್ತದೆ.

**ಧನಸ್ಸು** ನೀವು ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ – ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ ಮುದ್ದಾಡುವಿಕೆ, ಮುಗ್ಧ ಮುಗುಳ್ನಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು.

**ಮಕರ** ಭಾವನಾತ್ಮಕ ಭರವಸೆಗಳನ್ನು ಬಯಸುವವರು ಹಿರಿಯರು ಅವರ ನೆರವಿಗೆ ಬರುವುದನ್ನು ನೋಡಬಹುದು. ಮದುವೆಯಾಗುವವರು ತಮ್ಮ ಪ್ರೇಮಿ ಸಂತೋಷದ ಮೂಲವೆಂದು ಕಂಡುಕೊಳ್ಳುತ್ತಾರೆ.

**ಕುಂಭ** ಇಂದು ನೀವು ಯಾವುದೇ ಕಾರಣವಿಲ್ಲದೆ ಕೆಲವು ಜನರೊಂದಿಗೆ ಗೊಂದಲ ಮಾಡಬಹುದು. ಹಾಗೆ ಮಾಡುವುದರಿಂದ ನಿಮ್ಮ ಮನಸ್ಥಿತಿ ಹಾಳಾಗುತ್ತದೆ ಮತ್ತು ಅದು ನಿಮ್ಮ ಅಮೂಲ್ಯ ಸಮಯವನ್ನು ಸಹ ವ್ಯರ್ಥ ಮಾಡುತ್ತದೆ.

**ಮೀನ** ನೀವು ನಿಮ್ಮ ಜೀವನದ ತೊಂದರೆಗಳನ್ನು ನಿಮ್ಮ ಸಂಗಾತಿಯೊಂದಿಗೆ ಹಂಚಿಕೊಳ್ಳಲು ಬಯಸುವಿರಿ ಆದರೆ ಅವರು ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡಿ ನಿಮ್ಮನ್ನು ಇನ್ನಷ್ಟು ತೊಂದರೆಗೊಳಿಸಬಹುದು.

### 2026ರ ವೇಳೆಗೆ ಕ್ರಸ್ಟ್ ಗೇಟ್ ಬದಲಿಸಲು ಟಿಬಿ ಮಂಡಳಿ ರೆಡಿ, ಮೇ–ಜೂನ್‌ನೊಳಗೆ ಕಾಮಗಾರಿ ಮುಗಿಸಲು ಒಪ್ಪಂದ

# ಟಿಬಿ ಡ್ಯಾಂನ 33 ಗೇಟ್‌ಗಳೂ ಬದಲಾವಣೆ: 80 ಕೋಟಿ ಟೆಂಡರ್

• **ಉದಯವಾಹಿನಿ ವಿಜಯನಗರ**

ಕರ್ನಾಟಕ–ಆಂಧ್ರ ಪ್ರದೇಶ ರಾಜ್ಯಗಳ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಸೇರಿದಂತೆ ಎಲ್ಲ 33 ಗೇಟ್‌ಗಳನ್ನು ಇದೇ ವರ್ಷದಲ್ಲಿ ಬದಲಿಸಲು ತುಂಗಭದ್ರಾ ಮಂಡಳಿ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ.

ಅಚ್ಚುಕಟ್ಟು ಪ್ರದೇಶದ ರೈತರಿಗೆ ಎರಡು ಬೆಳೆಗಳಿಗೆ ಸಮರ್ಪಕವಾಗಿ ನೀರು ನೀಡಿದ ನಂತರ ಇದೀಗ ಡ್ಯಾಮ್ ಒಡಲು ಖಾಲಿಯಾಗಿದ್ದು, ಪ್ರಸ್ತುತ ಗೇಟ್‌ಗಳ ಬದಲಾವಣೆ ಬಗ್ಗೆ ಚುರುಕಿನ ಕೆಲಸಗಳು ನಡೆಯುತ್ತಿವೆ.

**ಫೀಡ್ ಬ್ಯಾಕ್:** ಕಳೆದ ವರ್ಷ ಆಗಸ್ಟ್ 10 ರಂದು ರಾತ್ರಿ 105.788 ಟಿಎಂಸಿ ಸಂಗ್ರಹ ಸಾಮರ್ಥ್ಯದ ಡ್ಯಾಮ್ ಗರಿಷ್ಠ ಸಂಗ್ರಹ ಮಟ್ಟ ದಾಖಲಾಗಿದ್ದ ದಿನವೇ 19ನೇ ಕ್ರಸ್ಟ್ ಗೇಟ್ ಕೊಚ್ಚಿಕೊಂಡು ಹೋಗಿತ್ತು. ಆ ಬಳಿಕ ಇಡೀ ಜಲಾಶಯದ ಸದೃಢತೆ ಬಗ್ಗೆಯೇ ಅನುಮಾನದ ಮಾತುಗಳು ಕೇಳಿ ಬಂದಿದ್ದವು. ಅದೇ ವಾರದಲ್ಲಿ 19ನೇ ಗೇಟ್‌ಗೆ ತಾತ್ಕಾಲಿಕವಾಗಿ ಸ್ಟಾಪ್ ಲಾಗ್ ಅಳವಡಿಸಿ ನೀರು ಪೋಲಾಗುತ್ತಿರುವುದನ್ನು ತಡೆಯಲಾಗಿತ್ತು. ಆ ನಂತರ ಮತ್ತೆ ಜಲಾಶಯ ಭರ್ತಿಯಾಗಿದ್ದರಿಂದ ಗೇಟ್ ಕಳಚಿ ಬೀಳಲು ಕಾರಣಗಳೇನು ಮತ್ತು ಸದ್ಯ ಡ್ಯಾಮ್ ಸ್ಥಿತಿಗತಿ ಕುರಿತು ತಜ್ಞರ ತಂಡಗಳಿಂದ ಅಧ್ಯಯನ ನಡೆಸಲಾಗಿತ್ತು. ಪ್ರಸ್ತುತ ಗೇಟ್‌ಗಳ ಅಳವಡಿಕೆಗೆ ಕಾರ್ಯ ಚುರುಕು ನಡೆದಿದೆ.



ಉದಯವಾಹಿನಿ ಚಿತ್ರ

**ಕಾಮಗಾರಿ ಮುಗಿಸಲು ಒಪ್ಪಂದ**

**ಟಿಬಿ ಡ್ಯಾಮ್‌ನ 33 ಕ್ರಸ್ಟ್ ಗೇಟ್‌ಗಳ ಪೈಕಿ 19ನೇ ಕ್ರಸ್ಟ್ ಗೇಟ್ ನಿರ್ಮಾಣಕ್ಕೆ ಈಗಾಗಲೇ ಅಹಮದಾಬಾದ್ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಇನ್ನೇನು ಇನ್ನೊಂದು ವಾರದಲ್ಲಿ 1.98 ಕೋಟಿ ರೂ. ಮೊತ್ತದ ಟೆಂಡರ್ ಪಡೆದಿರುವ ಹಾರ್ಡ್ ವೇರ್ ಟೂಲ್ಸ್ ಮಿಷನರಿ ಅಂಡ್ ಪ್ರೊಜೆಕ್ಟ್ ಪ್ರೈವೇಟ್ ಲಿಮಿಟಡ್ ಕಂಪನಿ ನೂತನ ಗೇಟ್ ಅಳವಡಿಕೆಗೆ ಸಂಬಂಧಿಸಿದ ಕೆಲಸಗಳನ್ನು ಶುರು ಮಾಡಲು ಅಗತ್ಯ ಪ್ರಕ್ರಿಯೆ ಆರಂಭಿಸಿದೆ. ಮೇ–ಜೂನ್ ನೊಳಗಾಗಿ ಕಾಮಗಾರಿ ಮುಗಿಸಬೇಕೆಂದು ಒಪ್ಪಂದ ಮಾಡಿಕೊಳ್ಳಲಾಗಿದೆ.**

**ಹೊಸ ಗೇಟ್ ಅಳವಡಿಕೆ ಪ್ರಕ್ರಿಯೆ ಶುರು**

**ಟಿಬಿ ಡ್ಯಾಮ್‌ನ 19ನೇ ಕ್ರಸ್ಟ್ ಗೇಟ್‌ಗೆ ಟೆಂಡರ್ ನೀಡಲಾಗಿದ್ದು, ಇದೀಗ ಉಳಿದ 32 ಗೇಟ್‌ಗಳನ್ನು ಬದಲಿಸಿ ನೂತನ ಗೇಟ್ ಅಳವಡಿಸುವ ಪ್ರಕ್ರಿಯೆ ಆರಂಭವಾಗಿದೆ. ಜಲಾಶಯ ಗೇಟ್ ತಜ್ಞ ಕನ್ನಯ್ಯ ನಾಯ್ಡು ಅವರ ಮಾರ್ಗದರ್ಶನದಲ್ಲಿ ತುಂಗಭದ್ರಾ ಮಂಡಳಿ ಅಧಿಕಾರಿಗಳು 80 ಕೋಟಿ ರೂ.ಗೆ ಟೆಂಡರ್ ಆಹ್ವಾನಿಸಿದ್ದಾರೆ. ಏ.19ರಿಂದ 25ರವರೆಗೆ ಟೆಂಡರ್ ದಾಖಲಿಸಲು ಅವಕಾಶ ನೀಡಲಾಗಿದೆ. ಏ.28ರಂದು ಟೆಂಡರ್ ಓಪನ್ ಮಾಡಿ ಮೇ 2ರಂದು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನೀಡಲಿದ್ದಾರೆ.**

ಉಳಿದ 32 ಗೇಟ್‌ಗಳನ್ನು 2026 ಜೂನ್ ಒಳಗೆ ಬದಲಿಸಲು ಕೆಲಸ ನಡೆದಿದೆ. ಕಳೆದ 70 ವರ್ಷಗಳ ಹಿಂದೆ ನಿರ್ಮಾಣ ಮಾಡಿರುವ 33 ಕ್ರಸ್ಟ್ ಗೇಟ್ ಈಗಾಗಲೇ ಶೇ. 30ರಿಂದ 50 ರಷ್ಟು ಬಲಹೀನಗೊಂಡಿರುವುದು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮೂಲಕ ತಜ್ಞರು ಗುರುತಿಸಿರುವುದು ಈಗಾಗಲೇ ತಿಳಿದಿರುವ ವಿಚಾರ. ಈಗ ಒಟ್ಟಾರೆ ಎಲ್ಲಾ ಗೇಟ್‌ಗಳನ್ನು ಬದಲಿಸಿ ನೂತನ ಅಳವಡಿಕೆ ಕಾಮಗಾರಿಯನ್ನು ಮುಂದಿನ 15 ತಿಂಗಳ ಒಳಗೆ ಮುಗಿಸಲು ಚಿಂತನೆ ನಡೆದಿದೆ ಎಂದು ತುಂಗಭದ್ರಾ ಮಂಡಳಿ ಮೂಲಗಳಿಂದ ತಿಳಿದು ಬಂದಿದೆ.ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಾಮಗಾರಿಗೆ ಈಗಾಗಲೇ ಟೆಂಡರ್ ನೀಡಿದ್ದು, ಉಳಿದ 32 ಕ್ರಸ್ಟ್ ಗೇಟ್‌ನ್ನು ನೂತನವಾಗಿ ಅಳವಡಿಸಲು ಟೆಂಡರ್ ಆಹ್ವಾನಿಸಲಾಗಿದೆ ಎನ್ನುತ್ತಾರೆ ನಾರಾಯಣ ನಾಯ್ಕ್, ಎಸ್‌ಇ, ತುಂಗಭದ್ರಾ ಮಂಡಳಿ.

- **2026ರ ವೇಳೆಗೆ ಕ್ರಸ್ಟ್ ಗೇಟ್ ಬದಲಿಸಲು ಟಿಬಿ ಮಂಡಳಿ ರೆಡಿ**
- **ಮೇ–ಜೂನ್‌ನೊಳಗೆ ಕಾಮಗಾರಿ ಮುಗಿಸಲು ಒಪ್ಪಂದ**
- **ಎಲ್ಲಾ 33 ಗೇಟ್‌ಗಳನ್ನು ಇದೇ ವರ್ಷದಲ್ಲಿ ಬದಲಿಸಲು ತುಂಗಭದ್ರಾ ಮಂಡಳಿ ನಿರ್ಧರಿಸಿದೆ**

## ಚೆಟ್ಟಿನಾಡು ಕಾರ್ಖಾನೆಯು ಕಾನೂನು ನಿಯಮಗಳು ಉಲ್ಲಂಘಿಸಿ ಕಾರ್ಖಾನೆ ಮತ್ತು ಗಣಿಗಾರಿಕೆ ಪ್ರಾರಂಭ: ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣ ಆರೋಪ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಕಲ್ಲೂರ ರೋಡ ಗ್ರಾಮದ ಹತ್ತಿರ ಚೆಟ್ಟಿನಾಡು ಕಾರ್ಖಾನೆ ಪ್ರಾರಂಭವಾಗಿ ಅನೇಕ ವರ್ಷಗಳು ಗತಿಸಿದರೂ ಸರ್ಕಾರದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಕಾರ್ಖಾನೆ ನಡೆಸುತ್ತಿದ್ದಾರೆ ಎಂದು ಯುವ ಕರ್ನಾಟಕ ವೇದಿಕೆ ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣ ಆರೋಪಿಸಿದರು. ಜಿಲ್ಲಾ ಮತ್ತು ತಾಲ್ಲೂಕಾ ಯುವ ಕರ್ನಾಟಕ ವೇದಿಕೆ ಸಂಘಟನೆ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಚೆಟ್ಟಿನಾಡು ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಸಂಬಂಧಪಟ್ಟ ಇಲಾಖೆಯ ಗಣಿಗಾರಿಕೆ ಸಚಿವರಿಗೆ, ಕಾರ್ಮಿಕ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು, ಎ.16ರಂದು ಗಣಾಪೂರ ಗ್ರಾಮದ ಯೂನುಸ್ ಸಾವಿಗೆ ಕಾರ್ಖಾನೆ ವ್ಯವಸ್ಥಾಪಕರು ಗುತ್ತಿಗೆದಾರರ ಲೈಸೆನ್ಸ್ ರದ್ದುಪಡಿಸಿ ಕಾನೂನು ಕ್ರಮ ಕೈಗೊಳ್ಳಬೇಕು,ಮೃತ ಕುಟುಂಬಕ್ಕೆ ಒಂದು ಕೋಟಿ ರೂ.ಕುಟುಂಬದಲ್ಲಿ ಒಬ್ಬರಿಗೆ ಉದ್ಯೋಗ ನೀಡಬೇಕು, ಕಾರ್ಖಾನೆಯಲ್ಲಿ ಇಲ್ಲಿಯವರೆಗೆ ಎರಡು ಸಾವಾಗಿದ್ದು ಇದಕ್ಕೆ ನೇರಕಾರಣ ಕಾರ್ಖಾನೆಯಾಗಿದ್ದು ಕಾರ್ಖಾನೆ ವಿರುದ್ಧ ಕಾನೂನು ತನಿಖೆ ನಡೆಸಬೇಕು,ಎರಡು ಸಾವಿಗೆ ಮರಣೋತ್ತರ ಪರೀಕ್ಷೆ ಮಾಡಲಾಗಿದೆಯೋ ಇಲ್ಲವೋ ಪ್ರಕರಣ ದಾಖಲಾಗಿದೆಯೋ ಇಲ್ಲವೋ ತಿಳಿಸಬೇಕು.

ಕಾರ್ಖಾನೆ ಪ್ರಾರಂಭದಿಂದ ಇಲ್ಲಿಯವರೆಗೆ ಸಿ.ಎಸ್.ಆರ್ ಕಾಯ್ದೆಯಡಿ ಶೇಕಡಾ 2ರಷ್ಟು ಅನುದಾನ ಸುತ್ತಮುತ್ತಲಿನ ಗ್ರಾಮಗಳ ಅಭಿವೃದ್ಧಿಗೆ ಬಳಕೆಯಾಗಬೇಕು ಇಲ್ಲಿಯವರೆಗೆ ಅಭಿವೃದ್ಧಿಪಡಿಸಿದ್ದು ಯಾವ ಯಾವ ಗ್ರಾಮಗಳು ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಯುವ ಕರ್ನಾಟಕ ವೇದಿಕೆ ತಾಲ್ಲೂಕಾಧ್ಯಕ್ಷ ಹೀರಾ ಪವ್ಹಾರ, ಕಾಳಗಿ ಅಧ್ಯಕ್ಷ ಸಚಿನ್ ರಾಠೋಡ್, ಚಂದ್ರಶೇಖರ ನಾಟೀಕಾರ, ಶಂಕರ ಪವ್ಹಾರ, ರಾಹುಲ್ ರಾಠೋಡ್, ಆಕಾಶ ರಾಠೋಡ್, ಸದಾನಂದ ರಾಠೋಡ್, ವಿಕ್ರಂ ಚವ್ಹಾಣ,ಭರತ್ ಚವ್ಹಾಣ ಅನೇಕರಿದ್ದರು.

ಚೆಟ್ಟಿನಾಡು ಕಾರ್ಖಾನೆ ಎದುರು ಪ್ರತಿಭಟನೆ ನಡೆಯುತ್ತಿರುವುದರಿಂದ ಕಾರ್ಖಾನೆ ಒಳಗೆ ಹೋಗುವ ಅನೇಕ ಕೆಂಪುಮಣ್ಣು ಲಾರಿಗಳು ತುಂಬಿಕೊಂಡು ರಾಜ್ಯ ಹೆದ್ದಾರಿಯಲ್ಲಿ ಸಾಲುಗಟ್ಟಿ ನಿಂತಿದ್ದವು.

> **ಕಾರ್ಖಾನೆಯಲ್ಲಿ ಕಾರ್ಮಿಕರ ಸಂಘ ಸ್ಥಾಪನೆಯಿಲ್ಲ,ಕಾರ್ಮಿಕರ ಹಿತದೃಷ್ಟಿಯಿಂದ ಜೀವವಿಮೆ ಮಾಡಿಸಬೇಕು ಯಾಕೆ ಮಾಡಲಿಲ್ಲ,ಚೆಟ್ಟಿನಾಡು ಕಾರ್ಖಾನೆಯಿಂದ ಅರಣ್ಯ ಪ್ರದೇಶದ 10ಕಿಮೀ ದೂರವಿರಬೇಕು ಎಂಬ ಕಾನೂನುವಿದ್ದು ಆದರೆ ಕಾನೂನು ಗಾಳಿಗೆ ತೂರಿ ಅರಣ್ಯ ಪ್ರದೇಶ ಸಮೀಪವೆ ಗಣಿಗಾರಿಕೆ ನಡೆಸುತ್ತಿರುವುದು ಕಾನೂನು ವಿರುದ್ಧವಾಗಿದೆ,ಕಂಪನಿಯಲ್ಲಿ ಸ್ಥಳೀಯ ಕನ್ನಡಿಗರು ಎಷ್ಟು ಹೊರ ರಾಜ್ಯದ ಕಾರ್ಮಿಕರು ಅಧಿಕಾರಿಗಳು ಎಷ್ಟೆಂಬುವುದು ಸಾರ್ವಜನಿಕರಿಗೆ ತಿಳಿಸಬೇಕು,ಕಂಪನಿಗೆ ತೆಗೆದುಕೊಳ್ಳುತ್ತಿರುವ ಕೆಂಪು ಮಣ್ಣು ಹೆಚ್ಚು ಭಾರವುಳ್ಳ ಲಾರಿಗಳು,ರಾಯ್ಯಲ್ಟಿ ತೆಗೆದುಕೊಂಡು ಬರುತ್ತಿವೆ ಇಲ್ಲವೆಂಬುವುದು ಜನರಲ್ಲಿ ಗೊಂದಲ ಹಾಗಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿದೆ –ಸಚಿನ್ ಚವ್ಹಾಣ, ಜಿಲ್ಲಾಧ್ಯಕ್ಷ**

## ಚಿತ್ತಾಪುರದಲ್ಲಿ ಅಕ್ರಮ ಮರಳುಗಾರಿಕೆ: ಸಜ್ಜನಶೆಟ್ಟಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಚಿತ್ತಾಪುರ**

ತಾಲ್ಲೂಕಿನಲ್ಲಿ ಅಕ್ರಮ ಮರಳುಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ರವೀಂದ್ರ ಸಜ್ಜನಶೆಟ್ಟಿ ಹೇಳಿದರು. ಅಕ್ರಮ ಮರಳುಗಾರಿಕೆಯಿಂದಾಗಿಯೇ ಬೆಳಗುಂಪಾ ಗ್ರಾಮದಲ್ಲಿ ಆಳವಾಗಿ ಅಗೆದ ತಗ್ಗಿನಲ್ಲಿ ಕುರಿಕಾಯಲು ಹೋಗಿದ್ದ ಶ್ರೀಧರ ಎನ್ನುವಾತ ಬಿದ್ದು ಮೃತಪಟ್ಟಿದ್ದಾನೆ. ಹೀಗಾಗಿ ಮೃತಪಟ್ಟ ಯುವಕನ ಕುಟುಂಬಕ್ಕೆ 50 ಲಕ್ಷ ರೂ. ಪರಿಹಾರ ನೀಡಬೇಕು. ಕುಟುಂಬ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದರು.

ದಂಡೋತಿ, ಇವಣಿ, ಭಾಗೋಡಿ, ಕಾಟಮದೇವರಹಳ್ಳಿ, ಬೆಳಗುಂಪಾ ಸೇರಿ ಇನ್ನಿತರ ಗ್ರಾಮಗಳಲ್ಲಿ ನಿರಂತರವಾಗಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ. ಇದರಲ್ಲಿ ಈ ಭಾಗದ ಶಾಸಕ, ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತರೇ ಶಾಮೀಲಾಗಿದ್ದಾರೆ. ಸಚಿವರ ಸಂಪೂರ್ಣ ಬೆಂಬಲ ಇರುವುದರಿಂದಲೇ ದಂಧೆಕೋರರು ಯಾರಿಗೂ ಅಂಜದೇ ಅಕ್ರಮವಾಗಿ ಮರಳುಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಆ ಭಾಗದ ರೈತರಿಗೆ ಅಂಜ್ಜಿಸಿ ನಾಲ್ಕೈದು ನೂರು ಎಕರೆ ಭೂಮಿ ಖರೀದಿಸಿ ಅಕ್ರಮ ಮರಳುಗಾರಿಕೆ ನಡೆಸುತ್ತಿದ್ದಾರೆ. ಇಷ್ಟೆಲ್ಲ ಇದ್ದರೂ ಸರ್ಕಾರಕ್ಕೆ ಕಾಣುತ್ತಿಲ್ಲವೇ? ಪೊಲೀಸ್ ಇಲಾಖೆಯವರು, ಕಂದಾಯ ಇಲಾಖೆಯವರು, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು, ಜಿಲ್ಲಾಧಿಕಾರಿಗಳು ಸಹ ಕಣ್ಮುಚ್ಚಿ ಕುಳಿತುಕೊಂಡಿದ್ದಾರೆ. ಹೀಗಾಗಿ ಕೂಡಲೇ ಅಕ್ರಮ ಮರಳುಗಾರಿಕೆಯಲ್ಲಿ ಯಾರು ಯಾರು ಶಾಮಿಲಾಗಿದ್ದಾರೆ ಅವರ ಮೇಲೆ ಪ್ರಕರಣ ದಾಖಲಿಸಿ ಅಕ್ರಮ ಮರಳುಗಾರಿಕೆ ದಂಧೆ ನಿಲ್ಲಿಸಬೇಕು ಎಂದು ಹೇಳಿದರು. ಬಸವರಾಜ ಬೆಣ್ಣೂರಕರ್ ಮಾತನಾಡಿ, ಇಡೀ ರಾಜ್ಯದಲ್ಲಿಯೇ ಅಕ್ರಮ ಮರಳುಗಾರಿಕೆ ಎಲ್ಲಿಯಾದರೂ ಹೆಚ್ಚಿನ ಪ್ರಮಾಣದಲ್ಲಿ ನಡಿತಾ ಇದೆ ಅಂದರೇ ಅದು ಚಿತ್ತಾಪುರದಲ್ಲಿ ಮಾತ್ರ ಎನ್ನಬಹುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ ಅಂದರೇ ಅದು ಪ್ರಿಯಾಂಕ್ ಖರ್ಗೆ ಅವರ ಕೊಡುಗೆ ಕೂಡ ಅನ್ನಬಹುದು ಎಂದರು.

## ರಕ್ತದಾನ ಆರೋಗ್ಯಕ್ಕೆ ಒಳ್ಳೆಯದು ಡಾ. ಜ್ಯೋತಿ ಬಸರಿ ಸಲಹೆ

• **ಉದಯವಾಹಿನಿ ಸವದತ್ತಿ**

ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಳಗಾವಿ ತಾಲೂಕ ಪಂಚಾಯತ್ ಸವದತ್ತಿ ತಾಲ್ಲೂಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸವದತ್ತಿ ಪ್ರಾಥಮಿಕ ಆರೋಗ್ಯ ಕೇಂದ್ರ ಉಗರಗೋಳ ಹಾಗೂ ಗ್ರಾಮ ಪಂಚಾಯತ್ ಉಗರಗೋಳ, ಗೊರವನಕೊಳ್ಳ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಯಂ ಪ್ರೇರಿತ್ ರಕ್ತದಾನ ಶಿಬಿರ ಬುಧವಾರ ದಿನಾಂಕ 23 /4 /2025 ರಂದು ಮುಂಜಾನೆ 10:00 ಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಉಗರಗೋಳದಲ್ಲಿ ಹಮ್ಮಿಕೊಳ್ಳಲಾಗಿದೆ.

ರಕ್ತದಾನ ಶ್ರೇಷ್ಠ ಪುಣ್ಯಕಾರ್ಯವಾಗಿದೆ ರಕ್ತದಾನ ಆರೋಗ್ಯಕ್ಕೆ ಒಳ್ಳೆಯದು ಎಂದು ಆಯುಷ್ ವೈದ್ಯಾಧಿಕಾರಿಗಳಾದ ಡಾಕ್ಟರ್ ಜ್ಯೋತಿ ಬಸರಿ ಅವರು ತಿಳಿಸಿದರು. ಮುಂದುವರೆದು ಸಮುದಾಯ ಆರೋಗ್ಯ ಅಧಿಕಾರಿಗಳಾದ ಮಂಜುಳಾ ಪವಾರ್ ಅವರು ಮಾತನಾಡಿ ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಹೃದಯಾಘಾತ ಸಂಭವ ಕಡಿಮೆ ನವ ಚೈತನ್ಯ ಉಂಟು ಮಾಡುತ್ತದೆ ಸುತ್ತ ಮುತ್ತಲಿನ ಗ್ರಾಮಸ್ಥರು ಯುವಕರು ಸೇವಾ ಸಂಸ್ಥೆಯವರು ಈ ಶಿಬಿರದಲ್ಲಿ ಪಾಲ್ಗೊಂಡು ರಕ್ತದಾನ ಮಾಡಬೇಕೆಂದು ಕೋರಿದರು. ರಕ್ತದಾನ ಮಾಡುವುದರಿಂದ ಯಾವುದೇ ರೋಗಕ್ಕೆ ತುತ್ತಾಗುವುದಿಲ್ಲ. ರಕ್ತದಾನ ಮಾಡುವುದರಿಂದ ಇನ್ನೊಂದು ಜೀವವನ್ನು ಉಳಿಸಿದಂತಾಗುತ್ತದೆ ಎಂದು ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎನ.ಎ. ಪೂಜೇರ ಅವರು ತಿಳಿಸಿದರು.



ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಎ ಕೆ ಮುಲ್ಲಾ, ರಮೇಶ್ ಗೋವನ್ನವರ್, ಶ್ರೀದೇವಿ ಪತ್ತಾರ್, ಮೀನಾಕ್ಷಿ ಸುಲ್ಲಾಖೆ, ಆಯ್ ಎಸ್ ದಿಗಂಬರಮಠ, ರಘು ತೇರದಾಳ ಆಶಾ ಕಾರ್ಯಕರ್ತೆಯರು ಗ್ರಾಮಸ್ಥರು ಇತರರು ಉಪಸ್ಥಿತರಿದ್ದರು.

## ಜನಿವಾರಕ್ಕೆ ಅಪಚಾರ : ಕ್ರಮಕ್ಕೆ ಆಗ್ರಹಿಸಿ ಜನಿವಾರಧಾರಿಗಳ ಪ್ರತಿಭಟನೆ

• **ಉದಯವಾಹಿನಿ ಅಥಣಿ**

ಎಪ್ರಿಲ್ 17 ರಂದು ನಡೆದ ಸಿ.ಇ.ಟಿ ಪರೀಕ್ಷೆ ಸಮಯದಲ್ಲಿ ಜನೀವಾರಕ್ಕೆ ಅಪಚಾರ ಎಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಶಾಶ್ವತವಾಗಿ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಅಥಣಿಯ ಜನೀವಾರಧಾರಿಗಳು ತಹಶೀಲ್ದಾರ ಸಿದರಾಯ ಬೋಸಗಿ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜ ಅಥಣಿ ಘಟಕ, ಜೈನ್ ದಿಗಂಬರ ಸಮಾಜ ಸಂಘಟನೆ, ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜ ಸಂಘಟನೆ, ಮರಾಠಾ ಕ್ಷತ್ರೀಯ ಸಮಾಜ ಸಂಘಟನೆ, ಗುಜರಾತಿ ಬ್ರಾಹ್ಮಣ ಸಮಾಜ ಸಂಘಟನೆ, ಆರ್ಯ ವೈಶ್ಯ ಸಮಾಜ, ಸವಿತಾ ಸಮಾಜ ಸಂಘಟನೆಯ ನೂರಾರು ಜನ ಬೈಕ್ ರ್‍ಯಾಲಿ ಮೂಲಕ ತಹಶೀಲ್ದಾರ ಕಾರ್ಯಾಲಯಕ್ಕೆ ತೆರಳಿ ತಹಶೀಲ್ದಾರ ಸಿದರಾಯ ಭೋಸಗಿ ಇವರಿಗೆ ಮನವಿ ಸಲ್ಲಿಸಿ ಸರ್ಕಾರ ಕೂಡಲೇ ಶಿಸ್ತು ಕ್ರಮ ಜರುಗಿಸಲು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

ಬೀದರ ಮತ್ತು ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿಯ ಸಿ.ಇ.ಟಿ ಪರೀಕ್ಷಾ ಕೇಂದ್ರಗಳಲ್ಲಿ ಕೆ.ಇ.ಎ ನಿರ್ದೇಶನ ಇಲ್ಲದಿದ್ದರೂ ಕೂಡ ಅಧಿಕಾರಿಗಳು ದುರುದ್ದೇಶ ಪೂರ್ವಕವಾಗಿ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ್ದಾರೆ ಅಲ್ಲದೆ ಇದಕ್ಕೆ ಒಪ್ಪದ ವಿದ್ಯಾರ್ಥಿಗಳ ಜನೀವಾರವನ್ನು ತೆಗೆಸುವ ಮೂಲಕ ಧಾರ್ಮಿಕ ನಂಬಿಕೆಗೆ ಧಕ್ಕೆ ತಂದಿದ್ದು, ಇಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಲಾಗಿದೆ.

ಸಂವಿಧಾನದ ಅನುಚ್ಛೇದ 25 ರಲ್ಲಿ ತಮ್ಮ ತಮ್ಮ ಧಾರ್ಮಿಕ ನಂಬಿಕೆಗಳಿಗೆ ಅನುಗುಣವಾಗಿ ಲಾಂಛನ ಮತ್ತು ಜನೀವಾರ, ಶಿವಧಾರಗಳನ್ನು ಧರಿಸಲು ಅವಕಾಶ ಇದೆ ಆದರೆ ಇಲ್ಲಿ ಮಾತ್ರ ದುರುದ್ದೇಶದಿಂದ ಜನಿವಾರ ತೆಗೆಸಿರುವುದು ಧಾರ್ಮಿಕ ನಂಬಿಕೆಗೆ ಧಕ್ಕೆ ತರಲಾಗಿದ್ದು, ಘಟನೆಗೆ ಕಾರಣರಾದ ಅಧಿಕಾರಿಗಳನ್ನು ಮತ್ತು ಮೇಲಾಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

> **ಜನೀವಾರ ತೆಗೆಯಲು ಒಪ್ಪದ ಪರೀಕ್ಷಾರ್ಥಿ ಬೀದರನ ಸುಚೀವೃತ ಕುಲಕರ್ಣಿ ಸಿ.ಇ.ಟಿ ಪರೀಕ್ಷೆಯಿಂದ ವಂಚಿತಗೊಂಡಿದ್ದು, ಆ ವಿದ್ಯಾರ್ಥಿಗೆ ಸರಕಾರ ನ್ಯಾಯ ಒದಗಿಸುವ ಮೂಲಕ ಧೈರ್ಯ ತುಂಬಬೇಕು ಮತ್ತು ಮುಂದಿನ ಯಾವುದೇ ಪರೀಕ್ಷೆಯಲ್ಲಿಯೂ ಈ ರೀತಿಯ ಧಾರ್ಮಿಕ ಭಾವನೆಗೆ ಧಕ್ಕೆ ತರುವಂತಹ ಕೃತ್ಯಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.**

## ಸಿಡಿಲಬ್ಬರಕೆ 4ಕುರಿ, 2ಮೇಕೆ ಸಾವು

• **ಉದಯವಾಹಿನಿ ಕೂಡ್ಲಿಗಿ**

ದಿನದಿಂದ ದಿನಕ್ಕೆ ಅಕಾಲಿಕ ಮಳೆಗಾಳಿಯ ಆರ್ಭಟ ಜೋರಾಗುತ್ತಿದ್ದು ಕಳೆದ ರಾತ್ರಿ ಜೋರಾದ ಗಾಳಿ ನಡುವೆ ಗುಡುಗು ಮಿಂಚು ಸಹಿತ ಮಳೆಯಲ್ಲಿ ತಾಲ್ಲೂಕಿನ ಈಚಲ ಬೊಮ್ಮನಹಳ್ಳಿ ಗ್ರಾಮದಲ್ಲಿ ಕುರಿ ಹಟ್ಟಿಯಲ್ಲಿದ್ದ 4ಕುರಿಗಳು ಹಾಗೂ 2ಮೇಕೆಗಳು ಸಿಡಿಲಿಗೆ ಬಲಿಯಾದ ಘಟನೆ ಜರುಗಿದೆ.

ಈಚಲ ಬೊಮ್ಮನಹಳ್ಳಿಯ ಕುರುಬರ ಹಾಲಮ್ಮ ಅವರಿಗೆ ಸೇರಿದ 4ಕುರಿಗಳು ಹಾಗೂ 2ಮೇಕೆಗಳನ್ನು ತಮ್ಮ ಕುರಿ ಹಟ್ಟಿಯಲ್ಲಿದ್ದಾಗ ಕಳೆದ ರಾತ್ರಿ ಶುರುವಾದ ಗುಡುಗು ಮಿಂಚು ಸಹಿತ ಮಳೆ ಆರಂಭವಾಗಿದ್ದು ಈ ಆರ್ಭಟದಲ್ಲಿ ಬಡಿದ ಸಿಡಿಲಿಗೆ ಹಾಲಮ್ಮನ ಕುರಿಮೇಕೆಗಳು ಬಲಿಯಾಗಿವೆ.

## ಕಾಮಗಾರಿಗೆ ಭೂಮಿ ಪೂಜೆ

• **ಉದಯವಾಹಿನಿ ಹಗರಿಬೊಮ್ಮನಹಳ್ಳಿ**

ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕೆಕೆಆರ್‌ಡಿಬಿ ಯೋಜನೆಯಲ್ಲಿ ಸಿಸಿ ರಸ್ತೆ,ಚರಂಡಿ,ಗ್ರಂಥಾಲಯ ಶಾಲಾಕಟ್ಟಡ ಸೇರಿದಂತೆ ಎರಡು ದಿನದಲ್ಲಿ 15 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಶಾಸಕ ಕೆ. ನೇಮಿರಾಜ್ ನಾಯ್ಕ್ ಭಾನುವಾರ ಕೂಡ ಭೂಮಿ ಪೂಜೆ ನೆರವೇರಿಸಿದರು. ನಂತರ ಮಾತನಾಡಿ ರಾಜ್ಯ ಕಾಂಗ್ರೆಸ್ ಸರ್ಕಾರದ ಬೊಕ್ಕಸ ಖಾಲಿಯಾಗಿದೆ. ಅಭಿವೃದ್ಧಿಗೆ ನಯಾ ಪೈಸ ಬರುತ್ತಿಲ್ಲ. ಕೇಂದ್ರ ಸರ್ಕಾರ ಸೇರಿದಂತೆ ಕೆಕೆಆರ್‌ಡಿಬಿ ಡಿಎಂಎಫ್ ಫಂಡ್ ಮೂಲಕ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕ್ಷೇತ್ರದ ಜನ ನನ್ನ ಮೇಲೆ ವಿಶ್ವಾಸವಿಟ್ಟು ಆಯ್ಕೆ ಮಾಡಿರುತ್ತಾರೆ. ಯಾವುದೇ ಗ್ರಾಮಕ್ಕೆ ಅನ್ಯಾಯವಾಗದಂತೆ ಅನುದಾನ ಒದಗಿಸಲಾಗುವುದು ಎಂದರು.

## ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಸಂಪೂರ್ಣ ಬಂದ್ ಮಾಡಿ

• **ಉದಯವಾಹಿನಿ, ಬೀದರ್**

ಜಿಲ್ಲೆಯಾದ್ಯಂತ ರಾಜಾರೋಷವಾಗಿ ಯಾರ ಅಂಜಿಕೆಯಿಲ್ಲದೆ ನಡೆಯುತ್ತಿರುವ ಅನಧಿಕೃತ ಕೋಚಿಂಗ್ ಸೆಂಟರ್‌ಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕೆಂದು ಕಲ್ಯಾಣ ಕರ್ನಾಟಕ ಅನುದಾನ ರಹಿತ ಖಾಸಗಿ ಶಾಲಾ ಆಡಳಿತ ಮಂಡಳಿ ಸಂಘ ಒತ್ತಾಯಿಸಿದೆ. ನಗರದ ಜಿಲ್ಲಾಧಿಕಾರಿ ಹಾಗೂ ಡಿಡಿಪಿಐ ಕಚೇರಿಗೆ ತೆರಳಿ ಬಿಇಒಟಿಆರ್ ದೊಡ್ಡೆ ಅವರಿಗೆ ಲಿಖಿತ ಮನವಿ ಪತ್ರ ಸಲ್ಲಿಸಿ ಅನಧಿಕೃತ ಕೋಚಿಂಗ್ ಸೆಂಟರ್‌ಗಳ ಹಾವಳಿಯಿಂದ ಎಲ್ಲಾ ರೀತಿಯ ಶಾಲೆಗಳ ಮೇಲೆ ದುಷ್ಪರಿಣಾಮ ಬೀರುತ್ತಿದೆ, ನಮ್ಮಲ್ಲಿ ಓದುವ ಮಕ್ಕಳು ಕೋಚಿಂಗ್ ಆಸೆಗಾಗಿ ಅನಧಿಕೃತ ಸೆಂಟರ್‌ಗಳಲ್ಲಿ ಪ್ರವೇಶ ಪಡೆಯುತ್ತಿರುವುದರಿಂದ ಶಾಲೆಗಳ ಸ್ಥಿತಿ ಚಿಂತಾಜನಕವಾಗುತ್ತಿದೆ. ಈ ಸೆಂಟರ್‌ಗಳು ಹಣದ ಲಾಲಚಿಗಾಗಿ ನಿತ್ಯ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆ ಹಾಗೂ ಸಾಯಂಕಾಲ 5 ಗಂಟೆಯಿಂದ ರಾತ್ರಿ 9 ಗಂಟೆ ವರೆಗೆ ಕೋಚಿಂಗ್ ನಡೆಸುತ್ತಿರುವುದರಿಂದ ಪಾಲಕರು ಏನು ಅರಿಯದೆ ತಮ್ಮ ಮಕ್ಕಳು ಹೆಚ್ಚೆಚ್ಚು ಓದಬೇಕೆಂಬ ಬಯಿಕೆಯಿಂದ ಅಂತಹ ಅನಧಿಕೃತ ಸೆಂಟರ್‌ಗಳತ್ತ ಮುಖ ಮಾಡುತ್ತಿರುವರು. ಇದು ನೇರಾನೇರ ಖಾಸಗಿ ಶಾಲೆಗಳ ಮೇಲೆ ವ್ಯಾಪಕ ಪರಿಣಾಮ ಬೀರುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಸಹ ಈ ಕುರಿತು 05/07/2024 ಹಾಗೂ 21/08/2024 ಎರಡು ಬಾರಿ ಈ ಅನಧಿಕೃತ ಕೋಚಿಂಗ್ ಸೆಂಟರ್‌ಗಳು ಬ್ಯಾನ್ ಮಾಡಬೇಕೆಂದು ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಜರುಗಿಸಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ ಹಾಗೇ ಯಾವುದೇ ಕೋಚಿಂಗ್ ಸೆಂಟರ್‌ಗಳು ಇಲ್ಲಿ ವರೆಗೆ ಬಂದ್ ಆಗಲಿಲ್ಲ ಬದಲಿಗೆ ಹೆಚ್ಚಿಗೆ ಆಗಿರುತ್ತವೆ.

### • ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿ.ಪಂ ಸಿಇಒ ಎಸ್.ಜೆ.ಸೋಮಶೇಖರ್ ಸೂಚನೆ

# ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮವಹಿಸಿ

• **ಉದಯವಾಹಿನಿ, ಚಿತ್ರದುರ್ಗ**

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮವಹಿಸಬೇಕು ಹಾಗೂ ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಯೋಜನೆಯ ಬೂದು ನೀರು ಮತ್ತು ಮಲತ್ಯಾಜ್ಯ ಸಂಸ್ಕರಣಾ ಘಟಕ, ಸಮಗ್ರ ಘನತ್ಯಾಜ್ಯ ನಿರ್ವಹಣಾ ಘಟಕದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನ ಗೊಂಡಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಹಾಗೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮತ್ತು ಬೇಸಿಗೆಯಲ್ಲಿ ಕುಡಿಯುವ ನೀರು ತೊಂದರೆ ಇರುವ ಗ್ರಾಮಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರು ಸಮಸ್ಯೆ ತೀವ್ರವಾಗಿರುವ ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್ ಮಾಲೀಕರಿಂದ ಬಾಡಿಗೆ ಪಡೆದು ಕೊಂಡು ಕುಡಿಯುವ ನೀರು ಪೂರೈಕೆ ಮಾಡಬೇಕು ಎಂದು ತಿಳಿಸಿದ ಅವರು, ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಲ್ಲಾ ತಾಲ್ಲೂಕು ಪಂಚಾಯಿತಿಗಲ್ಲಿ ಸಹಾಯ ವಾಣಿ ತೆರೆಯುವಂತೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜಿ.ಪಂ.ಸಿಇಒ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಓವರ್ ಹೆಡ್ ಟ್ಯಾಂಕ್‌ಗಳ ಸ್ವಚ್ಛಗೊಳಿಸಿ, ಕ್ಲೋರಿನೇಷನ್ ಮಾಡಬೇಕು. ಈ ಕುರಿತು ಆರೋಗ್ಯ ಇಲಾಖೆ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಬೇಕು.




ಉದಯವಾಹಿನಿ ಚಿತ್ರ

**ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ**

> **ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳು ಸಭೆಗಳನ್ನು ಆಯೋಜಿಸಿ, ನಡಾವಳಿ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಬೇಕು. ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಬೂದು ನೀರು ಕಾಮಗಾರಿಗಳನ್ನು ಪೂರ್ಣಗೊಳಿಸಿ –ಎಸ್.ಜೆ.ಸೋಮಶೇಖರ್, ಜಿ.ಪಂ ಸಿಇಒ**

**ಟ್ರಯಲ್ ರನ್ ಮಾಡಲು ಸೂಚನೆ**

**ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವಚ್ಛ ಸಂಕೀರ್ಣ ಘಟಕಗಳಲ್ಲಿ ಕಸ ಸಂಗ್ರಹಣೆ, ವಿಂಗಡಣೆ ಸಮರ್ಪಕವಾಗಿ ನಿರ್ವಹಿಸಲು ತಿಳಿಸಿದರು. ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವಿ.ವಿ.ಪುರ ಗ್ರಾಮ ಪಂಚಾಯಿತಿಯಲ್ಲಿ ಮಲತ್ಯಾಜ್ಯ ಸಂಸ್ಕರಣಾ ಘಟಕ ಪೂರ್ಣಗೊಂಡಿದ್ದು, ಟ್ರಯಲ್ ರನ್ ಮಾಡಲು ಸೂಚಿಸಿದರು. ಚಳ್ಳಕೆರೆ ತಾಲ್ಲೂಕಿನ ನಗರಂಗೆರೆ, ಮೊಳಕಾಲ್ಮುರು ತಾಲ್ಲೂಕಿನ ರಾಂಪುರ, ಹೊಳಲ್ಕೆರೆ ತಾಲ್ಲೂಕಿನ ಗುಂಡೇರಿ, ಚಿತ್ರದುರ್ಗ ತಾಲ್ಲೂಕಿನ ದ್ಯಾಮವ್ವನಹಳ್ಳಿ, ಹೊಸದುರ್ಗ ತಾಲ್ಲೂಕಿನ ಬೆಲಗೂರು ಗ್ರಾಮ ಪಂಚಾಯಿತಿಗಳಲ್ಲಿ ಮಲತ್ಯಾಜ್ಯ ಸಂಸ್ಕರಣಾ ಘಟಕ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ತಿಳಿಸಿದರು.**

ಜವನಗೊಂಡನಹಳ್ಳಿ ಮತ್ತು ಹರ್ತಿಕೋಟೆ ಕುಡಿಯುವ ನೀರು ಯೋಜನೆಗಳ ಬಾಕಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ, ಟ್ರಯಲ್ ರನ್ ಮಾಡಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ಸಿ.ಎಸ್. ಗಾಯಿತ್ರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸನಗೌಡ ಪಾಟೀಲ್, ಜಿಲ್ಲಾ ಪಂಚಾಯಿತಿ ಸಹಾಯಕ ಯೋಜನಾಧಿಕಾರಿ ಡಿ.ಎಸ್.ಸುಮಾ, ಜಲಜೀವನ್ ಮಿಷನ್ ಯೋಜನೆಯ ಯೋಜನಾ ವ್ಯವಸ್ಥಾಪಕ ಮಂಜುನಾಥ ಎಸ್ ನಾಡರ್, ಐಇಸಿ ಸಮಾಲೋಚಕ ಬಿ.ಸಿ.ನಾಗರಾಜ್, ಹೆಚ್‌ಆರ್‌ಡಿ ಸಮಾಲೋಚಕ ವಿನಯ್ ಕುಮಾರ್, ಎಸ್.ಹೆಚ್ ಸಮಾಲೋಚಕ ಪ್ರಮೀಳಾ, ಎಂಐಎಸ್ ಸಮಾಲೋಚಕರಾದ ಶಶಿಧರ್ ಮತ್ತು ಸ್ನೇಹನ್ ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಸತೀಶ್, ರವಿಕುಮಾರ್, ವಿಶ್ವನಾಥ್, ಸುನೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಿರಿಯ ಅಭಿಯಂತರು ಹಾಗೂ ಸಿಬ್ಬಂದಿ ಇದ್ದರು.

## ಧರ್ಮ ಉಳಿಯುವುದಿಲ್ಲ, ಉಳಿಸಬೇಕಾಗುತ್ತದೆ : ಶಹರಾವತ್

• **ಉದಯವಾಹಿನಿ ಭಾಲ್ಕಿ**

ಧರ್ಮವೂ ತನ್ನಿಂದ ತಾನೇ ರಕ್ಷಣೆಯಾಗುವುದಿಲ್ಲ. ಅದನ್ನು ರಕ್ಷಿಸಬೇಕಾಗುತ್ತದೆ ಎಂದು ಹಿಂದೂಪರ ಚಿಂತಕಿ ಡೆಹರಾಡೂನ್‌ನ ಮೀನಾಕ್ಷಿ ಶಹರಾವತ್ ಹೇಳಿದರು. ಪಟ್ಟಣದಲ್ಲಿ ವಿಶ್ವಹಿಂದೂ ಪರಿಷತ್ ಮತ್ತು ಬಜರಂಗ ದಳ ಸಹಯೋಗದಲ್ಲಿ ಆಯೋಜಿಸಿದ್ದ ಭವ್ಯ ರಾಮೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು.

ಧರ್ಮರಕ್ಷಣೆ ಮತ್ತು ಸ್ವಾತಂತ್ರ್ಯಕ್ಕಾಗಿ ಜೀವತೆತ್ತ ಮಹಾನ್ ಕ್ರಾಂತಿಕಾರಿಗಳು, ಸ್ವಾತಂತ್ರ ಹೋರಾಟಗಾರರ ತ್ಯಾಗ, ಬಲಿದಾನ ವ್ಯರ್ಥ ಹೋಗದಂತೆ ನೋಡಿಕೊಳ್ಳಬೇಕಾಗಿದೆ. ಇಂದಿನ ಯುವ ಸಮುದಾಯ ಮತ್ತು ಪ್ರತಿಯೊಬ್ಬ ನಾಗರಿಕರು ರಾಷ್ಟ್ರ ಮತ್ತು ಧರ್ಮದ ರಕ್ಷಣೆಗಾಗಿ ಜಾಗೃತರಾಗಬೇಕಾಗಿದೆ ಎಂದು ತಿಳಿಸಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಭಗತಸಿಂಗ್, ಸುಖದೇವ್, ರಾಜಗುರು, ಚಂದ್ರಶೇಖರ್ ಆಜಾದ್, ಶಿವಾಜಿ ಮಹಾರಾಜ್ ಸೇರಿದಂತೆ ಇತರ ಕ್ರಾಂತಿಕಾರಿಗಳು ಮತ್ತು ಮಹಾನ್ ಪುರುಷರು ಹಾಕಿಕೊಟ್ಟ ಧರ್ಮ ಪಾಲನೆ, ರಕ್ಷಣೆ ಮತ್ತು ರಾಷ್ಟ್ರ ಧರ್ಮದ ಮಾರ್ಗದಲ್ಲಿ ಸಾಗಬೇಕು ಎಂದು ಹೇಳಿದರು. ನಮ್ಮೆಲ್ಲರಲ್ಲಿಯೂ ರಾಷ್ಟ್ರ ಭಕ್ತಿ ಗಟ್ಟಿಯಾಗಿರಬೇಕು.

ರಾಷ್ಟ್ರವೇ ಮೊದಲು ನಂತರ ಧರ್ಮ. ರಾಷ್ಟ್ರವಿದ್ದರೆ ಧರ್ಮದ ಉಳಿವು. ರಾಷ್ಟ್ರಕ್ಕಾಗಿ ಸರ್ವಸ್ವವೂ ತ್ಯಾಗ ಮಾಡುವ ಗುಣ ನಮ್ಮಲ್ಲಿರಬೇಕು.

## ಐತಿಹಾಸಿಕ ನಿರ್ಧಾರ: ಮೂಲಭೂತವಾದಿಗಳಿಂದ ಹಿಂದೂಗಳ ರಕ್ಷಣೆಗಾಗಿ ನಿರ್ಣಯ ಮಂಡನೆ





**ಲಂಡನ್:** ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಹಿಂದೂಗಳನ್ನು ದ್ವೇಷಿಸುವ ಮೂಲಭೂತವಾದಿಗಳ ಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ, ಇಂತಹ ಹಿಂದೂ ವಿರೋಧಿ ಪೂರ್ವಾಗ್ರಹಗಳನ್ನು ಎದುರಿಸಲು, ಸ್ಕಾಟಿಷ್ ಸಂಸತ್ತು ಒಂದು ದೊಡ್ಡ ಹೆಜ್ಜೆ ಇಟ್ಟಿದೆ. ಸ್ಕಾಟ್ಲೆಂಡ್‌ನಲ್ಲಿ ಹಿಂದೂಗಳ ವಿರುದ್ಧ ಪೂರ್ವಾಗ್ರಹ ಮತ್ತು ತಾರತಮ್ಯವನ್ನು ಎತ್ತಿ ತೋರಿಸಿದ ಗ್ಲಾಸ್ಗೋ ಮೂಲದ ಗಾಂಧಿವಾದಿ ಸಂಘಟನೆಯ ವರದಿಯನ್ನು ಶ್ಲಾಘಿಸುವ ನಿರ್ಣಯವನ್ನು ಸಂಸತ್ತಿನ ಸದಸ್ಯರೊಬ್ಬರು ಸದನದಲ್ಲಿ ಮಂಡಿಸಿದ್ದಾರೆ. ಹಿಂದೂ ವಿರೋಧಿಗಳು ಮತ್ತು ಹಿಂದೂಫೋಬಿಯಾದಿಂದ ಬಳಲುತ್ತಿರುವ ಜನರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಂಸದರು ನಿರ್ಣಯದಲ್ಲಿ ಒತ್ತಾಯಿಸಿದ್ದಾರೆ.

ಕಳೆದ ವಾರ ಎಡಿನ್‌ಬರ್ಗ್‌ನ ಆಲ್ಬಾ ಪಕ್ಷದ ಸಂಸದ ಈಸ್ಟರ್ನ್ ಆಶ್ ರೇಗನ್ ಅವರು 'ಗಾಂಧಿಯನ್ ಪೀಸ್ ಸೊಸೈಟಿ' ವರದಿಯ ಆಧಾರದ ಮೇಲೆ ಪ್ರಸ್ತಾವನೆಯನ್ನು ಮಂಡಿಸಿದರು. ಅಂತಹ ಪ್ರಸ್ತಾಪಗಳ ಉದ್ದೇಶವು ಪ್ರಮುಖ ವಿಷಯಗಳತ್ತ ಗಮನ ಸೆಳೆಯುವುದಾಗಿದೆ. ಗಾಂಧಿಯವರ ಶಾಂತಿ, ಅಹಿಂಸೆ ಮತ್ತು ಸಾಮರಸ್ಯದ ತತ್ವಗಳನ್ನು ಉತ್ತೇಜಿಸುವ ಈ ಸಮಾಜವು ಫೆಬ್ರವರಿಯಲ್ಲಿ ಜನಾಂಗೀಯ ಮತ್ತು ಧಾರ್ಮಿಕ ಪೂರ್ವಾಗ್ರಹವನ್ನು ಪ್ರಶ್ನಿಸಿ ಸ್ಕಾಟಿಷ್ ಸಂಸತ್ತಿನ ಸಮಿತಿಗೆ 'ಸ್ಕಾಟ್ಲೆಂಡ್‌ನಲ್ಲಿ ಹಿಂದೂಫೋಬಿಯಾ' ಎಂಬ ವರದಿಯನ್ನು ಸಲ್ಲಿಸಿತು. ಸ್ಕಾಟ್ಲೆಂಡ್‌ನಲ್ಲಿ ಹಿಂದೂ ಸಮುದಾಯದ ಸದಸ್ಯರು ಎದುರಿಸುತ್ತಿರುವ ಪೂರ್ವಾಗ್ರಹ, ತಾರತಮ್ಯ ಮತ್ತು ಅಂಚಿನಲ್ಲಿರುವಿಕೆಯ ಹೆಚ್ಚುತ್ತಿರುವ ಮಟ್ಟವನ್ನು ಇದು ಎತ್ತಿ ತೋರಿಸುತ್ತದೆ ಎಂದು ಅದು ಹೇಳಿದೆ.

**ಸ್ಕಾಟಿಷ್ ಸಂಸತ್ತು ಒಂದು ದೊಡ್ಡ ಹೆಜ್ಜೆ**

ಹಿಂದೂಗಳ ವಿರುದ್ಧದ ಇಂತಹ ತಾರತಮ್ಯವನ್ನು ತೊಡೆದುಹಾಕಬೇಕು ಎಂದು ನಿರ್ಣಯದಲ್ಲಿ ಹೇಳಲಾಗಿದೆ. ಸ್ಕಾಟ್ಲೆಂಡ್‌ನ ವೈವಿಧ್ಯಮಯ ಸಮುದಾಯಗಳಲ್ಲಿ ಜಾಗೃತಿ ಮೂಡಿಸುವಲ್ಲಿ ಮತ್ತು ಅಂತರ-ಧಾರ್ಮಿಕ ಸಂವಾದ, ಸಾಮಾಜಿಕ ಒಗ್ಗಟ್ಟು ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸುವಲ್ಲಿ ಅವರ ಸಂಶೋಧನೆ ಮತ್ತು ಸಾರ್ವಜನಿಕ ತೊಡಗಿಸಿಕೊಳ್ಳುವಿಕೆಯ ಮಹತ್ವವನ್ನು ಈ ಪ್ರಸ್ತಾವನೆಯು ಒಪ್ಪಿಕೊಳ್ಳುತ್ತದೆ. ಸ್ಕಾಟ್ಲೆಂಡ್‌ನಲ್ಲಿ ಹಿಂದೂಫೋಬಿಯಾ ಎಂಬ ವರದಿಯು ಸ್ಕಾಟ್ಲೆಂಡ್‌ನಲ್ಲಿ ಈ ವಿಷಯದ ಕುರಿತು ಈ ರೀತಿಯ ಮೊದಲ ಆಳವಾದ ಅಧ್ಯಯನವಾಗಿದೆ ಎಂದು ಹೇಳಿಕೊಂಡಿದೆ.

## ಚಿತ್ತೋರ್‌ಗಢ ಬಳಿ ಸಂಭವಿಸಿದ ಅಪಘಾತದಲ್ಲಿ ನಾಲ್ವರು ಯಾತ್ರಿಕರ ಸಾವು

**ಜೈಪುರ:** ರಾಜಸ್ಥಾನದ ಚಿತ್ತೋರ್‌ಗಢ ಬಳಿಯ ನೀಮಚ್-ಅಜ್ಮೀರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ರಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮಧ್ಯಪ್ರದೇಶದ ನಾಲ್ವರು ಯಾತ್ರಿಕರು ಸಾವನ್ನಪ್ಪಿದ್ದಾರೆ.ನಿಂಬಾಹೆರಾದ ಜಾಲಿಯಾ ಚೆಕ್‌ಪೋಸ್ಟ್ ಬಳಿ ತಡರಾತ್ರಿ ಅಪಘಾತ ನಡೆದಿದೆ. ಭಕ್ತರಿದ್ದ ಕಾರು ರಸ್ತೆಯಲ್ಲಿನ ವಿಭಾಜಕಕ್ಕೆ ಡಿಕ್ಕಿ ಹೊಡೆದು ನಂತರ ಟ್ರಕ್‌ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅತಿವೇಗದ ವಾಹನ ನಿಯಂತ್ರಣ ತಪ್ಪಿ ವಿಭಾಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಬದ್ರಿಲಾಲ್ ರಾವ್ ಹೇಳಿದರು.ಕಾರಿನಲ್ಲಿದ್ದ ಪ್ರಯಾಣಿಕರು ಉಜ್ಜಯಿನಿ ಜಿಲ್ಲೆಯ ಬದ್‌ನಗರದ ಇಂಗೋರಿಯಾ ಗ್ರಾಮದ ನಿವಾಸಿಗಳಾಗಿದ್ದು, ಚಿತ್ತೋರ್‌ಗಢದ ಸನ್ವಾಲಿಯಾ ಸೇಠ್ ದೇವಸ್ಥಾನಕ್ಕೆ ಹೋಗುತ್ತಿದ್ದರು ಎಂದು ಅವರು ಹೇಳಿದರು. ಅಪಘಾತದಲ್ಲಿ ಮೃತಪಟ್ಟವರನ್ನು ಸಂಜಯ್ ಅಲಿಯಾಸ್ ಸಂಜು (42), ಗೌರವ್ (32), ಅನಿಲ್ (18) ಮತ್ತು ಚಾಲಕ ರಾಜಾ ಚೌಧರಿ ಅಲಿಯಾಸ್ ರಾಜೇಶ್ ಎಂದು ಗುರುತಿಸಲಾಗಿದೆ. ನಾಲ್ವರೂ ಸಂಬಂಧಿಕರು ಎಂದು ಅಧಿಕಾರಿ ತಿಳಿಸಿದ್ದಾರೆ. ಗಾಯಾಳುಗಳು ಮೂವರು ನಿಂಬಹೆರಾದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಪ.ಬಂಗಾಳದ ರಾಜ್ಯಪಾಲ ಆನಂದ ಬೋಸ್‌ಗೆ ಎದೆ ನೋವು: ಆಸ್ಪತ್ರೆಗೆ ದಾಖಲು

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರಿಗೆ ಸೋಮವಾರ ಬೆಳಗ್ಗೆ ಎದೆ ನೋವು ಕಾಣಿಸಿಕೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬೋಸ್ ಅವರ ಆರೋಗ್ಯ ಸ್ಥಿರವಾಗಿದೆ ಎಂದು ರಾಜಭವನದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆ ಸುಮಾರಿಗೆ ಬೋಸ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು ಅವರ ಮೇಲೆ ನಿಗಾ ಇಟ್ಟಿದ್ದಾರೆ. ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಗಿದೆ. ಚಿಕಿತ್ಸೆಯ ನಂತರ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. ಅವರನ್ನು ಮಂಗಳವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುರ್ಷಿದಾಬಾದ್‌ನ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಹಿಂದಿರುಗಿದ ನಂತರ ರಾಜ್ಯಪಾಲರಲ್ಲಿ ಎದೆ ನೋವು ಕಾಣಿಸಿಕೊಂಡಿತ್ತು. ಅವರಿಗೆ ಬಿಡುವಿಲ್ಲದೆ ಇರುವುದು ಆರೋಗ್ಯದ ಮೇಲೆ ಪರಿಣಾಮ ಬೀರಿದೆ ಎಂದು ಮತ್ತೊಬ್ಬ ಅಧಿಕಾರಿ ಹೇಳಿಕೊಂಡಿದ್ದಾರೆ.

## ರಾಕಿಂಗ್ ಸ್ಟಾರ್ ಯಶ್- ಮಧ್ಯ ಪ್ರದೇಶ ಸಿಎಂ ಮೋಹನ್ ಯಾದವ್ ಭೇಟಿ: ಕುತೂಹಲ



**ಭೋಪಾಲ್:** ರಾಕಿಂಗ್ ಸ್ಟಾರ್ ಯಶ್ ಮಧ್ಯಪ್ರದೇಶ ಪ್ರವಾಸ ಕೈಗೊಂಡಿದ್ದು, ಉಜ್ಜೈನ್ ನಲ್ಲಿನ ಮಹಾಕಾಳೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ. ಈ ಬೆನ್ನಲ್ಲೇ ಭೋಪಾಲ್‌ನಲ್ಲಿ ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್ ಅವರನ್ನು ಯಶ್ ಭೇಟಿ ಮಾಡಿರುವುದು ಕುತೂಹಲ ಮೂಡಿಸಿದೆ.

ರಾವಣನಾಗಿ ನಟಿಸುತ್ತಿರುವ 'ರಾಮಾಯಣ' ಸಿನಿಮಾ ಶೂಟ್ ಮುಂಬೈನಲ್ಲಿ ನಡೆಯಲಿದೆ. ಅದಕ್ಕೂ ಮೊದಲು ಅವರು ಉಜ್ಜಯಿನಿಯ ಮಹಾಕಾಳೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದೇವಾಲಯಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಸಿಎಂ ಮೋಹನ್ ಯಾದವ್ ಅವರೊಂದಿಗೆ ಚರ್ಚೆ ನಡೆಸಿದ್ದಾರೆ.

'ಕೆಜಿಎಫ್ 2' ಬಳಿಕ ದೇಶಾದ್ಯಂತ ಜನಪ್ರಿಯಗೊಂಡಿರುವ ಯಶ್, ತಮ್ಮ ರಾಜ್ಯಕ್ಕೆ ಬರುತ್ತಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆಯೇ ಮಧ್ಯ ಪ್ರದೇಶ ಸಿಎಂ ಮೋಹನ್ ಯಾದವ್ ಭೇಟಿಗೆ ಅವಕಾಶ ಕಲ್ಪಿಸಿದ್ದಾರೆ. ಆ ಬಳಿಕ ಸೌಹಾರ್ದಯುತ ಭೇಟಿ ನಡೆದಿದೆ. ಅಭಿಮಾನಿಗಳ ವಲಯದಲ್ಲಿ ಈ ಫೋಟೋ ವೈರಲ್ ಆಗಿ ಗಮನ ಸೆಳೆದಿದೆ.

ಯಶ್ 'ಟಾಕ್ಸಿಕ್' ಚಿತ್ರದ ಒಂದಷ್ಟು ಪೋರ್ಷನ್‌ನ ಶೂಟ್ ಪೂರ್ಣಗೊಳಿಸಿದ್ದಾರೆ. ಈಗ ಅವರ ಗಮನ 'ರಾಮಾಯಣ' ಚಿತ್ರದ ಮೇಲೆ ಇದೆ. ಇತ್ತೀಚೆಗೆ ಹೊಂಬಾಳೆ ಫಿಲ್ಮ್ಸ್ ಕಡೆಯಿಂದ 'ಕೆಜಿಎಫ್ 3' ಕೆಲಸಗಳು ಶೀಘ್ರವೇ ಆರಂಭ ಆಗಲಿದೆ ಎನ್ನುವ ಸೂಚನೆ ಕೊಟ್ಟಿದ್ದಾರೆ. ಈ ಸಿನಿಮಾ ಕೆಲಸಗಳು ಪೂರ್ಣಗೊಂಡ ಬಳಿಕ ಯಶ್ ಅವರು 'ಕೆಜಿಎಫ್ 3' ಕೆಲಸಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಇದೆ.

### ಅಮೆರಿಕ-ಚೀನಾ ವಾಣಿಜ್ಯ ಸಮರದ ಮಧ್ಯೆ ಸಿಕ್ಕು ಒದ್ದಾಡುತ್ತಿವೆ ಜಗತ್ತಿನ ಹಲವಾರು ಸಣ್ಣಪುಟ್ಟ ರಾಷ್ಟ್ರಗಳು

## ಸುಂಕ ಒಪ್ಪಂದ ಮಾಡಿಕೊಳ್ಳುತ್ತಿರುವ ರಾಷ್ಟ್ರಗಳಿಗೆ ಚೀನಾ ಖಡಕ್ ವಾರ್ನಿಂಗ್




**ಬೀಜಿಂಗ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೊಸ ಸುಂಕ ನೀತಿಯಿಂದ ತತ್ತರಿಸಿರುವ ಜಗತ್ತಿನ ಹಲವು ದೇಶಗಳು, ಅಮೆರಿಕದೊಂದಿಗೆ ವ್ಯಾಪಾರ ಮಾತುಕತೆ ನಡೆಸಲು ಸಜ್ಜಾಗಿವೆ. ಈ ಮಧ್ಯೆ ಅಮೆರಿಕದೊಂಗಿಗೆ ಸುಂಕ ಒಪ್ಪಂದ ಮಾಡಿಕೊಳ್ಳಲು ಮುಂದಾಗಿರುವ ರಾಷ್ಟ್ರಗಳಿಗೆ ಚೀನಾ ಖಡಕ್ ಎಚ್ಚರಿಕೆಯ ಸಂದೇಶ ರವಾನಿಸಿದೆ.

ಅಮೆರಿಕದೊಂದಿಗೆ ಸುಂಕ ಒಪ್ಪಂದ ಮಾಡಿಕೊಳ್ಳಲು ಮುಂದಾಗಿರುವ ರಾಷ್ಟ್ರಗಳು,ಯಾವುದೇ ಕಾರಣಕ್ಕೂ ಚೀನಾದ ಹಿತಾಸಕ್ತಿಗಳಿಗೆ ಧಕ್ಕೆ ನೀಡಬಾರದು ಎಂದು ಡ್ರ್ಯಾಗನ್ ರಾಷ್ಟ್ರ ಗಂಭೀರ ಎಚ್ಚರಿಕೆ ನೀಡಿದೆ.

ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವಾಗ ಚೀನಾದ ಹಿತಾಸಕ್ತಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಿ. ಇಲ್ಲವಾದಲ್ಲಿ ನಿಮ್ಮೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧ ಹದಗೆಡಲಿದೆ ಎಂದು ಚೀನಾ ಈ ರಾಷ್ಟ್ರಗಳನ್ನು ಎಚ್ಚರಿಸಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಬೇರೆ ದೇಶಗಳ ಮೇಲೆ ಸುಂಕ ವಿಧಿಸುವ ಮೂಲಕ ಚೀನಾವನ್ನು ಹಣಿಯಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಚೀನಾ ಕೂಡ ಅಮೆರಿಕದ ಸರಕುಗಳ ಮೇಲೆ ಸುಂಕ ವಿಧಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ಯಾವುದೇ ದೇಶ ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡರೆ, ನಾವು ಅದನ್ನು ಒಪ್ಪುವುದಿಲ್ಲ ಎಂದು ಚೀನಾ ನೇರವಾಗಿ ಹೇಳಿದೆ.

ಅಮೆರಿಕದ ಸುಂಕ ಸಮರಕ್ಕೆ ಪ್ರತಿಯಾಗಿ, ಚೀನಾ ಇದೀಗ ತನ್ನ ವಾಣಿಜ್ಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮುಂದಾಗಿದೆ. ಯುಎಸ್-ಚೀನಾ ವ್ಯಾಪಾರ ಸಮರದಿಂದಾಗಿ ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಎದುರಾಗಿದ್ದು, ಜಾಗತಿಕ ಮಾರುಕಟ್ಟೆಗಳು ಕುಸಿಯುತ್ತಿವೆ. ಡೊನಾಲ್ಡ್ ಟ್ರಂಪ್ ಆಡಳಿತವು ಬೇರೆ ದೇಶಗಳಿಗೆ ಚೀನಾದೊಂದಿಗೆ ವ್ಯಾಪಾರವನ್ನು ಕಡಿಮೆ ಮಾಡಲು ಒತ್ತಡ ಹೇರುತ್ತಿದೆ. ಅಮೆರಿಕ ಮತ್ತು ಚೀನಾ ನಡುವೆ ಮಾತುಕತೆ ನಡೆಯುತ್ತಿದೆ. ಶೀಘ್ರದಲ್ಲೇ ಒಂದು ಒಳ್ಳೆಯ ಒಪ್ಪಂದಕ್ಕೆ ಬರುತ್ತೇವೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ. ಆದರೆ ಚೀನಾ ಮಾತ್ರ ವ್ಯಾಪಾರ ಸಮರದಲ್ಲಿ ಕೊನೆಯವರೆಗೂ ಹೋರಾಡಲು ಸಿದ್ಧ ಎಂಬ ಸಂದೇಶವನ್ನು ರವಾನಿಸಿದೆ.

- ಅಮೆರಿಕದ ವಾಣಿಜ್ಯ ಸಮರಕ್ಕೆ ಸಿಕ್ಕು ನಲುಗುತ್ತಿರುವ ಜಗತ್ತಿನ ಹಲವು ದೇಶಗಳಿಂದ ಸುಂಕ ಒಪ್ಪಂದ ಮಾತುಕತೆಗೆ ಸಿದ್ಧತೆ ಆರಂಭ
- ಚೀನಾದ ವಾಣಿಜ್ಯ ಹಿತಾಸಕ್ತಿಗಳಿಗೆ ಧಕ್ಕೆಯಾಗುವಂತಹ ಒಪ್ಪಂದ ಮಾಡಿಕೊಂಡರೆ ಸರಿ ಇರುವುದಿಲ್ಲ ಎಂದು ಎಚ್ಚರಿಸಿದ ಡ್ರ್ಯಾಗನ್ ರಾಷ್ಟ್ರ
- ಅಮೆರಿಕ-ಚೀನಾ ವಾಣಿಜ್ಯ ಸಮರದ ಮಧ್ಯೆ ಸಿಕ್ಕು ಒದ್ದಾಡುತ್ತಿವೆ ಜಗತ್ತಿನ ಹಲವಾರು ಸಣ್ಣಪುಟ್ಟ ರಾಷ್ಟ್ರಗಳು

ಅಮೆರಿಕದ ಏಕಪಕ್ಷೀಯ ನೀತಿಗಳನ್ನು ಟೀಕಿಸಿರುವ ಚೀನಾ, ಅಮೆರಿಕವು ಬಲವಂತವಾಗಿ ಸುಂಕ ವಿಧಿಸುತ್ತಿದೆ. ಬಲಿಷ್ಠರು ದುರ್ಬಲರನ್ನು ಬೇಟೆಯಾಡುವ ಕಾಡಿನ ಕಾನೂನು ಜಾರಿಗೆ ಬಂದರೆ, ಎಲ್ಲಾ ದೇಶಗಳು ಬಲಿಪಶುಗಳಾಗುತ್ತವೆ ಎಂದು ತೀವ್ರ ಅಸಮಾಧಾನ ಹೊರಹಾಕಿದೆ. ಚೀನಾವು ತನ್ನ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಬದ್ಧವಾಗಿದೆ. ಎಲ್ಲಾ ರಾಷ್ಟ್ರಗಳೊಂದಿಗೆ ಒಗ್ಗಟ್ಟಿನಿಂದ ಇರಲು ಸಿದ್ಧವಾಗಿದೆ ಎಂದು ಚೀನಾದ ವಾಣಿಜ್ಯ ಸಚಿವಾಲಯ ಹೇಳಿದೆ. ಚೀನಾ ಮತ್ತು ಅಮೆರಿಕ ನಡುವಿನ ವ್ಯಾಪಾರ ಸಮರ, ಜಾಗತಿಕ ಆರ್ಥಿಕತೆಗೆ ದೊಡ್ಡ ಅಪಾಯವಾಗಿದೆ. ಈ ಪರಿಸ್ಥಿತಿಯನ್ನು ಜಗತ್ತು ಹೇಗೆ ನಿಭಾಯಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

**ಸಮಾಧಾನದಿಂದ ಶಾಂತಿ ಸಿಗುವುದಿಲ್ಲ**

ಅಮೆರಿಕದ ಟ್ರಂಪ್ ಆಡಳಿತವು ಕೆಲವು ದೇಶಗಳೊಂದಿಗೆ ಸುಂಕ ಕಡಿಮೆ ಮಾಡುವ ಬಗ್ಗೆ ಮಾತುಕತೆ ನಡೆಸುತ್ತಿದೆ. ಆದರೆ ಚೀನಾವು ಬೇರೆ ದೇಶಗಳು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ವಿರೋಧಿಸುತ್ತಿದೆ. ಈ ಕುರಿತು ಮಾತನಾಡಿರುವ ಚೀನಾದ ವಾಣಿಜ್ಯ ಸಚಿವಾಲಯದ ವಕ್ತಾರ, ಸಮಾಧಾನದಿಂದ ಶಾಂತಿ ಸಿಗುವುದಿಲ್ಲ, ರಾಜಿ ಮಾಡಿಕೊಂಡರೆ ಗೌರವ ಸಿಗುವುದಿಲ್ಲ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

## 88 ನೇ ವಯಸ್ಸಿಗೆ ಇಹಲೋಕ ತ್ಯಜಿಸಿದ ಕ್ರೈಸ್ತ ಧರ್ಮ ಗುರು

**ವ್ಯಾಟಿಕನ್ ಸಿಟಿ:** ರೋಮನ್ ಕ್ಯಾಥೋಲಿಕ್ ಚರ್ಚ್‌ನ ಪೋಪ್ ಫ್ರಾನ್ಸಿಸ್ ಬೆಳಿಗ್ಗೆ ನಿಧನರಾದರು ಎಂದು ವ್ಯಾಟಿಕನ್ ಕ್ಯಾಮರ್ಲೆಂಗೊ ಕಾರ್ಡಿನಲ್ ಕೆವಿನ್ ಫೆರೆಲ್ ಘೋಷಿಸಿದ್ದಾರೆ. ವ್ಯಾಟಿಕನ್‌ನ ಕಾಸಾ ಸಾಂತಾ ಮಾರ್ತಾದಲ್ಲಿರುವ ಅವರ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

ಬೆಳಿಗ್ಗೆ 7:35 ಕ್ಕೆ ರೋಮ್‌ನ ಬಿಷಪ್ ಫ್ರಾನ್ಸಿಸ್ ಅವರು ಭೂಮಿಯನ್ನು ತೊರೆದು ತಮ್ಮ ತಂದೆಯ ಮನೆಗೆ ಮರಳಿದರು. ಅವರ ಇಡೀ ಜೀವನವು ಭಗವಂತನ ಮತ್ತು ಚರ್ಚ್‌ನ ಸೇವೆಗೆ ಸಮರ್ಪಿತವಾಗಿತ್ತು ಎಂದು ಫಾರೆಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೋಪ್ ಫ್ರಾನ್ಸಿಸ್ ಕೆಲ ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಹಲವು ತಿಂಗಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆ ನಂತರ ಮಾರ್ಚ್‌ನಲ್ಲಿ ಮನೆಗೆ ಮರಳಿದ್ದರು. ಇತ್ತೀಚೆಗೆ ಗುಡ್‌ಫ್ರೈಡೆ ದಿನ ಭಕ್ತರನ್ನು ಉದ್ದೇಶಿಸಿ ಮಾತನಾಡಿದ್ದರು.

**ಯೂರೋಪಿಯನ್ ಅಲ್ಲದ ಮೊದಲ ಬಿಷಪ್:** ಅಮೆರಿಕ ಅಥವಾ ದಕ್ಷಿಣ ಗೋಳಾರ್ಧದಿಂದ ಬಂದ ಮೊದಲ ಪೋಪ್ ಇವರಾಗಿದ್ದರು. ಸಿರಿಯನ್ ಮೂಲದ ಗ್ರೆಗೊರಿ 741 ರಲ್ಲಿ ನಿಧನರಾದ ನಂತರ ರೋಮ್‌ನ ಯುರೋಪಿಯನ್ ಅಲ್ಲದ ಬಿಷಪ್ ನೇಮಕವಾಗಿರಲಿಲ್ಲ. ಪೋಪ್ ಫ್ರಾನ್ಸಿಸ್ ಮೂಲ ಹೆಸರು ಜಾರ್ಜ್ ಮಾರಿಯೋ ಬರ್ಗೊಗ್ಲಿಯೊ ಎಂದಾಗಿತ್ತು. 2013ರಲ್ಲಿ ಪೋಪ್ ಆಗಿ ನೇಮಕವಾದರು.




ನಮ್ರತೆ ಮತ್ತು ಸುಧಾರಣೆಗಳಿಗೆ ಹೆಸರುವಾಸಿಯಾದ ಅವರು ಸಾಮಾಜಿಕ ನ್ಯಾಯ ಮತ್ತು ನಂಬಿಕೆಗಳ ನಡುವಿನ ಏಕತೆಯನ್ನು ಪ್ರತಿಪಾದಿಸುತ್ತಿದ್ದರು. ಅವರ ಅಧಿಕಾರಾವಧಿಯಲ್ಲಿ ಗಮನಾರ್ಹವಾದ ಸಂಪರ್ಕ, ನೀತಿ ಬದಲಾವಣೆಗಳಾಗಿದ್ದವು.

ಗಾಜಾದ ಜನರು ಮತ್ತು ಅದರ ಕ್ರಿಶ್ಚಿಯನ್ ಸಮುದಾಯದ ಬಗ್ಗೆ ಚಿಂತೆ ಮಾಡುತ್ತಿದ್ದೇನೆ.

**ಗುಡ್‌ಫ್ರೈ ಡೇ ಹಿನ್ನೆಲೆ ಪೋಲ್ ಸೈಂಟ್ ಪೀಟರ್ ಬೆಸಿಲಿಕದಲ್ಲಿ ಗಾಲಿ ಕುರ್ಚಿಯಲ್ಲಿಯೇ ಕುಳಿತು ಭಕ್ತರಿಗೆ ದರ್ಶನ ನೀಡಿದರು. ಭಾಷಣ ಕೇಳಲು ಸಂತ ಪೀಟರ್ಸ್ ಚೌಕದಲ್ಲಿ ಸುಮಾರು 35 ಸಾವಿರ ಮಂದಿ ಸೇರಿದ್ದರು. ವಿಶ್ವದಲ್ಲಿ ಹೆಚ್ಚಾಗುತ್ತಿರುವ ಯಹೂದಿ ವಿರೋಧಿ ವಾತಾವರಣ ಆತಂಕಕಾರಿ ಎಂದು ಹೇಳಿದ್ದ ಪೋಪ್, ಗಾಜಾದ ಯುದ್ಧ ಪರಿಸ್ಥಿತಿಯನ್ನು ಖಂಡಿಸಿ, ಕದನ ವಿರಾಮಕ್ಕೆ ಕರೆ ಕೊಟ್ಟಿದ್ದರು.**

ಭೀಕರ ಸಂಘರ್ಷವು ಸಾವು ಮತ್ತು ವಿನಾಶಕ್ಕೆ ಕಾರಣವಾಗುತ್ತಿದೆ. ಶೋಚನೀಯ ಮಾನವೀಯ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದೆ ಎಂದು ಪೋಪ್ ಬೇಸರ ವ್ಯಕ್ತಪಡಿಸಿದ್ದರು.


## ಭೂಕುಸಿತ: ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿ ಬಂದ್



**ರಾಂಬನ್:** ಭೂಕುಸಿತದಿಂದಾಗಿ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿ 2ನೇ ದಿನವೂ ಮುಚ್ಚಲ್ಪಟ್ಟಿದ್ದು, 20 ಸ್ಥಳಗಳಲ್ಲಿ ನಡೆಯುತ್ತಿರುವ ರಸ್ತೆ ತೆರವು ಕಾರ್ಯಾಚರಣೆ ಸುಮಾರು 6 ದಿನಗಳು ತೆಗೆದು ಕೊಳ್ಳಬಹುದು ಎಂದು ಎನ್‌ಎಚ್‌ಎಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ರಾಂಬನ್ ಜಿಲ್ಲೆಯಲ್ಲಿ ನಿನ್ನೆ ಭಾರಿ ಮಳೆ ಮತ್ತು ಮೋಡದ ಸ್ಫೋಟದಿಂದಾಗಿ ಹಠಾತ್ ಪ್ರವಾಹ, ಭೂಕುಸಿತ ಸಂಭವಿಸಿದ ನಂತರ ಕಾಶ್ಮೀರವನ್ನು ದೇಶದ ಉಳಿದ ಭಾಗಗಳೊಂದಿಗೆ ಸಂಪರ್ಕಿಸುವ ಏಕೈಕ ಸರ್ವಋತು ರಸ್ತೆಯಾದ 250 ಕಿಲೋಮೀಟರ್ ಉದ್ದದ ಹೆದ್ದಾರಿಯಲ್ಲಿ ನೂರಾರು ವಾಹನಗಳು ಸಿಲುಕಿಕೊಂಡಿವೆ.

ಹೀಗಾಗಲೆ 100 ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ, ನೈಸರ್ಗಿಕ ವಿಕೋಪವು ರಸ್ತೆಗಳು ಮತ್ತು ವಸತಿ ಕಟ್ಟಡಗಳು ಸೇರಿದಂತೆ ಮೂಲಸೌಕರ್ಯಗಳಿಗೆ ಭಾರಿ ಹಾನಿಯನ್ನುಂಟುಮಾಡಿದೆ. ಹಲವಾರು ವಾಹನಗಳು ಸಹ ಅವಶೇಷಗಳ ಅಡಿಯಲ್ಲಿ ಹೂತುಹೋಗಿವೆ ಎಂದು ಅಧಿಕಾರಿ ತಿಳಿಸಿದ್ದಾರೆ. ಸೆರಿ ಮತ್ತು ಮಾರೂಗ್ ನಡುವಿನ ನಾಲ್ಕು ಕಿಲೋಮೀಟರ್ ವ್ಯಾಪ್ತಿಯ ಹೆದ್ದಾರಿಯಲ್ಲಿ 12ಕ್ಕೂ ಹೆಚ್ಚು ಸ್ಥಳಗಳಲ್ಲಿ, ಬೃಹತ್ ಪ್ರಮಾಣದಲ್ಲಿ ಕೆಸರು ಸಂಗ್ರಹವಾಗಿರುವುದರಿಂದ ನಾವು ಸವಾಲಿನ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಕೆಲವು ಸ್ಥಳಗಳಲ್ಲಿ ಕೆಸರಿನ ಎತ್ತರ 20 ಅಡಿಗಳಿಗಿಂತ ಹೆಚ್ಚು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಯೋಜನಾ ನಿರ್ದೇಶಕ ಪುರುಷೋತ್ತಮ್ ಕುಮಾರ್ ಮಾಧ್ಯಮಕ್ಕೆ ತಿಳಿಸಿದ್ದಾರೆ. ಮಣ್ಣು ತೆಗೆಯುವ ಯಂತ್ರೋಪಕರಣಗಳು ಸೇರಿದಂತೆ ಸಂಸ್ಥೆಯ ಪ್ರಮುಖ ಯಂತ್ರೋಪಕರಣಗಳು ಅವಶೇಷಗಳ ಅಡಿಯಲ್ಲಿ ಹೂತುಹೋಗಿವೆ ಎಂದು ಅವರು ಹೇಳಿದರು.

## ಎನ್‌ಕೌಂಟರ್‌ನಲ್ಲಿ ಎಂಟು ನಕ್ಸಲರ ಹತ



**ರಾಂಚಿ:** ಬೆಳಿಗ್ಗೆ ಜಾರ್ಖಂಡ್ನನ ಬೊಕಾರೊ ಜಿಲ್ಲೆಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಮತ್ತು ಪೊಲೀಸರೊಂದಿಗೆ ನಡೆದ ಎನ್ ಕೌಂಟರ್‌ನಲ್ಲಿ ಎಂಟು ನಕ್ಸಲರು ಸಾವನ್ನಪ್ಪಿದ್ದಾರೆ.

ಜಿಲ್ಲೆಯ ಲಾಲ್‌ವಾನಿಯಾ ಪ್ರದೇಶದ ಲುಗು ಬೆಟ್ಟಗಳಲ್ಲಿ ಬೆಳಿಗ್ಗೆ 5.30 ರ ಸುಮಾರಿಗೆ ಗುಂಡಿನ ಚಕಮಕಿ ಪ್ರಾರಂಭವಾಯಿತು ಎಂದು ಅವರು ಅಧಿಕಾರಿಗಳು ತಿಳಿಸಿದ್ದಾರೆ. ಕೋಬ್ರಾ ಪಡೆಗಳು ಕಾರ್ಯಾಚರಣೆಯನ್ನು ನಡೆಸಿದ್ದು, ಇದರಲ್ಲಿ ಎಂಟು ನಕ್ಸಲರು ಸಾವನ್ನಪ್ಪಿದ್ದಾರೆ, 5 ರೈಫಲ್, ಎಂಟು ದೇಶೀಯ ನಿರ್ಮಿತ ಬಂದೂಕುಗಳು ಮತ್ತು ಒಂದು ಪಿಸ್ತೂಲ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಕೋಬ್ರಾ, ಸಿಆರ್‌ಪಿಎಫ್‌ನ ವಿಶೇಷ ಅರಣ್ಯ ಯುದ್ಧ ಘಟಕವಾಗಿದ್ದು,ಗುಂಡಿನ ಚಕಮಕಿಯಲ್ಲಿ ಭದ್ರತಾ ಸಿಬ್ಬಂದಿಗೆ ಯಾವುದೇ ಗಾಯಗಳಾಗಿರುವ ವರದಿಯಾಗಿಲ್ಲ ಎಂದು ಅವರು ಹೇಳಿದರು. ಈ ಕಾರ್ಯಾಚರಣೆಯು ಮಾರ್ಚ್- 2026 ರೊಳಗೆ ದೇಶದಿಂದ ನಕ್ಸಲ್‌ವಾದವನ್ನು ನಿರ್ಮೂಲನೆ ಮಾಡುವ ಕೇಂದ್ರ ಸರ್ಕಾರದ ಘೋಷಣೆಯ ಭಾಗವಾಗಿದೆ.

ಇನ್ನೊಂದು ಬೆಳವಣಿಗೆಯಲ್ಲಿ, ನೆರೆಯ ಛತ್ತೀಸ್‌ಗಢದ ಮುಖ್ಯಮಂತ್ರಿ ವಿಷ್ಣುದಿಯೋ ಸಾಯಿ ಅವರು ಸಂಜೆ ನವದೆಹಲಿಯ ನಾರ್ತ್ ಬ್ಲಾಕ್‌ನಲ್ಲಿರುವ ತಮ್ಮ ಕಚೇರಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳು, ಸಂಬಂಧಿತ ವಿಷಯಗಳ ಸಮಗ್ರ ಪರಿಶೀಲನೆ ನಡೆಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಭಾರತಕ್ಕೆ ಬಂದಿಳಿದ ಅಮೆರಿಕ ಉಪಾಧ್ಯಕ್ಷ ವ್ಯಾನ್ಸ್



**ನವದೆಹಲಿ:** ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ಅವರ ಪತ್ನಿ ಉಷಾ ಬೆಳಿಗ್ಗೆ ದೆಹಲಿಗೆ ಆಗಮಿಸಿದರು. ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ವಿಮಾನ ನಿಲ್ದಾಣದಲ್ಲಿ ವ್ಯಾನ್ಸ್ ಅವರನ್ನು ಸ್ವಾಗತಿಸಿದರು. ದೆಹಲಿಯಲ್ಲದೆ, ವ್ಯಾನ್ಸ್ ಮತ್ತು ಅವರ ಕುಟುಂಬವು ನಾಲ್ಕು ದಿನಗಳ ಭಾರತ ಪ್ರವಾಸದಲ್ಲಿ ಜೈಪುರ ಮತ್ತು ಆಗ್ರಾಕ್ಕೆ ಪ್ರಯಾಣಿಸಲಿದೆ.

ಇಂದು ಸಂಜೆ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಉಪಾಧ್ಯಕ್ಷರೊಂದಿಗೆ ಮಾತುಕತೆ ನಡೆಸಿದ ನಂತರ ವ್ಯಾನ್ಸ್ ದಂಪತಿಗೆ ಔತಣಕೂಟ ಏರ್ಪಡಿಸಲಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ಸೇರಿದಂತೆ ಸುಮಾರು 60 ದೇಶಗಳ ವಿರುದ್ಧ ವ್ಯಾಪಕ ಸುಂಕ ಆಡಳಿತವನ್ನು ಹೇರಿದ ಮತ್ತು ನಂತರ ವಿರಾಮ ನೀಡಿದ ವಾರಗಳ ನಂತರ ವ್ಯಾನ್ಸ್ ಅವರ ಮೊದಲ ಭಾರತ ಭೇಟಿ ಬಂದಿದೆ. ನವದೆಹಲಿ ಮತ್ತು ವಾಷಿಂಗ್ಟನ್ ಈಗ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುದ್ರೆ ಹಾಕಲು ಮಾತುಕತೆ ನಡೆಸುತ್ತಿವೆ. ಇದು ಸುಂಕ ಮತ್ತು ಮಾರುಕಟ್ಟೆ ಪ್ರವೇಶ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸುವ ನಿರೀಕ್ಷೆಯಿದೆ. ಯುಎಸ್ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ದ್ವಿತೀಯ ಮಹಿಳೆ ಉಷಾ ಅವರ ಆಗಮನಕ್ಕೆ ಮುಂಚಿತವಾಗಿ ದೆಹಲಿಯಾದ್ಯಂತ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಲ್ಲವೂ ಸುಗಮವಾಗಿ ನಡೆಯುತ್ತದೆ ಮತ್ತು ಭೇಟಿಯ ಸಮಯದಲ್ಲಿ ಯಾವುದೇ ಅಹಿತಕರ ಘಟನೆ ನಡೆಯುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ದೆಹಲಿಯ ವಿವಿಧ ಪ್ರದೇಶಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ಯುಎಸ್ ಉಪಾಧ್ಯಕ್ಷರು ತೆಗೆದುಕೊಳ್ಳುವ ಮಾರ್ಗಗಳು ಸ್ಪಷ್ಟವಾಗಿರುವುದನ್ನು ದೆಹಲಿ ಸಂಚಾರ ಪೊಲೀಸರು ಖಚಿತಪಡಿಸಿಕೊಳ್ಳುತ್ತಾರೆ ಎಂದು ಅವರು ಹೇಳಿದರು.

**ಉನ್ನತ ಮಟ್ಟದ ಭೇಟಿ**

ವ್ಯಾನ್ಸ್ ಅವರ ಭಾರತೀಯ ಮೂಲದ ಪತ್ನಿ ಉಷಾ ಮತ್ತು ಅವರ ಮೂವರು ಮಕ್ಕಳಾದ ಇವಾನ್, ವಿವೇಕ್ ಮತ್ತು ಮೀರಾಬೆಲ್ ನಾಲ್ಕು ದಿನಗಳ ಭಾರತ ಭೇಟಿಗಾಗಿ ಬೆಳಿಗ್ಗೆ 10 ಗಂಟೆ ಸುಮಾರಿಗೆ ಪಾಲಂ ವಾಯುನೆಲೆಗೆ ಬಂದಿಳಿದರು. ಯುಎಸ್ ಉಪಾಧ್ಯಕ್ಷರ ಉನ್ನತ ಮಟ್ಟದ ಭೇಟಿಗಾಗಿ ಭದ್ರತಾ ಪ್ರೋಟೋಕಾಲ್ ಪ್ರಕಾರ ನಾವು ಈಗಾಗಲೇ ಅಣಕು ಅಭ್ಯಾಸಗಳನ್ನು ನಡೆಸಿದ್ದೇವೆ.

## ಅನೈತಿಕ ಸಂಬಂಧ, ವರದಕ್ಷಿಣೆ ಕಿರುಕುಳ

### ಕ್ರಿಕೆಟಿಗನ ವಿರುದ್ಧ ಪತ್ನಿ ಪೊಲೀಸ್ ದೂರು



**ಮುಂಬೈ:** ಭಾರತೀಯ ಕ್ರಿಕೆಟ್ ನಲ್ಲಿ ಮತ್ತೊಂದು ದಂಪತಿಗಳ ನಡುವೆ ವಿರಸ ಏರ್ಪಟ್ಟಿದ್ದು, ಒಂದು ಕಾಲದ ಟೀಂ ಇಂಡಿಯಾ ಸ್ಟಾರ್ ಕ್ರಿಕೆಟಿಗ ತನಗೆ ವರದಕ್ಷಿಣ ಕಿರುಕುಳ ನೀಡುತ್ತಿದ್ದು, ಅನೇಕ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾರೆ ಎಂದು ಪತ್ನಿ ಪೊಲೀಸ್ ದೂರು ನೀಡಿದ್ದಾರೆ.

ಸ್ಟಾರ್ ಕ್ರಿಕೆಟಿಗನ ಕುಟುಂಬಸ್ಥರು ಹಣಕ್ಕಾಗಿ ತನಗೆ ನಿತ್ಯ ಕಿರುಕುಳ ನೀಡುತ್ತಿದ್ದಾರೆ. ಅಲ್ಲದೆ, ಆತ ಕೂಡ ಅನೇಕ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾರೆ. ಇದರಿಂದಲೇ ನಿತ್ಯ ತನಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಪತ್ನಿ ಆರೋಪಿಸಿದ್ದಾರೆ.

ಇಷ್ಟಕ್ಕೂ ಯಾರು ಆ ಸ್ಟಾರ್ ಕ್ರಿಕೆಟಿಗ ಎಂದರೆ.. ಅದು ಬೇರಾರು ಅಲ್ಲ.. ಒಂದು ಕಾಲದ ಭಾರತ ಕ್ರಿಕೆಟ್ ತಂಡದ ಸ್ಟಾರ್ ಸ್ಪಿನ್ನರ್ ಅಮಿತ್ ಮಿಶ್ರಾ.. ಹೌದು... ಅಮಿತ್ ಮಿಶ್ರಾ ಮತ್ತು ಅವರ ಪತ್ನಿ ಗರಿಮಾ ನಡುವೆ ಕೌಟುಂಬಿಕ ಕಲಹ ಏರ್ಪಟ್ಟಿದ್ದು, ಇದು ಇದೀಗ ಹಾದಿರಂಪ ಬೀದಿ ರಂಪವಾಗಿದೆ. ಅಮಿತ್ ಮಿಶ್ರಾ ಪತ್ನಿ ಗರಿಮಾ ಇದೀಗ ನೇರವಾಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಅಮಿತ್ ಮಿಶ್ರಾ ಮತ್ತು ಅವರ ಕುಟುಂಬಸ್ಥರ ವಿರುದ್ಧ ದೂರು ನೀಡಿದ್ದಾರೆ.

ದೂರಿನಲ್ಲಿ ಅಮಿತ್ ಮಿಶ್ರಾ ಹಾಗೂ ಅವರ ಕುಟುಂಬಸ್ಥರು ಹಣಕ್ಕಾಗಿ ಕಿರುಕುಳ ನೀಡುತ್ತಿದ್ದಾರೆ ಎಂದು ಗರಿಮಾ ಆರೋಪಿಸಿದ್ದಾರೆ. ಅಲ್ಲದೆ, ಅಮಿತ್ ಮಿಶ್ರಾ ಅನೇಕ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾರೆ ಎಂಬ ಆರೋಪವನ್ನೂ ಗರಿಮಾ ಮಾಡಿದ್ದಾರೆ.

**ಅನೈತಿಕ ಸಂಬಂಧ ಪ್ರಶ್ನಿಸಿದ್ದಕ್ಕೆ ಹಲ್ಲೆ:** ಇನ್ನು ಅಮಿತ್ ಮಿಶ್ರಾ ತನ್ನನ್ನು ಹಲವು ಬಾರಿ ಹೊಡೆದಿದ್ದಾರೆ ಎಂದು ಆರೋಪಿಸಿರುವ ಪತ್ನಿ ಗರಿಮಾ, 'ಅಮಿತ್ ಇತರ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದಿರುವುದನ್ನು ನಾನು ನಾಲ್ಕು ತಿಂಗಳ ಹಿಂದೆ ವಿರೋಧಿಸಿದೆ. ಆಗ ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದರು. ಹೀಗಾಗಿ ನಾನು ಪ್ರಸ್ತುತ ತಮ್ಮ ತಾಯಿಯ ಮನೆಯಲ್ಲಿ ವಾಸಿಸುತ್ತಿದ್ದೇನೆ' ಎಂದು ಆರೋಪಿಸಿದ್ದಾರೆ.

ಅಲ್ಲದೆ ಅಮಿತ್ ಮತ್ತು ಅವರ ಕುಟುಂಬಸ್ಥರು, 'ಹೋಂಡಾ ಸಿಟಿ ಕಾರು ಮತ್ತು 10 ಲಕ್ಷ ರೂಪಾಯಿ ತರುವಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ಗರಿಮಾ ಆರೋಪಿಸಿದ್ದಾರೆ. ಈ ಕುರಿತು ಪೊಲೀಸ್ ಆಯುಕ್ತರ ಬಳಿಯೂ ಗರಿಮಾ ದೂರು ನೀಡಿರುವುದಾಗಿ ವರದಿಯಾಗಿದೆ.

### ಉದ್ಯೋಗ ಕಡಿತ, ಆರ್ಥಿಕ ನೀತಿಗಳು ಮತ್ತು ನಾಗರಿಕ ಸ್ವಾತಂತ್ರ್ಯ ಉಲ್ಲಂಘನೆಯ ಬಗ್ಗೆ ಕಳವಳ

## ರಾಜರ ಆಳ್ವಿಕೆ ಬೇಡ, ಟ್ರಂಪ್ ಹಿಟ್ಲರ್‌ಗಿಂತಲೂ ಮೂರ್ಖ




**ವಾಷಿಂಗ್ಟನ್ ಡಿಸಿ:** ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಆಡಳಿತ ನೀತಿಗಳ ವಿರುದ್ಧ ಸಾವಿರಾರು ಜನರು ಪ್ರತಿಭಟನೆ ನಡೆಸಿದರು. ನ್ಯೂಯಾರ್ಕ್, ವಾಷಿಂಗ್ಟನ್ ಸೇರಿದಂತೆ ಹಲವು ನಗರಗಳಲ್ಲಿ ಈ ಪ್ರತಿಭಟನೆಗಳು ನಡೆದವು. ಆಡಳಿತವು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದು ಲಕ್ಷಾಂತರ ಜನರು ಪ್ರತಿಭಟಿಸದರು.

ಕಳೆದ ಕೆಲ ವಾರಗಳ ಹಿಂದೆಯೂ ಮಾಜಿ ಸೈನಿಕರು, ಚುನಾವಣೆಯಲ್ಲಿ ಟ್ರಂಪ್ ವಿರುದ್ಧ ಪ್ರಚಾರ ನಡೆಸಿದವರು, ನಾಗರಿಕ ಹಕ್ಕುಗಳ ಮತ್ತು ಕಾರ್ಮಿಕ ಸಂಘಟನೆಗಳು, ಎಲ್‌ಜಿಬಿಟಿಕ್ಯು ಸಮುದಾಯ ಸೇರಿದಂತೆ 150ಕ್ಕೂ ಹೆಚ್ಚು ಸಂಘಟನೆಗಳು ಪಾಲ್ಗೊಂಡು ಟ್ರಂಪ್ ವಿರುದ್ಧ ಸಮರ ಸಾರಿದ್ದರು. ಈ ಬಾರಿಯೂ ಟ್ರಂಪ್ ವಿರುದ್ಧ ಸಮರ ಸಾರಿದ್ದು, 400 ಪ್ರತಿಭಟನಾ ರ್‍ಯಾಲಿಗಳನ್ನು ಯೋಜಿಸಲಾಗಿತ್ತು. ಪ್ರತಿಭಟನಾಕಾರರು ಫೆಡರಲ್ ಉದ್ಯೋಗ ಕಡಿತ, ಆರ್ಥಿಕ ನೀತಿಗಳು ಮತ್ತು ನಾಗರಿಕ ಸ್ವಾತಂತ್ರ್ಯ ಉಲ್ಲಂಘನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರು.

**ಸಿಡಿದೆದ್ದ ಅಮೆರಿಕದ ಜನ**

ನ್ಯೂಯಾರ್ಕ್ ನಗರದ ಮುಖ್ಯ ಗ್ರಂಥಾಲಯದ ಹೊರಗೆ ಜಮಾಯಿಸಿದ ಜನರು,ಅಮೆರಿಕಾದಲ್ಲಿ ರಾಜರ ಆಳ್ವಿಕೆ ಬೇಡ, ದಬ್ಬಾಳಿಕೆಯನ್ನು ವಿರೋಧಿಸಿ ಎಂಬ ಘೋಷಣೆಗಳನ್ನು ಕೂಗಿದರು.

**ಟ್ರಂಪ್ ಹಿಟ್ಲರ್‌ಗಿಂತಲೂ ಮೂರ್ಖ**

ನ್ಯೂಯಾರ್ಕ್‌ನ ಪ್ರತಿಭಟನಾಕಾರರಾದ 73 ವರ್ಷದ ಕ್ಯಾಥಿ ವ್ಯಾಲಿ, ಟ್ರಂಪ್ ಅವರನ್ನು ಹಿಟ್ಲರ್‌ಗೆ ಹೋಲಿಸಿದರು. ಟ್ರಂಪ್ ಹಿಟ್ಲರ್ ಗಿಂತಲೂ ಮೂರ್ಖ ಎಂದು ಅವರು ಹೇಳಿದರು. ಅವರ ಸ್ವಂತ ತಂಡವೇ ಒಡೆದಿದೆ ಎಂದು ವ್ಯಾಲಿ ಟೀಕಿಸಿದರು.

ಕೆಫಿಯೆಹ್ ಧರಿಸಿದ್ದ ಡಗ್ಲಾಸ್, ಮಹಮೂದ್ ಖಲೀಲ್ ಎಂಬ ವಿದ್ಯಾರ್ಥಿಯನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿದರು. ಖಲೀಲ್ ಪ್ಯಾಲೆಸ್ತೀನ್ ಪರವಾಗಿ ಪ್ರತಿಭಟನೆ ನಡೆಸಿದ್ದಕ್ಕಾಗಿ ಬಂಧನಕ್ಕೊಳಗಾಗಿದ್ದರು. ಟ್ರಂಪ್ ಆಡಳಿತವು ವಿದೇಶಿ ದ್ವೇಷವನ್ನು ಹರಡಲು ಪ್ರಯತ್ನಿಸುತ್ತಿದೆ ಎಂದು ಡಗ್ಲಾಸ್ ಆರೋಪಿಸಿದರು.

**ಟೆಕ್ಸಾಸ್‌ನಲ್ಲಿ ದಡಾರ ರೋಗ**

ಡಾನಿಯೆಲ್ಲಾ ಬಟ್ಲರ್ ಎಂಬುವವರು ಸರ್ಕಾರದ ವಿಜ್ಞಾನ ಮತ್ತು ಆರೋಗ್ಯ ಕಾರ್ಯಗಳಿಗೆ ಹಣ ಕಡಿತ ಮಾಡುವ ಬಗ್ಗೆ ಗಮನ ಸೆಳೆದರು. ಜಾನ್ಸ್ ಹಾಪ್ಕಿನ್ಸ್ ವಿಶ್ವವಿದ್ಯಾಲಯದಲ್ಲಿ ರೋಗನಿರೋಧಕ ಶಾಸ್ತ್ರದಲ್ಲಿ ಪಿಎಚ್‌ಡಿ ಮಾಡುತ್ತಿರುವ ಅವರು, ಟೆಕ್ಸಾಸ್‌ನ ನಕ್ಷೆಯನ್ನು ಹಿಡಿದಿದ್ದರು. ಟೆಕ್ಸಾಸ್ ನಲ್ಲಿ ದಡಾರ ರೋಗ ಹರಡುತ್ತಿರುವುದನ್ನು ಅವರು ತೋರಿಸುತ್ತಿದ್ದರು.

ಟ್ರಂಪ್ ಅವರ ವಲಸೆ ನೀತಿ, ಸರ್ಕಾರಿ ಸಂಸ್ಥೆಗಳಿಗೆ ಹಣ ಕಡಿತ ಮತ್ತು ಮಾಧ್ಯಮಗಳ ಮೇಲೆ ಒತ್ತಡ ಹೇರುವ ಕ್ರಮಗಳನ್ನು ವಿರೋಧಿಸಿ ಈ ಪ್ರತಿಭಟನೆಗಳನ್ನು ಆಯೋಜಿಸಲಾಗಿತ್ತು. ಈ ಪ್ರತಿಭಟನೆಗಳು ಒಂದು ದೊಡ್ಡ ಚಳುವಳಿಯ ರೂಪ ಪಡೆಯಬಹುದು ಎಂದು ಆಯೋಜಕರು ಭಾವಿಸಿದ್ದಾರೆ.

ಪ್ರತಿಭಟನೆಗಳು ಟ್ರಂಪ್ ಆಡಳಿತದ ವಿರುದ್ಧದ ಅಸಮಾಧಾನವನ್ನು ತೋರಿಸುತ್ತವೆ. ಈ ಪ್ರತಿಭಟನೆಗಳು ಟ್ರಂಪ್ ಅವರ ನೀತಿ ವಿರೋಧಿಸುವವರು ಒಗ್ಗೂಡುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ.

**ವಲಸಿಗರು ಇಲ್ಲಿಗೆ ಬರಬಹುದು**

ಅಮೆರಿಕ ಇಮಿಗ್ರೇಷನ್ ಕಷ್ಟಮ್ ಅಧಿಕಾರಿಗಳ ಬೇಡ, ಭಯ ಬೇಡ, ವಲಸಿಗರು ಇಲ್ಲಿಗೆ ಬರಬಹುದು ಎಂದು ಘೋಷಣೆಗಳನ್ನು ಕೂಗಿ ಭರವಸೆ ನೀಡಿದರು. ವಾಷಿಂಗ್ಟನ್‌ನಲ್ಲಿ ಪ್ರತಿಭಟನಕಾರರು ಟ್ರಂಪ್ ಆಡಳಿತದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಟ್ರಂಪ್ ಅವರು ಸಂವಿಧಾನದ ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆ ಎಂದು ಆರೋಪಿಸಿದರು. ಸರ್ಕಾರವು ಜನರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ಬೆಂಜಮಿನ್ ಡಗ್ಲಾಸ್ ಎಂಬುವವರು ಹೇಳಿದರು.

# ಐಶ್ವರ್ಯಾ ರೈ ಜೊತೆ 2ನೇ ಮಗು ಮಾಡ್ಕೋತೀರಾ



ಬಾಲಿವುಡ್ ಸ್ಟಾರ್ ನಟರಾದ ಅಭಿಷೇಕ್ ಬಚ್ಚನ್ ಮತ್ತು ಐಶ್ವರ್ಯಾ ರೈ ಕಾರಣಾಂತರಗಳಿಂದ ದೂರ ದೂರ ಇದ್ದಾರೆ. ಈ ನಡುವೆ ಕಾರ್ಯಕ್ರಮವೊಂದರಲ್ಲಿ ಐಶ್ವರ್ಯಾ ಜೊತೆ ಎರಡನೇ ಮಗು ಮಾಡಿಕೊಳ್ಳುತ್ತೀರಾ ಎಂಬ ಪ್ರಶ್ನೆಗೆ ಅಭಿಷೇಕ್ ನಾಚಿನೀರಾದ ಪ್ರಸಂಗ ನಡೆದಿದೆ.



ವರ್ಷಗಳ ಹಿಂದಿನ ಕಾರ್ಯಕ್ರಮದ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಈಗ ವೈರಲ್ ಆಗಿದೆ. ಒಮ್ಮೆ ಅಭಿಷೇಕ್ ಬಚ್ಚನ್, ರಿತೇಶ್ ದೇಶ್ಮುಖ್ ಅವರ 'ಕೇಸ್ ತೋ ಬಂತಾ ಹೈ' ಕಾರ್ಯಕ್ರಮದಲ್ಲಿ ಮಾತನಾಡಿದ್ದರು. ಆ ವೇಳೆ, ಐಶ್ವರ್ಯಾ ರೈ ಜೊತೆ ಎರಡನೇ ಮಗು ಮಾಡಿಕೊಳ್ತೀರಾ ಎಂದು ತಮಾಷೆಯಾಗಿ ಪ್ರಶ್ನೆ ಕೇಳಲಾಯಿತು. ಆಗ ಅಭಿಷೇಕ್ ನಾಚಿಕೆ ಪಟ್ಟುಕೊಂಡರು.


ರಿತೇಶ್ ಮಾತನಾಡುತ್ತಾ, 'ಅಮಿತಾಬ್ ಜೀ.. ಐಶ್ವರ್ಯ, ಆರಾಧ್ಯ ಮತ್ತು ನೀವು ಅಭಿಷೇಕ್. ಹೆಸರುಗಳು ಎ ಅಕ್ಷರದಿಂದ ಪ್ರಾರಂಭವಾಗುತ್ತವೆ. ಹಾಗಾದರೆ, ಜಯಾ ಬಚ್ಚನ್, ಶ್ವೇತಾ ಅವರು ಏನು ಮಾಡಿದರು' ಎಂದು ಕೇಳುತ್ತಾರೆ. ಅದಕ್ಕೆ ಅಭಿಷೇಕ್ ಪ್ರತಿಕ್ರಿಯಿಸಿ, 'ಇದನ್ನು ಅವರ ಬಳಿಯೇ ಕೇಳಬೇಕು' ಎನ್ನುತ್ತಾರೆ. ಮುಂದುವರಿದು ರಿತೀಶ್, 'ಆರಾಧ್ಯ ನಂತರ' ಎಂದು ತಮಾಷೆಯಾಗಿ ಕೇಳುತ್ತಾರೆ. ಅಭಿಷೇಕ್ ನಸುನಗುತ್ತಾ, 'ಇಲ್ಲ, ಮುಂದಿನ ಮಗು ವಿಚಾರ ಬಂದಾಗ ನೋಡೋಣ' ಎಂದು ನಾಚಿಕೆಯಿಂದ ಉತ್ತರಿಸಿದ್ದಾರೆ.



ಐಪಿಎಲ್‌ನಲ್ಲಿ ರಾಹುಲ್ ಪರಾಕ್ರಮ

# ಹೊಸ ಮಾರಿಗುಡಿಗೆ ಬಾಲಿವುಡ್ ಖ್ಯಾತ ನಟ ಸುನೀಲ್ ಶೆಟ್ಟಿ ಭೇಟಿ

ಬಾಲಿವುಡ್‌ನ ಖ್ಯಾತ ನಟ ಸುನೀಲ್ ಶೆಟ್ಟಿ ಕುಟುಂಬ ಸಮೇತ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಹೊಸ ಮಾರಿಗುಡಿಗೆ ಭೇಟಿ ಕೊಟ್ಟರು.



ಇತ್ತೀಚೆಗಷ್ಟೇ ಬ್ರಹ್ಮಕಲಶೋತ್ಸವದ ಮೂಲಕ ಹೊಸ ಮೆರುಗು ಪಡೆದಿರುವ ದೇವಾಲಯವನ್ನು ಕಂಡು ಖುಷಿಪಟ್ಟರು. ದೇವಾಲಯದ ನಿರ್ಮಾಣ ಹಾಗೂ ಇಲ್ಲಿನ ಶಿಲ್ಪಗಳ ರಚನೆಯನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಬಪ್ಪನಾಡಿನಲ್ಲಿ ನಡೆಯುತ್ತಿರುವ ಉತ್ಸವದ ಪ್ರಯುಕ್ತ ತಾಯಿಯ ಜೊತೆ ಸುನೀಲ್ ಶೆಟ್ಟಿ ತುಳುನಾಡಿಗೆ ಬಂದಿದ್ದರು. ಮೂಲತಃ ಮುಲ್ಕಿಯವರಾದ ಸುನೀಲ್ ಶೆಟ್ಟಿ ಇದೇ ವೇಳೆ ಕಾಪು ಕ್ಷೇತ್ರಕ್ಕೆ ಭೇಟಿಕೊಟ್ಟು, ತಾಯಿಗೆ ಮಾರಿಯಮ್ಮನ ದರ್ಶನ ಮಾಡಿಸಿದರು. ಈ ವೇಳೆ ಸುನೀಲ್ ಶೆಟ್ಟಿಯ ಅನೇಕ ಬಂಧುಗಳು ಜೊತೆಗಿದ್ದರು. ಅವರು ದೇಗುಲಕ್ಕೆ ಭೇಟಿ ಕೊಟ್ಟ ವೇಳೆಯಲ್ಲಿ ಪೂಜೆ ಕೂಡ ನಡೆದು, ಅದರಲ್ಲಿ ಭಾಗಿಯಾಗಿ ಪ್ರಸಾದ ಸ್ವೀಕರಿಸಿದರು. ದೇಗುಲದ ವತಿಯಿಂದ ಸುನೀಲ್ ಶೆಟ್ಟಿ ಹಾಗೂ ಅವರ ತಾಯಿಯನ್ನು ಗೌರವಿಸಲಾಯಿತು.



ಶೇ.60ರಷ್ಟು ಚಿತ್ರೀಕರಣ ಕಂಪ್ಲಿಟ್

# ಗೋಲ್ಡನ್ ಸ್ಟಾರ್ ಗಣೇಶ್ ಪುತ್ರನಿಗೆ ರಂಜನಿ ರಾಘವನ್ ಆಕ್ಷನ್ ಕಟ್



ಕಿರುತೆರೆ ಫೇಮಸ್ ನಟಿ ರಂಜನಿ ರಾಘವನ್ ಅವರು ನಿರ್ದೇಶಕಿಯಾಗಿ ಸ್ಯಾಂಡಲ್‌ವುಡ್‌ಗೆ ಪಾದಾರ್ಪಣೆ ಮಾಡ್ತಿದ್ದಾರೆ. ನಟಿಯ ನಿರ್ದೇಶನದ ಸಿನಿಮಾದಲ್ಲಿ ಲವ್ಲಿ ಸ್ಟಾರ್ ಪ್ರೇಮ್ ಹಾಗೂ ಗೋಲ್ಡನ್ ಸ್ಟಾರ್ ಗಣೇಶ್ ಪುತ್ರ ವಿಹಾನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ರಂಜನಿ ರಾಘವನ್ ಅವರು ಕಿರುತೆರೆ ಮತ್ತು ಹಿರಿತೆರೆಯಲ್ಲಿ ನಾಯಕಿಯಾಗಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಮೊದಲ ಬಾರಿಗೆ ನಿರ್ದೇಶನ ಮಾಡಿದ್ರೂ ಕೂಡ ಭಿನ್ನವಾಗಿರೋ ಕಥೆ ಯನ್ನೇ ಬರೆದಿದ್ದಾರೆ. ತಂದೆ ಹಾಗೂ ಮಗನ ಬಾಂಧವ್ಯದ ಮನಮುಟ್ಟುವ ಕಥೆ ಹೇಳೋಕೆ ಬರುತ್ತಿದ್ದಾರೆ. ಚಿತ್ರದ ಟೈಟಲ್ ಮತ್ತು ಪೋಸ್ಟರ್ ಸದ್ಯ ಅಭಿಮಾನಿಗಳ ಗಮನ ಸೆಳೆಯುತ್ತಿದೆ. ಚೊಚ್ಚಲ ಚಿತ್ರಕ್ಕೆ ವಿಭಿನ್ನವಾಗಿರೋ ಹೆಸರನ್ನೇ ನಟಿ ಆಯ್ಕೆ ಮಾಡಿದ್ದಾರೆ. 'ಡಿ ಡಿ ಢಿಕ್ಕಿ' ಎಂದು ಹೆಸರಿಟ್ಟಿದ್ದಾರೆ. ಪ್ರೇಮ್ ಮತ್ತು ಗಣೇಶ್ ಪುತ್ರ ವಿಹಾನ್ ಸಿನಿಮಾದಲ್ಲಿ ತಂದೆ ಮತ್ತು ಮಗನಾಗಿ ನಟಿಸಿದ್ದಾರೆ. ಈಗಾಗಲೇ ಶೇ.60ರಷ್ಟು ಚಿತ್ರೀಕರಣ ಮಾಡಿ ಮುಗಿಸಿದ್ದಾರೆ. 'ಕಾಟೇರ' ರೈಟರ್ ಜಡೇಶ್ ಅವರು ಹಂಪಿ ಪಿಕ್ಚರ್ಸ್ ಅಡಿಯಲ್ಲಿ ನಿರ್ಮಾಣಕ್ಕಿಳಿದಿದ್ದಾರೆ. ರಾಮಕೃಷ್ಣ ಹಾಗೂ ಆನಂದ್ ಕುಮಾರ್ ಜೊತೆ ನಿರ್ಮಾಣಕ್ಕೆ ಜಡೇಶ್ ಕೈಜೋಡಿಸಿದ್ದಾರೆ. ರಂಜನಿ ಬರೆದ ಕಥೆ ಇಷ್ಟವಾಗಿ ತಂಡದ ಜೊತೆ ಪ್ರೇಮ್ ಕೈಜೋಡಿಸಿದ್ದಾರೆ. ವಿಶೇಷ ಅಂದ್ರೆ ಈ ಚಿತ್ರಕ್ಕೆ ಇಳಯರಾಜ ಸಂಗೀತ ಸಂಯೋಜನೆಗೆ ಸಾಥ್ ನೀಡಿದ್ದಾರೆ. ಈ ಮೂವರ ಕಾಂಬಿನೇಷನ್‌ನಲ್ಲಿ ಸಿನಿಮಾ ನೋಡಲು ಫ್ಯಾನ್ಸ್ ಕಾಯ್ತಿದ್ದಾರೆ.

# ಕನ್ನಡಕ್ಕೆ ಬಂದ್ರು ಕುಡ್ಲದ ಬೆಡಗಿ

ಕುಡ್ಲದ ಸುಂದರಿ ಪೂಜಾ ಹೆಗ್ಡೆ ಇತ್ತೀಚೆಗೆ ಕನ್ನಡದ ಸಿನಿಮಾದಲ್ಲಿ ನಟಿಸುವ ಆಸಕ್ತಿಯನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದರು. ಉತ್ತಮ ಕಥೆ ಸಿಕ್ಕರೆ ಕನ್ನಡದಲ್ಲಿ ನಟಿಸೋದಾಗಿ ಹೇಳಿದ್ದರು. ಅದರಂತೆ ಈಗ ಸ್ಟಾರ್ ನಟ ಸುದೀಪ್ ಸಿನಿಮಾಗೆ ನಾಯಕಿಯಾಗಿ ಪೂಜಾ ಹೆಗ್ಡೆ ನಟಿಸಲಿದ್ದಾರೆ ಎನ್ನಲಾದ ಸುದ್ದಿಯೊಂದು ಚರ್ಚೆಗೆ ಗ್ರಾಸವಾಗಿದೆ.

ಕನ್ನಡದಲ್ಲಿ ನಟಿಸುವಂತೆ ಪೋಷಕರಿಂದ ಒತ್ತಡವಿದೆ. ನಾನು ಕೂಡ ಹಲವು ಕಥೆಗಳನ್ನು ಕೇಳಿದ್ದೇನೆ. ಆದರೆ ಯಾವುದು ಇಷ್ಟವಾಗಿಲ್ಲ. ಉತ್ತಮ ಕಥೆ ಸಿಕ್ಕಿದ್ದಲ್ಲಿ ಖಂಡಿತಾ ಕನ್ನಡದಲ್ಲಿ ನಟಿಸೋದಾಗಿ ಇಂಗಿತ ವ್ಯಕ್ತಪಡಿಸಿದ್ದರು. ಈ ಬೆನ್ನಲ್ಲೇ ಅವರಿಗೆ ಸುದೀಪ್ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿದೆ ಎನ್ನಲಾಗಿದೆ. ಸುದೀಪ್ ನಟನೆಯ ಮತ್ತು ಅನೂಪ್ ಭಂಡಾರಿ ನಿರ್ದೇಶನದ 'ಬಿಲ್ಲಾ ರಂಗ ಭಾಷಾ' ಚಿತ್ರದ ಶೂಟಿಂಗ್ ನಡೆಯುತ್ತಿದೆ. ಈ ಸಿನಿಮಾಗೆ ಪೂಜಾ ಹೆಗ್ಡೆ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಿಕೊಂಡಿದ್ದಾರೆ ಎನ್ನಲಾದ ಸುದ್ದಿ ಇದೀಗ ಹರಿದಾಡುತ್ತಿದೆ. ಕನ್ನಡದಲ್ಲಿ ಒಳ್ಳೆಯ ಅವಕಾಶಕ್ಕಾಗಿ ಕಾಯ್ತಿದ್ದ ಪೂಜಾಗೆ ಇದೀಗ ಸುದೀಪ್ ಚಿತ್ರ ಒಪ್ಕೊಂಡಿದ್ದಾರೆ ಎನ್ನಲಾಗಿದೆ. ಇದು ನಿಜನಾ ಎಂಬುದನ್ನು ಚಿತ್ರತಂಡ ಮತ್ತು ಪೂಜಾ ಕಡೆಯಿಂದಲೇ ಸ್ಪಷ್ಟನೆ ಸಿಗಬೇಕಿದೆ.

ಒಂದು ವೇಳೆ ಸುದೀಪ್‌ಗೆ ಪೂಜಾ ಹೆಗ್ಡೆ ನಾಯಕಿಯಾಗಿದ್ದಲ್ಲಿ ಫ್ಯಾನ್ಸ್‌ಗೆ ಮನರಂಜನೆ ಗ್ಯಾರಂಟಿ. ಸುದೀಪ್ ಚಿತ್ರದ ಮೂಲಕ ಅವರು ಕನ್ನಡಕ್ಕೆ ಎಂಟ್ರಿ ಕೊಟ್ಟಂತೆ ಆಗಲಿದೆ.

# ಮಗಳ ಅದ್ಧೂರಿ ಹುಟ್ಟುಹಬ್ಬ

ರಿಯಲ್ ಸ್ಟಾರ್ ಉಪೇಂದ್ರ ಅವರ ಮಗಳು ಐಶ್ವರ್ಯಾಗೆ 17ನೇ ವರ್ಷದ ಜನ್ಮದಿನದ ಸಂಭ್ರಮ. ಈ ಹಿನ್ನೆಲೆ ಅದ್ಧೂರಿಯಾಗಿ ಮಗಳ ಬರ್ತ್‌ಡೇಯನ್ನು ಉಪೇಂದ್ರ ದಂಪತಿ ಆಚರಿಸಿದ್ದಾರೆ. ಹ್ಯಾಪಿ ಬರ್ತ್‌ಡೇ ಬೇಬಿ. ಎಂದಿಗೂ ಚೆನ್ನಾಗಿರು, ನಿನ್ನನ್ನು ನೀನು ನಂಬು. ನಾನು ನಿನ್ನನ್ನು ಪ್ರೀತಿಸುತ್ತೇನೆ ಎಂದು ಪ್ರಿಯಾಂಕಾ ಉಪೇಂದ್ರ ಮಗಳಿಗೆ ಇನ್ಸ್ಟಾಗ್ರಾಂ ಪೋಸ್ಟ್‌ನಲ್ಲಿ ವಿಶ್ ಮಾಡಿದ್ದಾರೆ.

ಹೊಸ ಸಿನಿಮಾದ ಪ್ರಚಾರ ಕಾರ್ಯಕ್ಕೆ ಬ್ರೇಕ್ ಕೊಟ್ಟು ಮಗಳ ಬರ್ತ್‌ಡೇಯನ್ನು ಉಪೇಂದ್ರ ಆಚರಿಸಿದ್ದಾರೆ. ಮಗಳಿಗೆ ಕೇಕ್ ತಿನ್ನಿಸಿ ಸಿಹಿ ಮುತ್ತು ಕೊಟ್ಟು ಮುದ್ದು ಮಾಡಿದ್ದಾರೆ ಉಪೇಂದ್ರ ದಂಪತಿ. ಹುಟ್ಟುಹಬ್ಬದ ಸುಂದರ ಫೋಟೋಗಳನ್ನು ಪ್ರಿಯಾಂಕಾ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಬರ್ತ್‌ಡೇಯಂದು ಐಶ್ವರ್ಯಾ ಆಕಾಶ ನೀಲಿ ಬಣ್ಣದ ಡ್ರೆಸ್‌ನಲ್ಲಿ ಮಿಂಚಿದ್ದಾರೆ. ಶಾರ್ಟ್ ಆಗಿ ಹೇರ್ ಕಟ್ ಮಾಡಿಸಿ ಮುದ್ದಾಗಿ ಅವರು ಕಾಣಿಸಿಕೊಂಡಿದ್ದಾರೆ. ನಟನ ಪುತ್ರಿಯ ಜನ್ಮದಿನಕ್ಕೆ ನಟಿ ಮಾನ್ಯಾ ನಾಯ್ಡು, ಹರ್ಷಿಕಾ ಪೂಣಚ್ಚ, ಕೀರ್ತಿ ವಿಷ್ಣುವರ್ಧನ್ ಸೇರಿದಂತೆ ಫ್ಯಾನ್ಸ್ ಕೂಡ ಶುಭಹಾರೈಸಿದ್ದಾರೆ.



ಮಗಳಿಗೆ ಕೇಕ್ ತಿನ್ನಿಸಿ ಸಿಹಿ ಮುತ್ತು ಕೊಟ್ಟಿದ್ದಾರೆ

ಐಶ್ವರ್ಯಾ ಅವರು ಸಾಮಾಜಿಕ ಜಾಲತಾಣದಿಂದ ಅಂತರ ಕಾಯ್ದುಕೊಂಡಿದ್ದಾರೆ. ಅಷ್ಟಾಗಿ ಅವರು ಆಯಕ್ಟೀವ್ ಆಗಿಲ್ಲ. ಆದರೆ ನಟನ ಪುತ್ರ ಆಯುಷ್ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯರಾಗಿದ್ದಾರೆ. ಚಿತ್ರರಂಗದಲ್ಲಿ ಕೆಲಸ ಮಾಡಿ ಗುರುತಿಸಿಕೊಳ್ಳುವ ಮಹದಾಸೆ ಅವರಿಗಿದೆ. ಉಪೇಂದ್ರ ಅವರು ಅರ್ಜುನ್ ಜನ್ಯ ನಿರ್ದೇಶನದ '45' ಸಿನಿಮಾ ಪ್ರಚಾರ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ.

# ಗುಜರಾತ್‌ನ ಗಿಲ್ ಸೇನೆಗೆ ಮತ್ತೊಂದು ವಿಜಯ

ಕೋಲ್ಕತ್ತಾ ನೈಟ್ ರೈಡರ್ಸ್ ಜೊತೆಗಿನ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಭರ್ಜರಿ ಗೆಲುವು ಸಾಧಿಸಿದೆ. ಓಪನರ್ ಬ್ಯಾಟರ್‌ಗಳಾದ ಸಾಯಿ ಸುದರ್ಶನ್ ಹಾಗೂ ಶುಭ್‌ಮನ್ ಗಿಲ್ ಅವರ ಅಮೋಘ ಅರ್ಧಶತಕದ ನೆರವಿನಿಂದ ಗುಜರಾತ್ ಗೆಲುವನ್ನು ಮುಂದುವರೆಸಿದೆ.

ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಅಜಿಂಕ್ಯಾ ರಹಾನೆ ಟಾಸ್ ಗೆದ್ದು ಎದುರಾಳಿ ಗುಜರಾತ್ ಟೈಟನ್ಸ್ ಅನ್ನು ಬ್ಯಾಟಿಂಗ್‌ಗೆ ಆಹ್ವಾನವಿತ್ತರು. ಹೀಗಾಗಿ ಗುಜರಾತ್ ಪರ ಮೊದಲ ಬ್ಯಾಟಿಂಗ್‌ಗೆ ಆಗಮಿಸಿದ ಕ್ಯಾಪ್ಟನ್ ಶುಭ್‌ಮನ್ ಗಿಲ್ ಹಾಗೂ ಸಾಯಿ ಸುದರ್ಶನ್ ಅತ್ಯುತ್ತಮ ಆರಂಭ ಪಡೆದರು. ಭರ್ಜರಿ ಬ್ಯಾಟಿಂಗ್ ಮಾಡಿದ ಗಿಲ್ ಮತ್ತೊಂದು ಅರ್ಧಶತಕ ಬಾರಿಸಿದರು.



ಆರಂಭಿಕ ಬ್ಯಾಟರ್‌ಗಳ ಸ್ಫೋಟಕ ಬ್ಯಾಟಿಂಗ್

ಪಂದ್ಯದಲ್ಲಿ ಕೇವಲ 34 ಎಸೆತ ಎದುರಿಸಿದ ಶುಭ್‌ಮನ್ ಗಿಲ್ 6 ಬೌಂಡರಿ ಹಾಗೂ 1 ಸಿಕ್ಸರ್‌ನಿಂದ 50 ರನ್ ಗಳಿಸಿದರು. ಬಳಿಕ ಬ್ಯಾಟಿಂಗ್ ಮುಂದುವರೆಸಿ ಗಿಲ್ ಒಟ್ಟು 55 ಎಸೆತದಲ್ಲಿ 10 ಫೋರ್, 3 ಸಿಕ್ಸರ್‌ನಿಂದ 90 ರನ್ ಗಳಿಸಿ ಔಟ್ ಆದರು. ಗಿಲ್‌ಗೆ ಒಳ್ಳೆ ಸಾಥ್ ಕೊಟ್ಟ ಸಾಯಿ ಸುದರ್ಶನ್ ಕೂಡ ಹಾಫ್‌ಸೆಂಚುರಿ ಬಾರಿಸಿದರು. ಜೋಶ್ ಬಟ್ಲರ್ ಕೂಡ ಮತ್ತೆ ಅಬ್ಬರಿಸಿ 23 ಎಸೆತದಲ್ಲಿ 8 ಬೌಂಡರಿಗಳಿಂದ

## ಭರ್ಜರಿ ಬ್ಯಾಟಿಂಗ್ ಮಾಡಿ ಅರ್ಧಶತಕ ಬಾರಿಸಿದ ಗಿಲ್, ಸುದರ್ಶನ್

41 ರನ್ ಗಳಿಸಿದ್ದು ತಂಡಕ್ಕೆ ನೆರವಾಯಿತು. ಹೀಗಾಗಿ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 3 ವಿಕೆಟ್‌ಗೆ 198 ರನ್‌ಗಳ ಟಾರ್ಗೆಟ್ ನೀಡಿತ್ತು. ಈ ರನ್‌ಗಳ ಹಿಂದೆ ಬಿದ್ದ ಕೆಕೆಆರ್ ಆರಂಭದಲ್ಲೇ ಆತಂಕಕ್ಕೆ ಒಳಗಾಯಿತು. ಏಕೆಂದರೆ ರಹಮಾನುಲ್ಲಾ ಗುರ್ಬಾಜ್ 1, ಸುನಿಲ್ ನರೈನ್ 17 ರನ್‌ಗೆ ಔಟ್ ಆದರು. ವೆಂಕಟೇಶ್ ಅಯ್ಯರ್ ಮತ್ತೆ ಬ್ಯಾಟಿಂಗ್‌ನಲ್ಲಿ ವಿಫಲರಾಗಿದ್ದು 14ಕ್ಕೆ ಕ್ಯಾಚ್ ಕೊಟ್ಟರು. ಇನ್ನು ಕ್ಯಾಪ್ಟನ್ ಅಜಿಂಕ್ಯಾ ರಹಾನೆ, ಹಾಫ್‌ಸೆಂಚುರಿ ಸಿಡಿಸಿ, ತಂಡವನ್ನು ಗೆಲ್ಲಿಸಲು ಪ್ರಯತ್ನಿಸಿದರೂ ಆದರೆ, ಅದು ಸಾಧ್ಯವಾಗಲಿಲ್ಲ. ಆಯಂಡ್ರೆ ರಸೆಲ್ ಅಬ್ಬರಿಸಲು ಮುಂದಾಗಿದ್ದರು. ಆದ್ರೆ ರಶೀದ್ ಖಾನ್ ಅವಕಾಶ ಮಾಡಿಕೊಡಲಿಲ್ಲ. ರಿಂಕು ಸಿಂಗ್ (17) ಬಳಿಕ ಬಂದ ಎಲ್ಲ ಬ್ಯಾಟರ್‌ಗಳು ಹೀಗೆ ಬಂದು ಹಾಗೇ ಪೆವಿಲಿಯನ್‌ಗೆ ಕಡೆಗೆ ಹೊರಟರು. ಇದರಿಂದ ಕೆಕೆಆರ್ ತವರಿನಲ್ಲೇ ಹೀನಾಯ ಸೋಲು ಕಂಡಿತು. ಗುಜರಾತ್ ಟೈಟನ್ಸ್ 39 ರನ್‌ಗಳಿಂದ ಜಯ ಸಾಧಿಸಿತು.

# ಬಿಸಿಸಿಐ ಕೇಂದ್ರ ಒಪ್ಪಂದದಲ್ಲಿ ಏಕೈಕ ಆಟಗಾರನಿಗೆ ಮುಂಬಡ್ತಿ; ಯಾರು ಆ ಅದೃಷ್ಟಶಾಲಿ

2024-25 ರ ಸೀಸನ್‌ನ ಕೇಂದ್ರ ಗುತ್ತಿಗೆ ಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ಆ ಪ್ರಕಾರ ಬಿಸಿಸಿಐ ಒಪ್ಪಂದದಲ್ಲಿ ಒಟ್ಟು 34 ಆಟಗಾರರು ಸ್ಥಾನ ಪಡೆದಿದ್ದಾರೆ. ಇದರಲ್ಲಿ 9 ಆಟಗಾರರಿಗೆ ಇದೇ ಮೊದಲ ಬಾರಿಗೆ ಬಿಸಿಸಿಐನ ಕೇಂದ್ರ ಒಪ್ಪಂದದಲ್ಲಿ ಸ್ಥಾನ ಸಿಕ್ಕಿದೆ. ಇವರ ಜೊತೆಗೆ ಶ್ರೇಯಸ್ ಅಯ್ಯರ್ ಮತ್ತು ಇಶಾನ್ ಕಿಶನ್‌ಗೂ ಬಿಸಿಸಿಐನಿಂದ ಕ್ಷಮಾಧಾನ ಸಿಕ್ಕಿದೆ.

ಆದರೆ, ಈ ಬಾರಿ ಬಿಸಿಸಿಐ ತನ್ನ ಕೇಂದ್ರ ಗುತ್ತಿಗೆ ಪಟ್ಟಿಯಲ್ಲಿ ಒಬ್ಬ ಆಟಗಾರನಿಗೆ ಮಾತ್ರ ಬಡ್ತಿ ನೀಡಿದೆ. ಕಾರು ಅಪಘಾತದಲ್ಲಿ ಸಾವು ಗೆದ್ದು ಬಂದು ಟೀಂ ಇಂಡಿಯಾದಲ್ಲೂ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿರುವ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಬ್ ಪಂತ್‌ಗೆ ಬಿ ಗ್ರೇಡ್‌ನಿಂದ ಎ ಗ್ರೇಡ್‌ಗೆ ಬಡ್ತಿ ನೀಡಲಾಗಿದೆ. ಕಳೆದ ಕೆಲವು ವರ್ಷಗಳಿಂದ ರಿಷಭ್ ಪಂತ್ ಎಂತಹ ಆಟಗಾರ ಎಂಬುದು ಸಾಬೀತಾಗಿದೆ. 2022 ರಲ್ಲಿ ಸಂಭವಿಸಿದ ಮಾರಕ ಕಾರು ಅಪಘಾತವು ಪಂತ್ ಅವರ ವೃತ್ತಿಜೀವನದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿತು, ಆದರೆ ಅವರು ಅದ್ಭುತ ಪುನರಾಗಮನ ಮಾಡಿ ಅಸಾಧ್ಯವನ್ನು ಸಾಧ್ಯವಾಗಿಸಿದರು. ಅಲ್ಲದೆ ಟೀಂ ಇಂಡಿಯಾ 2024 ರ ಟಿ20 ವಿಶ್ವಕಪ್ ಗೆಲ್ಲುವಲ್ಲು ಪಂತ್ ಪ್ರಮುಖ ಪಾತ್ರವಹಿಸಿದ್ದರು.

ಇದು ಮಾತ್ರವಲ್ಲದೆ 2025 ರ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದ ಭಾರತ ತಂಡದ ಭಾಗವೂ ಆಗಿದ್ದರು. ಬಿಸಿಸಿಐನ ಗ್ರೇಡ್ ಎ ಕೇಂದ್ರ ಒಪ್ಪಂದವು ಆಟಗಾರನಿಗೆ ಕೇವಲ ಆರ್ಥಿಕ ಪ್ರತಿಫಲವಲ್ಲ, ಬದಲಿಗೆ ಆಟಗಾರನ ಮೇಲಿನ ಮಂಡಳಿಯ ನಂಬಿಕೆ ಮತ್ತು ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ಬಿಸಿಸಿಐ ವಾರ್ಷಿಕವಾಗಿ ಬಿ ಗ್ರೇಡ್ ಆಟಗಾರರಿಗೆ 3 ಕೋಟಿ ರೂ. ಮತ್ತು ಎ ಗ್ರೇಡ್ ಆಟಗಾರರಿಗೆ 5 ಕೋಟಿ ರೂ. ನೀಡುತ್ತದೆ. ಇದರರ್ಥ ಈ ಬಾರಿ ಪಂತ್ ಬಿಸಿಸಿಐನಿಂದ 3 ಕೋಟಿ ರೂ.ಗಳ ಬದಲಿಗೆ 5 ಕೋಟಿ ರೂ.ಗಳನ್ನು ಪಡೆಯಲಿದ್ದಾರೆ. ಕಳೆದ ಬಾರಿಯಂತೆ ಈ ಬಾರಿಯೂ ಬಿಸಿಸಿಐ ಒಟ್ಟು 6 ಆಟಗಾರರನ್ನು ಎ ಗ್ರೇಡ್‌ನಲ್ಲಿ ಸೇರಿಸಿಕೊಂಡಿದೆ. ಮೊಹಮ್ಮದ್ ಸಿರಾಜ್, ಕೆಎಲ್ ರಾಹುಲ್, ಶುಭಮನ್ ಗಿಲ್, ಹಾರ್ದಿಕ್ ಪಾಂಡ್ಯ ಮತ್ತು ಮೊಹಮ್ಮದ್ ಶಮಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.



# ಮೊದಲು ಕಿತ್ತಾಟ ಆಮೇಲೆ ಸ್ನೇಹಹಸ್ತ



ಇಂಡಿಯನ್ ಪ್ರೀಮಿಯರ್ ಲೀಗ್‌ನ 37ನೇ ಪಂದ್ಯವು ಆಟಕ್ಕಿಂತ ಆಟಗಾರರ ನಡುವಣ ಕಿತ್ತಾಟದಿಂದ ಸಖತ್ ಸುದ್ದಿಯಾಗಿತ್ತು. ಮುಲ್ಲನ್‌ಪುರ್‌ನ ಎಂವೈಎಸ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದ ನಡುವೆ ಪಂಜಾಬ್ ಕಿಂಗ್ಸ್ ತಂಡದ ಸ್ಪಿನ್ನರ್ ಹರ್‌ಪ್ರೀತ್ ಬ್ರಾರ್ ಹಾಗೂ ವಿರಾಟ್ ಕೊಹ್ಲಿ ಮಾತಿನ ಚಕಮಕಿ ನಡೆಸಿದ್ದರು. ಈ ವೇಳೆ ನಾನು 20 ವರ್ಷದಿಂದ ಇಲ್ಲಿದ್ದೀನಿ. ನಿನ್ನ ಕೋಚ್ ಕೂಡ ನನಗೆ ಗೊತ್ತಿದೆ ಎಂದು ವಿರಾಟ್ ಕೊಹ್ಲಿ ತಿರುಗೇಟು ನೀಡಿದ್ದರು. ಕಿಂಗ್ ಕೊಹ್ಲಿಯ ಈ ಹೇಳಿಕೆಯು ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಆದರೆ ಈ ಕಿತ್ತಾಟವನ್ನು ವಿರಾಟ್ ಕೊಹ್ಲಿ ಮೈದಾನದಲ್ಲೇ ಬಿಟ್ಟಿದ್ದಾರೆ. ಅಷ್ಟೇ ಅಲ್ಲದೆ ಪಂದ್ಯ ಮುಗಿದ ಬಳಿಕ ಹರ್‌ಪ್ರೀತ್ ಬ್ರಾರ್ ಹಾಗೂ ಕೊಹ್ಲಿ ಭೇಟಿಯಾಗಿದ್ದಾರೆ. ಈ ವೇಳೆ ಸ್ನೇಹಹಸ್ತ ಚಾಚುವ ಮೂಲಕ ವಿರಾಟ್ ಕೊಹ್ಲಿ ಮತ್ತೆ ಹರ್‌ಪ್ರೀತ್ ಬ್ರಾರ್ ಅವರ ಕಾಲೆಳೆಯುತ್ತಿರುವ ವಿಡಿಯೋವನ್ನು ಪಂಜಾಬ್ ಕಿಂಗ್ಸ್ ತನ್ನ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ. ಇದೀಗ ವಿರಾಟ್ ಕೊಹ್ಲಿಯ ಈ ನಡೆಗೆ ಅಭಿಮಾನಿಗಳು ಭಾರೀ ಮೆಚ್ಚುಗೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇನ್ನು ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಪಂಜಾಬ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 157 ರನ್ ಕಲೆಹಾಕಿತು.

# ಇಷ್ಟು ಕೆಟ್ಟ ತಂಡವನ್ನು ನಾ ನೋಡಿಲ್ಲ

ಸಿಎಸ್‌ಕೆ ವಿರುದ್ಧ ತಿರುಗಿ ನಿಂತ ರೈನಾ



ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸದಾ ಬೆಂಬಲಿಸುತ್ತಾ ಬಂದವರಲ್ಲಿ ಸುರೇಶ್ ರೈನಾ ಕೂಡ ಒಬ್ಬರು. ಸಿಎಸ್‌ಕೆ ತಂಡದ ಮಾಜಿ ಆಟಗಾರನಾಗಿರುವ ರೈನಾ, ಧೋನಿ ಪಡೆಯನ್ನು ಗುರಿಯಾಗಿಸಿ ಯಾವುದೇ ಹೇಳಿಕೆಗಳನ್ನು ನೀಡುತ್ತಿರಲಿಲ್ಲ. ಆದರೆ ಈ ಬಾರಿಯ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ರದರ್ಶನ ನೋಡಿ ರೈನಾ ಹರಿಹಾಯ್ದಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು 9 ವಿಕೆಟ್‌ಗಳಿಂದ ಹೀನಾಯವಾಗಿ ಸೋತಿದೆ. ಇದೀಗ ಸಿಎಸ್‌ಕೆ ತಂಡದ ಪ್ಲೇಆಫ್ ಹಾದಿ ತೂಗುಯ್ಯಾಲೆಯಲ್ಲಿದೆ.

ಇತ್ತ ಆಡಿರುವ 8 ಪಂದ್ಯಗಳಲ್ಲಿ 6 ಮ್ಯಾಚ್‌ಗಳಲ್ಲಿ ಸೋತಿರುವ ಸಿಎಸ್‌ಕೆ ತಂಡವನ್ನು ಸುರೇಶ್ ರೈನಾ ತರಾಟೆಗೆ ತೆಗೆದುಕೊಂಡಿದ್ದಾರೆ.

ಖಾಸಗಿ ಚಾನೆಲ್ ಚರ್ಚೆಯಲ್ಲಿ ಮಾತನಾಡಿದ ಸುರೇಶ್ ರೈನಾ, ಇಂತಹದೊಂದು ಕೆಟ್ಟ ತಂಡವನ್ನು ನಾನು ಇದುವರೆಗೆ ನೋಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಂಡದ ಆಡಳಿತ ಮಂಡಳಿಯು ಹರಾಜನ್ನು ಸರಿಯಾಗಿ ನಡೆಸಲಿಲ್ಲ. ಈಗ ಅದರ ಪರಿಣಾಮಗಳನ್ನು ಅನುಭವಿಸಬೇಕಾಗಿದೆ.

ಸಿಎಸ್‌ಕೆ ಫ್ರಾಂಚೈಸಿಯು ಮೆಗಾ ಹರಾಜಿನಲ್ಲಿ ರಿಷಭ್ ಪಂತ್, ಶ್ರೇಯಸ್ ಅಯ್ಯರ್ ಮತ್ತು ಕೆಎಲ್ ರಾಹುಲ್ ಅವರಂತಹ ಆಟಗಾರರನ್ನು ಬಿಟ್ಟಿದ್ದರು. ಮುಖ್ಯ ಕೋಚ್ ಸೇರಿದಂತೆ ತಂಡದ ಆಡಳಿತ ಮಂಡಳಿಯು ಉತ್ತಮ ಆಟಗಾರರನ್ನು ಹಿಂಬಾಲಿಸಲಿಲ್ಲ. ಹರಾಜಿನಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಆಟಗಾರರು ಲಭ್ಯವಿದ್ದರೂ ಸಿಎಸ್‌ಕೆ ಮಾತ್ರ ಆ ಆಟಗಾರರ ಖರೀದಿಗೆ ಆಸಕ್ತಿ ತೋರಲಿಲ್ಲ. ಇದರಿಂದಾಗಿಯೇ ಚೆನ್ನೈ ಸೂಪರ್ ಕಿಂಗ್ಸ್ ತಂಡ ಹೆಣಗಾಡುತ್ತಿದೆ ಎಂದು ಸುರೇಶ್ ರೈನಾ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಸಿಎಸ್‌ಕೆ ತಂಡದಲ್ಲಿ ಆಕ್ರಮಣಕಾರಿ ಕ್ರಿಕೆಟ್ ಕೊರತೆ ಎದ್ದು ಕಾಣುತ್ತಿದೆ. ಅಲ್ಲದೆ ತಂಡ ಉದ್ದೇಶದ ಕೊರತೆಯಿಂದಾಗಿ ಪಂದ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಮೆಗಾ ಹರಾಜಿನಲ್ಲಿ ಉತ್ತಮ ಆಟಗಾರರನ್ನು ಸಹಿ ಮಾಡುವಲ್ಲಿ ವಿಫಲರಾಗಿರುವುದು. ಪ್ರಸ್ತುತ ತಂಡದ ಪ್ರದರ್ಶನ ನಿಜಕ್ಕೂ ನಿರಾಶಾದಾಯಕ ಎಂದು ಸುರೇಶ್ ರೈನಾ ಬೇಸರ ಹೊರಹಾಕಿದ್ದಾರೆ. ಅಂದಹಾಗೆ ಸುರೇಶ್ ರೈನಾ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿದ್ದಾಗ ಎಂದಿಗೂ ವಿಫಲವಾಗಿರಲಿಲ್ಲ ಎಂಬುದು ವಿಶೇಷ. ಅಂದರೆ ರೈನಾ ಕಣಕ್ಕಿಳಿದ ಸೀಸನ್‌ಗಳಲ್ಲಿ ಸಿಎಸ್‌ಕೆ ಪ್ಲೇಆಫ್ ಹಂತಕ್ಕೇರಿದೆ. ಸುರೇಶ್ ರೈನಾ ಚೆನ್ನೈ ಸೂಪರ್ ಕಿಂಗ್ಸ್ ಪರ 11 ಸೀಸನ್‌ಗಳನ್ನು ಆಡಿದ್ದರು. ಈ ಹನ್ನೊಂದು ಸೀಸನ್‌ಗಳಲ್ಲೂ ಸಿಎಸ್‌ಕೆ ತಂಡವು ಪ್ಲೇಆಫ್‌ಗೆ ಎಂಟ್ರಿ ಕೊಟ್ಟಿತ್ತು. ಅಲ್ಲದೆ ಈ ವೇಳೆ 4 ಬಾರಿ ಚಾಂಪಿಯನ್ ಪಟ್ಟವನ್ನು ಸಹ ಅಲಂಕರಿಸಿದ್ದರು. ಇದೀಗ ಸುರೇಶ್ ರೈನಾ ಅವರಂತಹ ಮ್ಯಾಚ್ ವಿನ್ನರ್ ಕೊರತೆಯಿಂದ ಸಿಎಸ್‌ಕೆ ತಂಡ ಸಂಕಷ್ಟಕ್ಕೆ ಸಿಲುಕಿದೆ.

# ಆರ್‌ಸಿಬಿ ವಿರುದ್ಧದ ಪಂದ್ಯದಿಂದ ಹೊರಬಿದ್ದ ರಾಜಸ್ಥಾನ್ ನಾಯಕ

2025 ರ ಐಪಿಎಲ್‌ನಲ್ಲಿ ಸತತ ಸೋಲುಗಳಿಂದ ಕಂಗೆಟ್ಟು ಟೂರ್ನಿಯಿಂದಲೇ ಹೊರಬೀಳುವ ಆತಂಕದಲ್ಲಿರುವ ರಾಜಸ್ಥಾನ್ಸ್ ತಂಡಕ್ಕೆ ಮತ್ತೊಂದು ಆಘಾತ ಎದುರಾಗಿದೆ. ಇಂಜುರಿಯಿಂದ ಬಳಲುತ್ತಿರುವ ತಂಡದ ಖಾಯಂ ನಾಯಕ ಸಂಜು ಸ್ಯಾಮ್ಸನ್ ಇದೀಗ ಆರ್‌ಸಿಬಿ ವಿರುದ್ಧದ ಮುಂದಿನ ಪಂದ್ಯದಿಂದ ಹೊರಗುಳಿದಿದ್ದಾರೆ. ವಾಸ್ತವವಾಗಿ ಗಾಯದ ಕಾರಣದಿಂದಾಗಿ ಸಂಜು ಸ್ಯಾಮ್ಸನ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಆಡಲು ಸಾಧ್ಯವಾಗಲಿಲ್ಲ. ಈಗ ಏಪ್ರಿಲ್ 24 ರಂದು ಆರ್‌ಸಿಬಿ ವಿರುದ್ಧದ ಪಂದ್ಯದಿಂದ ಸ್ಯಾಮ್ಸನ್ ಅವರನ್ನು ಕೈಬಿಡಲಾಗಿದೆ. ಸಂಜು ಸ್ಯಾಮ್ಸನ್ ಪ್ರಸ್ತುತ ಚೇತರಿಕೆಯ ಹಂತದಲ್ಲಿದ್ದು, ಅವರು ತಂಡದ ತವರು ನೆಲೆಯಲ್ಲಿಯೇ ಉಳಿಯಲಿದ್ದಾರೆ ಎಂದು ರಾಜಸ್ಥಾನ ರಾಯಲ್ಸ್ ತಂಡದ ಆಡಳಿತ ಮಂಡಳಿ ತಿಳಿಸಿದೆ. ಮುಂದಿನ ಪಂದ್ಯಕ್ಕಾಗಿ ರಾಜಸ್ಥಾನ್ ರಾಯಲ್ಸ್ ತಂಡ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದು, ಸಂಜು ಸ್ಯಾಮ್ಸನ್ ಮಾತ್ರ ತಂಡದಲ್ಲಿ ಕಾಣಿಸಿಕೊಂಡಿಲ್ಲ. ತಂಡದ ಆಡಳಿತ ಮಂಡಳಿಯು ಸಂಜು ಸ್ಯಾಮ್ಸನ್ ಅವರ ಗಾಯದ ಮೇಲೆ ನಿಗಾ ಇಟ್ಟಿದ್ದು, ಅವರು ಸಂಪೂರ್ಣ ಫಿಟ್ ಆದ ನಂತರವೇ ತಂಡಕ್ಕೆ ಮರಳುತ್ತಾರೆ ಎಂಬ ಮಾಹಿತಿ ನೀಡಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966